ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com


ಸಂಪುಟ 6 ಸಂಚಿಕೆ 30
ಜುಲೈ 22, 2012

ಪುಟ 16 ರೂ. 5/-



ಜನರ ಬದುಕಿನ ಮೇಲೆ ಗದಾ ಪ್ರಹಾರ
ಬಿಜೆಪಿಯ 49 ತಿಂಗಳ ಸರ್ಕಾರ









ಬದಲಾದ ಮುಖ್ಯಮಂತ್ರಿ
ಬದಲಾಗದ
ಕಾರ್ಯಸೂಚಿ



ಯಾವ ಐಸ್‌ಕ್ರೀಂ ಬಗ್ಗೆ
ಮಾತನಾಡುತ್ತಿದ್ದಾರೆ ಚಿದಂಬರಂ



"ಭೂಸುಧಾರಣಾ ಕಾಯ್ದೆ : ಪ್ರಗತಿ ವಿರೋಧಿ ತಿದ್ದುಪಡಿಗೆ ಪ್ರತಿರೋಧ ಒಡ್ಡಿ"

- ಡಾ.ಸೂರ್ಯಕಾಂತ ಮಿಶ್ರ



ಕಾರ್ಮಿಕ ವರ್ಗದ ರಾಜ್ಯವ್ಯಾಪಿ ಮುಷ್ಕರ

"ದೇಶದ ಕಾರ್ಪೋರೇಟ್ ಬಂಡವಾಳ–ಅಂತರಾಷ್ಟ್ರೀಯ ಹಣಕಾಸು ಬಂಡವಾಳಗಳ ಹುನ್ನಾರದಿಂದ ಹೊಸ ರೀತಿಯ ಬಂಡವಾಳಶಾಹಿ ಭೂ ಮಾಲೀಕ ವರ್ಗ ಸೃಷ್ಟಿಯಾಗುತ್ತಿದೆ."

– ಡಾ|| ಸೂರ್ಯಕಾಂತ ಮಿಶ್ರಾ

ಭೂಮಿ ಇಲ್ಲದ ಬಡವರಿಗೆ ಭೂಮಿ ನೀಡುವ 'ಭೂ ಸುಧಾರಣೆ' ಎಂಬುದು ನಮ್ಮ ಸಮಾಜವನ್ನು ಕಾಡುತ್ತಿರುವ ನಾನಾ ಸಮಸ್ಯೆಗಳಿಗೆ ಒಂದು ದಿವ್ಯ ಔಷಧ. ಆದರೆ ಇಂದು ಬಾಯುಪಚಾರಕ್ಕೂ ಆಳುವ ಸರ್ಕಾರಗಳು ಭೂ ಸುಧಾರಣೆಯ ಮಾತಾಡುವುದನ್ನು ನಿಲ್ಲಿಸಿವೆ. ಬದಲಿಗೆ ರೈತನ ಭೂಮಿಗೆ ಬಾಯಿಕ್ಕಿವೆ. ಇಂಥಾ ಹೊತ್ತಲ್ಲಿ ಈ ಪ್ರಶ್ನೆಯ ಮೇಲೆ ಇತ್ತೀಚೆಗೆ ರಾಜ್ಯ ಮಟ್ಟದ ಸಮಾವೇಶವೊಂದು ನಡೆಯಿತು.....ಅಲ್ಲೇನು ಚರ್ಚೆಯಾಯಿತು? ಏನು ತೀರ್ಮಾನವಾಯಿತು ? ಓದಿ

ಯಶವಂತ. ಟಿ

"ದೇಶದ ಕಾರ್ಪೋರೇಟ್ ಬಂಡವಾಳ, ಅಂತರಾಷ್ಟ್ರೀಯ ಹಣಕಾಸು ಬಂಡವಾಳಗಳ ಹುನ್ನಾರದಿಂದ ಹೊಸ ರೀತಿಯ ಬಂಡವಾಳಶಾಹಿ ಭೂ ಮಾಲೀಕ ವರ್ಗ ಸೃಷ್ಟಿಯಾಗುತ್ತಿದೆ." ಎಂದು ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರೂ ಪಶ್ಚಿಮ ಬಂಗಾಳದ ಮಾಜಿ ಗ್ರಾಮೀಣಾಭಿವೃದ್ಧಿ ಸಚಿವರೂ ಆದ ಡಾ: ಸೂರ್ಯ ಕಾಂತ ಮಿಶ್ರ ಹೇಳಿದರು. ಅವರು ಜುಲೈ 7. 2012 ರಂದು ಬೆಂಗಳೂರಿನ ಎನ್‌ಜಿಒ ಸಭಾಂಗಣದಲ್ಲಿ "ಭೂ ಸುಧಾರಣೆಗಳ ಪ್ರತಿಗಾಮಿ ತಿದ್ದುಪಡಿ ವಿರೋಧಿಸಿ" ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ಜಂಟಿಯಾಗಿ ಸಂಘಟಿಸಿದ್ದ ರಾಜ್ಯ ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತಾನಾಡುತ್ತಿದ್ದರು.

ಮುಂದುವರಿದು ಮಾತನಾಡಿದ ಅವರು "ದೇಶಕ್ಕೆ ಸ್ವಾತಂತ್ರ್ಯ ಬಂದ 65 ವರ್ಷಗಳ ನಂತರವೂ ಭೂಮಿ ಪ್ರಶ್ನೆ ಒಂದು ಮೂಲಭೂತ ಪ್ರಶ್ನೆಯಾಗಿಯೇ ಉಳಿದಿದೆ. ಕ್ರಾಂತಿಕಾರಿ ಭೂ ಸುಧಾರಣೆ ಇಲ್ಲದೆ ಶಿಕ್ಷಣ, ಆರೋಗ್ಯ, ಉದ್ಯೋಗ, ಕೈಗಾರಿಕಾ ಅಭಿವೃದ್ಧಿ ಸಾಧ್ಯವಿಲ್ಲ. ಎಡಪಕ್ಷಗಳು ಆಡಳಿತ ನಡೆಸಿದ ರಾಜ್ಯಗಳಾದ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ ಸೇರಿದಂತೆ ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ ಇನ್ನೆಲ್ಲೂ ಭೂಸುಧಾರಣೆ ಆಗಿಲ್ಲ. ಬದಲಾಗಿ ಈ ಸಮಸ್ಯೆ ಮತ್ತಷ್ಟು ಉಲ್ಬಣಗೊಂಡಿದೆ.

1947ರಲ್ಲಿ ಸ್ವಾತಂತ್ರ್ಯ ಬಂದಂದಿನಿಂದ 1991 ರವರೆಗೆ ಅನುಸರಣೆ ಮಾಡುತ್ತಿದ್ದ ಆರ್ಥಿಕ ನೀತಿಗಳ ಧೋರಣೆ 1991 ರ ಹೊಸ ಆರ್ಥಿಕ ನೀತಿಗಳ ಅನುಷ್ಠಾನದೊಂದಿಗೆ ಬದಲಾಯಿತು. ಈ ವಿಷಯವನ್ನು ಅಖಿಲ ಭಾರತ ಕಿಸಾನ್ ಸಭಾ ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಅಮೂಲಾಗ್ರವಾಗಿ ವಿಮರ್ಶೆಗೊಳಪಡಿಸಿತು ಮತ್ತು ಪರ್ಯಾಯ ನೀತಿಗಳನ್ನು ರೂಪಿಸಿ ಚಳುವಳಿ ನಡೆಸುತ್ತಿದೆ. ಮತ್ತೆ ಈ ವಿಷಯದ ಪುನರ್‌ವಿಮರ್ಶೆಗೆ ಭುವನೇಶ್ವರದಲ್ಲಿ ಸಭೆ ಸೇರುವ ಉದ್ದೇಶವಿದೆ " ಎಂದರು.

ರೈತರ ಆತ್ಮ ಹತ್ಯೆಗಳ ಸರಣಿ

ಸ್ವಾತಂತ್ರ್ಯನಂತರ ವ್ಯಾಪಕವಾಗಿ ಕೇಳಿ ಬರದಿದ್ದ ವಿಷಯವಾದ ರೈತರ ಆತ್ಮಹತ್ಯೆಯು ಜಾಗತೀಕರಣ ನೀತಿಗಳ ನಂತರ ನಾವು ಕಾಣುವಂತಾಯಿತು. ಅಧಿಕೃತ ಅಂಕಿ ಅಂಶಗಳ ಪ್ರಕಾರವೇ 1995 ರಿಂದ ಇಲ್ಲಿಯವರೆಗೆ ಸು. 2.70 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈಗ ಇಡೀ ವಿಶ್ವವನ್ನು ಆವರಿಸಿರುವ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ ಇದು ಇನ್ನಷ್ಟು ಉಲ್ಬಣಗೊಂಡಿದೆ. 'ಭಾರತ–ಅಮೇರಿಕಾ ರಕ್ಷಣಾ ಚೌಕಟ್ಟು ಒಪ್ಪಂದ'ದ ಹಲವು ಅಂಶಗಳಲ್ಲಿ ಒಂದು ಅಂಶವಾಗಿರುವ 'ಕೃಷಿ ಜ್ಞಾನ ಹಂಚಿಕೆ ಮುತುವರ್ಜಿ' ಉಲ್ಬಣಗೊಳ್ಳುತ್ತಿರುವ ರೈತರ ಆತ್ಮಹತ್ಯೆಗಳಲ್ಲಿ ಕೂಡ ಪಾತ್ರ ವಹಿಸುತ್ತಿದೆ. ಭಾರತದ ರೈತರ, ಕೃಷಿ ರಂಗದ ಸಮಸ್ಯೆಗಳಿಗೆ ಆಮೇರಿಕ, ಯೂರೋಪುಗಳು ಸೂಚಿಸುವ ಪರಿಹಾರಗಳನ್ನು ಒಪ್ಪಿಕೊಂಡು ಜಾರಿಗೊಳಿಸಲು ಆಸಕ್ತಿ ವಹಿಸಲಾಗುತ್ತಿದೆ." ಎಂದು ಅವರು ಹೇಳಿದರು.

ಕರ್ನಾಟಕದ ಭೂ ಸುಧಾರಣೆ

ರೈತರು ಎರಡು ಕಾರಣಗಳಿಗಾಗಿ ಮಾರುಟ್ಟೆಗೆ ಹೋಗುತ್ತಾರೆ. ಒಂದನೆಯದು ತಾವು ಬೆಳೆದ ಉತ್ಪನ್ನಗಳನ್ನು ಮಾರಾಟ ಮಾಡಲು. ಇನ್ನೊಂದು ಬೆಳೆ ಬೆಳೆಯಲು ಬೇಕಾದ ಸಾಮಾಗ್ರಿಗಳನ್ನು ಕೊಳ್ಳಲು. ಎರಡೂ ಸಂದರ್ಭಗಳಲ್ಲಿಯೂ ಸ್ಥಳೀಯ ಶಕ್ತಿಗಳಲ್ಲದೇ ಅಂತರಾಷ್ಟ್ರೀಯ ಶಕ್ತಿಗಳು ಮಾರುಕಟ್ಟೆಯನ್ನು ನಿಯಂತ್ರಿಸುತ್ತಿವೆ. ಈಗ ಕರ್ನಾಟಕದಲ್ಲಿ ಚರ್ಚಿಸುತ್ತಿರುವ ಭೂ ಸಂಬಂಧಗಳ ಪ್ರಶ್ನೆ ಇಡೀ ಭಾರತದಾದ್ಯಂತ ಇದೆ. ಅಷ್ಟೇ ಅಲ್ಲ ಕೃಷಿ ಪ್ರಧಾನ ದೇಶಗಳಾದ ಆಫ್ರಿಕಾ, ಲ್ಯಾಟಿನ್ ಆಮೇರಿಕಾ, ಏಷ್ಯಾ ಮತ್ತಿತರ ದೇಶಗಳಲ್ಲೂ ಇದೆ. ದೇವರಾಜು ಅರಸು ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಅರೆಬೆಂದ ನಾಮ್–ಕಾ–ವಾಸ್ತೆ ಭೂ ಸುಧಾರಣಾ ಕಾನೂನು ಜಾರಿ ಮಾಡಲಾಯಿತು. ಇದರಲ್ಲಿ ಇದ್ದ ಕೆಲವು ಪ್ರಗತಿಪರ ಅಂಶಗಳ ಕಾರಣದಿಂದ ವಿತರಣಾ ಸಮಿತಿಗಳ ಮೂಲಕ ಗೇಣಿದಾರರಿಗೆ ಭೂಮಿ, ವಸತಿ ಹೀನರಿಗೆ ವಸತಿ ಕೆಲವೊಂದು ಕಡೆ ಪಡೆಯಲು ಸಾಧ್ಯವಾಯಿತು. 1990ರ ನಂತರ ಪಕ್ಕಾ ವಿರುದ್ಧವಾದ ವರ್ತನೆಗಳನ್ನು ನಾವು ನೋಡುವಂತಾಗಿದೆ.

ರೈತ ಯಾರು ? ಕಂಪನಿಗಳಿಗೇಕೆ ಈ ಪಟ್ಟ ?

ಯಾರನ್ನ ರೈತ ಎಂದು ಕರೆಯಬೇಕು ಎಂಬ ಪ್ರಶ್ನೆ ಎಐಕೆಎಸ್ ಸ್ಥಾಪನೆ ಸಂದರ್ಭದಲ್ಲೂ ಚರ್ಚಿಸಲಾದ ಅಂಶ, ಆಮೇರಿಕಾ ಮುಂತಾದ ಅಭಿವೃದ್ಧಿ ದೇಶಗಳನ್ನು ತೋರಿ ವ್ಯವಸಾಯ ಮತ್ತು ಜನರ ವಿಪರೀತ ಅವಲಂಬನೆ ಕಡಿತ ಮಾಡಲು ವ್ಯವಸಾಯ ಮತ್ತು ರೈತ ಎಂಬುದನ್ನು ಪುನರ್ ವ್ಯಾಖ್ಯಾನ ಮಾಡುತ್ತಿದ್ದೇವೆ ಎನ್ನುತ್ತಿದ್ದಾರೆ. ಆಮೇರಿಕದಲ್ಲಿ ಶೇ. 3 ರಷ್ಟು ಮಾತ್ರ ಕೃಷಿ ಅವಲಂಬಿತರು ಇದ್ದಾರೆ ಎಂದು ಅವರು ಹೇಳುತ್ತಾರೆ. ಆದರೆ ಕೃಷಿ ಪರಿಭಾಷೆಗೆ ಸಂಸ್ಕರಣೆ, ಮಾರ್ಕೆಂಟಿಂಗ್ ಮುಂತಾದ ವಿಷಯಗಳ ಸೇರ್ಪಡೆಯಿಂದ ಇದು 27 % ಕ್ಕೆ ಏರಿದೆ ಎಂಬುದನ್ನು ಮರೆಮಾಚುತ್ತಾರೆ. ಕೃಷಿ ಆಧಾರಿತ ಕೈಗಾರಿಕೆಗಳನ್ನು ವ್ಯವಸಾಯದ ವ್ಯಾಪ್ತಿಗೆ ಸೇರಿಸುವ ಪುನರ್ ವ್ಯಾಖ್ಯಾನ, ದೊಡ್ಡ ದೊಡ್ಡ ಕಂಪನಿಗಳನ್ನು ವ್ಯವಸಾಯದ ವ್ಯಾಪ್ತಿಗೆ ಒಳಪಡುವಂತೆ ಮಾಡುತ್ತದೆ. ಹೀಗಾದರೆ ರೈತರು ಎಲ್ಲಿಗೆ ಹೋಗಬೇಕು. ಈ ರೀತಿ ಭೂಮಿಯು ಸೇರಿದಂತೆ ಅವರ ಎಲ್ಲಾ ವ್ಯವಸಾಯ ಸಂಬಂಧಿ ಕೆಲಸಗಳಿಂದ ರೈತರನ್ನು ಒಕ್ಕಲೆಬ್ಬಿಸಲಾಗುತ್ತಿದೆ.



ದೇಶದ ಕಾರ್ಪೋರೇಟ್ ಬಂಡವಾಳವು, ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಜೊತೆ ಸೇರಿ ಈ ಹುನ್ನಾರವನ್ನು ರೂಪಿಸಿ ಹೊಸ ರೀತಿಯ ಬಂಡವಾಳಶಾಹಿ ಭೂ ಮಾಲೀಕ ವರ್ಗವನ್ನು ಸೃಷ್ಟಿಸುತ್ತಿದೆ.

ಜಾಗತೀಕರಣದ ನೀತಿಗಳ ಹಿನ್ನಲೆಯಲ್ಲಿ ಸಾಲ ನೀಡಿಕೆ–ಹೂಡಿಕೆ ಸಂಬಂಧ ಶಿಪಾರಸ್ಸು ಮಾಡಿರುವ ನರಸಿಂಹಂ ಕಮಿಟಿ ಅದ್ಯತಾ ಕ್ಷೇತ್ರಕ್ಕೆ ನೀಡುತ್ತಿರುವ ಸಾಲವನ್ನು ಕಡಿಮೆ ಮಾಡಿ ಎಂಬ ಸಲಹೆ ನೀಡಿದೆ. ಕೃಷಿಯನ್ನು ಕೈಗಾರಿಕೆ ಆಗಿ ಪರಿಗಣಿಸಬೇಕು ಇದು ಅಭಿವೃದ್ಧಿ ಎನ್ನುವ ದೃಷ್ಟಿಯಲ್ಲಿ ಈ ಶಿಪಾರಸ್ಸು ಕೋಳಿ ಸಾಕಣೆ, ಹೈನುಗಾರಿಕೆ, ಪುಷ್ಪೋದ್ಯಮ, ಮೀನುಗಾರಿಕೆ, ತೋಟಗಾರಿಕೆ ಮುಂತಾದ ಉದ್ಯಮಗಳ ಬಗ್ಗೆ ಮಾತ್ರ ಮಾತನಾಡುತ್ತದೆ.

ಭೂಮಿತಿಯ ಪರಿಕಲ್ಪನೆ

ಭೂಮಿತಿ ಪರಿಕಲ್ಪನೆ ಎರಡನೇ ಮಹಾಯುದ್ಧದ ನಂತರ ಬಂದದ್ದನ್ನು ಕಾಣಬಹುದಾಗಿದೆ. ಚೀನಾ, ವಿಯಟ್ನಾಂ, ಕೋರಿಯದಲ್ಲಿ ಭೂಮಿಗಾಗಿ ನಡೆದ ಬೃಹತ್ ಚಳುವಳಿಗಳು ಭೂಮಿತಿ ಶಾಸನ ಜಾಗತಿಕವಾಗಿ ಹಲವು ದೇಶಗಳು ಒಪ್ಪಿಕೊಳ್ಳಲು ಕಾರಣವಾಗಿದೆ. ಹಲವು ಬಂಡವಾಳಶಾಹಿ ದೇಶಗಳು ಕೂಡ ತಮ್ಮ ದೇಶದ ಜನರ ಅತೃಪ್ತಿಯು 'ಕುದಿಬಿಂದು' ತಲುಪದಂತೆ ನೋಡಿಕೊಳ್ಳಲು ಭೂಮಿತಿಯನ್ನು ಶಾಸನವಾಗಿ ಅಂಗೀಕರಿಸಿದವು.

ಹಂಚಿಕೆಯಾಗಲಿಲ್ಲ
6.3 ಕೋಟಿ ಎಕರೆ ಹೆಚ್ಚುವರಿ ಭೂಮಿ

ನಮ್ಮ ದೇಶದ ಪ್ರಥಮ ಪ್ರಧಾನಮಂತ್ರಿ ಜವಹರ್‌ಲಾಲ್ ನೆಹರು ನೇತೃತ್ವದ ಸರ್ಕಾರ ಹೆಚ್ಚುವರಿ ಭೂಮಿ ಅಂದರೆ ವಿತರಣೆಗೆ ಲಭ್ಯ ಇರುವ ಭೂಮಿಯ ಪ್ರಮಾಣ ಅಂದಾಜಿಸಲು ಮಹಲನೋಬಿಸ್‌ರವರ ನೇತೃತ್ವದ ಸಮಿತಿ ರಚಿಸಿತು. ಒಂದು ಕುಟುಂಬಕ್ಕೆ 20 ಎಕರೆ ಭೂಮಿತಿ ನಿಗದಿಪಡಿಸಿದರೆ ಭೂಹೀನ ಬಡವರಿಗೆ ಹಂಚಲು ಲಭ್ಯವಿರುವ ಭೂಮಿ ಸು. 6.3 ಕೋಟಿ ಎಕರೆ ಎಂದು ತಿಳಿಸಿತು. ಆದರೆ ಭೂಮಿತಿಯನ್ನು ನಿಗದಿ ಮಾಡುವಾಗ–ಮತ್ತು ಕುಟುಂಬವನ್ನು ವ್ಯಾಖ್ಯಾನ ಮಾಡುವಾಗ ಭೂಮಾಲೀಕರ ಹಿತಕ್ಕೆ ಧಕ್ಕೆಯಾಗದಂತೆ ಸರ್ಕಾರಗಳು ಪಕ್ಷಪಾತ–ವಂಚನೆ ನಡೆಸಿದ್ದರಿಂದ ಭೂಸುಧಾರಣೆ ಸಾಧ್ಯವಾಗಿಲ್ಲ.

ಭೂಸುಧಾರಣೆ ಸಾಧ್ಯವಾಗಿದ್ದರೆ ಗಮನಾರ್ಹ ಪ್ರಮಾಣದಲ್ಲಿ ಗ್ರಾಮೀಣ ಬಡವರ ಕೊಳ್ಳುವ ಶಕ್ತಿ ಹೆಚ್ಚಳವಾಗುತ್ತಿತ್ತು. ಇದರಿಂದ ಕೈಗಾರಿಕಾ ಉತ್ಪನ್ನಗಳಿಗೆ ಅಪಾರ ಬೇಡಿಕೆ ಸೃಷ್ಟಿಯಾಗಿ ಕೈಗಾರಿಕಾ ಅಭಿವೃದ್ಧಿಗೆ ಬಲಯುತ ಆಧಾರವಾಗಿ ಮಾರ್ಪಟ್ಟು ಆಹಾರ ಭದ್ರತೆ, ಉದ್ಯೋಗ ಸೇರಿದಂತೆ ಬಹುತೇಕ ಸಮಸ್ಯೆಗಳನ್ನು ನಿವಾರಿಸಬಹುದಾಗಿತ್ತು.

ಆದರೆ ಇದುವರೆಗೆ ಭೂಮಿತಿ ಶಾಸನವನ್ನು ಸರಿಯಾಗಿ ಜಾರಿಮಾಡಿಲ್ಲ. ಭೂಮಿತಿಯನ್ನು

ಪುಟ 4ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕರ್ನಾಟಕದ ಜನತೆಗೆ ಅವಮಾನ

ಲಿಂಗಾಯತರೊಬ್ಬರ ಮುಖಂಡತ್ವದಲ್ಲಿ ಮುಂದಿನ ಚುನಾವಣೆಯನ್ನು ಎದುರಿಸಲು ಸಾಧ್ಯವಾದರೆ ಬಿಜೆಪಿಗೆ ಬಹುಮತ ಪ್ರಾಪ್ತವಾಗುವುದು ಖಚಿತ ಎಂಬ ನಿರ್ಧಾರಕ್ಕೆ ಬಂದು, ಜಗದೀಶ ಶೆಟ್ಟರ್ ಅವರನ್ನು 3ನೇ ಮುಖ್ಯ ಮಂತ್ರಿಯಾಗಿ ಪಟ್ಟ ಕಟ್ಟುವ ಮೂಲಕ ಬಿಜೆಪಿ ವರಿಷ್ಠರು ಕರ್ನಾಟಕದ ಜನತೆಗೆ ದೊಡ್ಡ ಅವಮಾನ ಮಾಡಿದ್ದಾರೆ. ಅವರು ತಿಳಿದಂತೆ ಕರ್ನಾಟಕದ ಜನ ಅಷ್ಟೊಂದು ಕೀಳು ಮನಃಪ್ರವೃತ್ತಿ ಉಳ್ಳವರಲ್ಲ. ಯಡಿಯೂರಪ್ಪ ರಂತಹ ಪಟ್ಟಭದ್ರರು ಮಾತ್ರ ತಮ್ಮ ಸ್ವಂತ ಹಿತಸಾಧನೆಗಾಗಿ ಇಂತಹ ವಿಚಾರಗಳನ್ನು ಸಾರ್ವತ್ರಿಕಗೊಳಿಸಲು ಪ್ರಯತ್ನಿಸುತ್ತಾರೆ. ಅದೊಂದು ಸಲ 'ಯಡಿಯೂರಪ್ಪಗೆ ಅನ್ಯಾಯ ಮಾಡಲಾಗುತ್ತಿದೆ' ಎಂದು ಭಾವನಾತ್ಮಕ ಸಮ್ಮೋಹನಕ್ಕೆ ಒಳಗಾದ ಜನ ಯಡಿಯೂರಪ್ಪನ ಬೆಂಬಲಕ್ಕೆ ನಿಂತಿರಬಹುದು. ಆದರೆ ನಂತರದ ಬೆಳವಣಿಗೆಗಳಿಂದ ರಾಜ್ಯದ ಜನತೆ ಪಾಠವನ್ನು ಕಲಿಯಲೇ ಇಲ್ಲ ಎಂದು ಭಾವಿಸಲಾಗದು. ಇಂದು ರಾಜ್ಯದ ಲಿಂಗಾಯತ ಸಮುದಾಯ ನಿಂತಲ್ಲೇ ನಿಂತಿಲ್ಲ. ಯಡಿಯೂರಪ್ಪನವರಂತಹ ಮುಖಂಡರ ನೈಜ ಚಹರೆಯನ್ನು ಕಂಡಿರುವ ಆ ಸಮುದಾಯದ ಜನ ಈಗಾಗಲೇ ಬಿಜೆಪಿಯಿಂದ ಸಾಕಷ್ಟು ದೂರ ಸರಿದಿದ್ದಾರೆ. 'ಇವರು ನಮ್ಮವರು' ಎಂದು ಹೇಳಿಕೊಳ್ಳಲು ಅಸಹ್ಯಪಡುತ್ತಿದ್ದಾರೆ.

ತಾನೊಂದು ರಾಷ್ಟ್ರೀಯ ಪಕ್ಷ, ರಾಷ್ಟ್ರೀಯತೆ(Nationalist)ಯ ಪಕ್ಷ ಎಂದು ಹೇಳಿಕೊಳ್ಳುವ ಬಿಜೆಪಿ ರಾಜಕೀಯ ಅಧಿಕಾರ ಗಿಟ್ಟಿಸಿಕೊಳ್ಳುವುದಕ್ಕಾಗಿ ಒಂದು ಜಾತಿಗೆ ಶರಣಾಗುತ್ತಿರುವುದು ಅತ್ಯಂತ ನಾಚಿಕೆಗೇಡಿನ ಪ್ರಸಂಗವಾಗಿದೆ. ಅಂದರೆ ತಾನು ಪ್ರತಿಪಾದಿಸುವ ಸಿದ್ಧಾಂತದಲ್ಲೇ ವಿಶ್ವಾಸ ಕಳೆದುಕೊಂಡಿರುವ ಬಿಜೆಪಿ ಇಂದು ಸಂಪೂರ್ಣ ದಿವಾಳಿಯಾಗಿದೆ. ಬಿಜೆಪಿ ಪ್ರತಿಪಾದಿಸುವ ರಾಷ್ಟ್ರೀಯತೆ ಅತ್ಯಂತ ಸಂಕುಚಿತವಾದ ಫ್ಯಾಸಿಸ್ಟ್ ರಾಷ್ಟ್ರೀಯತೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಅಷ್ಟರಿಂದಲೇ ಚುನಾವಣೆಗಳಲ್ಲಿ ಗೆಲ್ಲಲಾಗುವುದಿಲ್ಲ ಎಂಬುದನ್ನು ಗಮನಿಸಿ ಜಾತಿ ಎಂಬ ಐಡೆಂಟಿಟಿಯನ್ನು ಅಧಿಕಾರದ ಗದ್ದುಗೆಯನ್ನೇರಲು ಏಣಿಯಾಗಿ ಬಳಕೆ ಮಾಡುತ್ತಿದೆ. ಇದರಿಂದ ಪ್ರಜಾಪ್ರಭುತ್ವವನ್ನೇ ಅನರ್ಥಗೊಳಿಸುವ ಇನ್ನೊಂದು ಕೆಟ್ಟ ಪ್ರವೃತ್ತಿಗೆ ನೀರೆರೆಯಲು ಹೊರಟಿರುವ ಬಿಜೆಪಿಗೇ ಅದು ತಿರುಗು ಬಾಣವಾಗಲಿರುವ ಎಲ್ಲಾ ಲಕ್ಷಣಗಳು ಈಗಾಗಲೇ ಕಾಣುತ್ತಿವೆ.

ಬಿಜೆಪಿಗೆ ಜನರ ಬಳಿ ಹೋಗಲು ಮುಖವಿಲ್ಲ. ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಜನಹಿತಕ್ಕಾಗಿ ಮಾಡಿದ ಒಂದೇ ಒಂದು ಕಾರ್ಯವಿಲ್ಲ. ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲಾಗಿಲ್ಲ. ತೀವ್ರ ಬೆಲೆ ಏರಿಕೆಯಿಂದ ತತ್ತರಿಸಿದ ಬಡವರಿಗೆ ಕನಿಷ್ಠ ರೇಷನ್ ಕಾರ್ಡುಗಳನ್ನಾದರೂ ಸರಿಯಾಗಿ ವಿತರಿಸಿ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ಪೂರೈಸಲಿಲ್ಲ. ಭೀಕರ ಬರಕ್ಕೆ ತುತ್ತಾಗಿ ಕಂಗೆಟ್ಟ ಜನರ ಕಷ್ಟ ಪರಿಹಾರಕ್ಕಾಗಿ ರಾಜ್ಯ ಬೊಕ್ಕಸದಿಂದ ಹಣವನ್ನು ಖರ್ಚುಮಾಡಲು ಮುಂದಾಗಲಿಲ್ಲ. ಕುಡಿಯುವ ನೀರಿನ ತೀವ್ರ ಸಮಸ್ಯೆಯನ್ನು ಬಗೆಹರಿಸಲು ಆಸಕ್ತಿ ತೋರಲಿಲ್ಲ. ಮೇವು ಇಲ್ಲದೆ ನರಳುತ್ತಿರುವ ಗೋವುಗಳು ಗೋಚರಿಸುತ್ತಿಲ್ಲ. ಕೆಲಸ ಮಾಡುವ ಕೈಗಳಿಗೆ ಕೆಲಸ ಕೊಟ್ಟು, ಮಾಡಿದ ಕೆಲಸಕ್ಕೆ ಸರಿಯಾಗಿ ವೇತನ ಕೊಟ್ಟು ಉದ್ಯೋಗ ಖಾತ್ರಿ ಯೋಜನೆಗಾಗಿ ಲಭ್ಯ ಇರುವ ಹಣದ ಸದುಪಯೋಗ ಮಾಡಲು ಆಸಕ್ತಿ ಇಲ್ಲ. ರಾಜ್ಯದ ಉತ್ಪಾದನೆಯಲ್ಲಿ ಗಣನೀಯ ಪಾತ್ರವಹಿಸುತ್ತಿರುವ ಅಸಂಘಟಿತ ವಲಯದ ಅಸಂಖ್ಯಾತ ಬಡ ಕಾರ್ಮಿಕರಿಗೆ ಜೀವನಾವಶ್ಯಕ ಕನಿಷ್ಠ ವೇತನವನ್ನು ಪರಿಷ್ಕರಿಸಲು ಸರ್ಕಾರ ಮನಸ್ಸು ಮಾಡುತ್ತಿಲ್ಲ. ಹೀಗಿರುವಾಗ, ಮತ ಕೇಳಲು ಜನರ ಬಳಿಗೆ ಹೋಗಲು ಬಿಜೆಪಿಗೆ ದಾರಿ ಎಲ್ಲಿದೆ?


ಜಾತಿ ಪ್ರಶ್ನೆಯನ್ನು ಮುಂದಿಟ್ಟು ಮುಗ್ಧ ಜನರ ಮತಗಳನ್ನು ಬುಟ್ಟಿಗೆ ಹಾಕಿಕೊಳ್ಳಬಹುದೆಂದು ಬಿಜೆಪಿ ವರಿಷ್ಠರು ಭಾವಿಸಿರುವುದು ಅವರ ಮೂರ್ಖತನದ ಪರಮಾವಧಿ. ಒಬ್ಬ ಲಿಂಗಾಯತ ಮುಖ್ಯ ಮಂತ್ರಿಯನ್ನು ಮುಂದಿಟ್ಟುಕೊಂಡು ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದ್ದಾರೆ ಅವರು. ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರಲ್ಲಿ ಲಿಂಗಾಯತರಿಲ್ವ ? ತಾವು ಪೂಜಿಸುತ್ತಿದ್ದ ಎತ್ತುಗಳನ್ನು ಅಗ್ಗದ ಬೆಲೆಗೆ ಮಾರಾಟ ಮಾಡುತ್ತಿರುವ ಬರ ಪೀಡಿತ ಪ್ರದೇಶದ ಕೃಷಿಕರಲ್ಲಿ ಲಿಂಗಾಯತರಿಲ್ವ?. ನೆರೆಹಾವಳಿಗೆ ತುತ್ತಾಗಿ ಮನೆಮಠಗಳನ್ನು ಕಳೆದುಕೊಂಡು ಕಳೆದ 3 ವರ್ಷಗಳಿಂದ ತಗಡಿನ ತಾತ್ಕಾಲಿಕ ಶೆಡ್ಡುಗಳಲ್ಲಿಯೇ ದಿನ ದೂಡುತ್ತಿರುವವರಲ್ಲಿ ಲಿಂಗಾಯತರಿಲ್ವ? ಯಡಿಯೂರಪ್ಪ ಮುಖ್ಯ ಮಂತ್ರಿಯಾಗಿದ್ದಾಗ ಬಡ ಲಿಂಗಾಯತರಿಗೆ ಏನಾದರೂ ಅನುಕೂಲ ಆಗಿದೆಯಾ? ಮುಖ್ಯಮಂತ್ರಿ ಲಿಂಗಾಯತನೇ ಇರಲಿ ಅಥವಾ ಬೇರೆ ಜಾತಿಗೆ ಸೇರಿದವ ನಾಗಿರಲಿ. ಪ್ರಯೋಜನ ವಾಗುತ್ತಿರುವುದು ನೆಲ-ಜಲ ಲೂಟಿ ಮಾಡುವವರಿಗೆ ಮಾತ್ರ, ಇದನ್ನು ಅರ್ಥಮಾಡಿಕೊಳ್ಳಲು ಯಾವ ವಿಶ್ವವಿದ್ಯಾಲಯ ದಲ್ಲಿ ಸಂಶೋಧನೆ ಮಾಡುವ ಅಗತ್ಯವಿಲ್ಲ.

ಕರ್ನಾಟಕ 'ಸರ್ವ ಜನಾಂಗಗಳ ಶಾಂತಿಯ ತೋಟ' ಎಂದು ರಾಷ್ಟ್ರಕವಿ ಕುವೆಂಪು ಅವರು ಸರ್ವಕಾಲಿಕ ಸತ್ಯವನ್ನು ಸಾರಿದ್ದಾರೆ. ಜಾತಿ ಆಧಾರದಲ್ಲಿ ಜನರನ್ನು ಒಡೆಯಲು ಹೊರಟಿರುವ ಬಿಜೆಪಿಯನ್ನು ಇತಿಹಾಸ ಕ್ಷಮಿಸಲಾರದು.

ಬದಲಾದ ಮುಖ್ಯಮಂತ್ರಿ, ಬದಲಾಗದ ಕಾರ್ಯಸೂಚಿ

'ಸದಾನಂದಗೌಡರ ಪದಚ್ಯುತಿ, ಜಗದೀಶ್ ಶೆಟ್ಟರ ಪಟ್ಟಾಭಿಷೇಕ,ಬಿಜೆಪಿಂನೊಳಗೆ ತಾರಕಕ್ಕೇರಿದ ಅಧಿಕಾರದ ಕಿತ್ತಾಟ, ಮಳೆ ಇಲ್ಲ, ಬಿತ್ತನೆಯೂ ಇಲ್ಲ ಜನರಲ್ಲಿ ಹಾಹಾಕಾರದ ಭಾವನೆ, ನಾಳೆಗಳ ನೆನೆದು ಹತಾಶೆ ಇತ್ಯಾದಿ ಇತ್ಯಾದಿ. . . ಆದರೆ ಈ ಸರಕಾರದ ಎಲ್ಲಾ ಸೂತ್ರ ಹಿಡಿದಿರುವ ಆರೆಸ್ಸೆಸ್ ಇಲ್ಲಿ ಏನೂ ಆಗುತ್ತಿಲ್ಲವೆಂಬಂತೆ ತನ್ನ ಪಾಡಿಗೆ ತಾನು ಲಾಠಿ ತಿರುವುತ್ತಾ ದೇಶ ಭಕ್ತಿ ಗೀತೆ ಹಾಡುತ್ತಾ ಕಾಲ ಕಳೆಯುತ್ತಿದೆ'. ಹೀಗೆಂದು ಕೊಂಡರೆ ರಾಜ್ಯದ ಜನತೆ ಚೆಡ್ಡಿ ಪಡೆ ತೋಡಿದ ಹಳ್ಳಕ್ಕೆ ಬಿದ್ದಂತೆಯೇ!

ಬೆನ್ನ ಹಿಂದಿರುವ ಭೂತಗಳು



ಈ ನಾಲ್ಕು ವರುಷಗಳಲ್ಲಿ ಮೂರು ಮುಖ್ಯಮಂತ್ರಿಗಳು ಬದಲಾಗಿದ್ದಾರೆ. ಜನರ ಸೇವೆಗೆ ಇವರು ತಮ್ಮ 'ಅಮೂಲ್ಯ ಜೀವನವನ್ನು ಮೀಸಲಿಟ್ಟ' ಸ್ವಯಂಸೇವಕರೇ.! ಇವರೆಲ್ಲಾ ಚೆಡ್ಡಿ ತೊಟ್ಟು , ಕೋಲು ತಿರುಗಿಸಿ ಶುದ್ಧ ನಡೆತೆ, ಚಾರಿತ್ರ್ಯವುಳ್ಳ ಅಪರಂಜಿಗಳೇ.! ಅವೆಲ್ಲಾ ಹೇಗೆಲ್ಲಾ ಹೊಳೆದವು, ಕೊಳೆತವು ಎಂಬುದು ಈ ಅವಧಿಯಲ್ಲಿ ಕಂಡಾಗಿದೆ. ಈಗಲೂ ಮುಖ್ಯಮಂತ್ರಿ ಯಾಗಿರುವ ಶೆಟ್ಟರ್ ಕಳಂಕರಹಿತರೇನಲ್ಲ .ಈಗಲೂ ಹತ್ತಾರು ಹಗರಣಗಳಲ್ಲಿ ಮುಳುಗೇಳುತ್ತಿರುವ ಕಡು ಭ್ರಷ್ಟರೆಲ್ಲಾ ಇವರ ಬೆನ್ನಿಗಿರುವುದು ಶೆಟ್ಟರ್ ರವರ ಕಾರ್ಯಸೂಚಿಯನ್ನು ನಿಗದಿ ಮಾಡಿದಂತಾಗಿದೆ. ಇದೇ ಸಾರಿ ಹೇಳುತ್ತದೆ.

ಸದಾನಂದಗೌಡರನ್ನು ತೆಗೆಯಲು ಕೊಟ್ಟ ಕಾರಣವೂ ಅತ್ಯಂತ ಸಂದರ್ಭಸಾಧಕ ಮತ್ತು ಅಪಾಯಕಾರಿಯಾಗಿದೆ. ಹೇಗಾದರೂ ಮತ್ತೇ ಅಧಿಕಾರಕ್ಕೆ ಬರಲೇಬೇಕೆಂದು ಅದು ಜಾತಿ ವಿಭಜನೆಯ ದುಷ್ಟ ಆಟಕ್ಕೆ ಇಳಿದಿದೆ. ಸಮಾಜವನ್ನು ಒಡೆಯುವ ಇಂತಹ ಕೃತ್ಯಗಳೇ ಆರೆಸ್ಸೆಸ್‌ನ ಹಿಂದುತ್ವದ ಮೂಲ ಸಿದ್ಧಾಂತ. ಅದು ಉದಾತ್ತ ಉದ್ದೇಶವೆಂದು ಘೋಷಿಸುವ ಹಿಂದುತ್ವ ವೇ ಅಖಂಡ ಮತನಿರಪೇಕ್ಷಿತ, ಪ್ರಜಾಸತ್ತಾತ್ಮಕ ಭಾರತವನ್ನು ಮತೀಯ ದ್ವೇಷದ ಆಧಾರದಲ್ಲಿ ವಿಭಜಿಸುವ ಗುರಿಯಲ್ಲಿರುವುದು. ಈ ಉದ್ದೇಶವನ್ನು ಸಾಧಿಸಲು ಅದು ನಿರಂತರವಾಗಿ ಕಾರ್ಯಾಚರಿಸುತ್ತಲೇ ಇರುತ್ತದೆ.

ಭಾರತದ ಸಂವಿಧಾನದ ಬಗ್ಗೆ ಕಡು ದ್ವೇಷ ಹೊಂದಿರುವ ಅದು ಸಂವಿಧಾನ ಕೊಡಮಾಡಿದ ಅವಕಾಶವನ್ನೇ ಬಳಸಿ ಮೂಲ ಆಶಯಗಳನ್ನು ಬುಡಮೇಲು ಮಾಡಲು ಸತತ ಪ್ರಯತ್ನ ಮಾಡುತ್ತಾ ಬಂದಿರುವುದೇ ಅದರ ಇತಿಹಾಸ. ಅದು ಕೇಂದ್ರವೇ ಆಗಿರಲಿ,ರಾಜ್ಯ ಸರಕಾರವೇ ಆಗಿರಲಿ ,ಅಲ್ಲೆಲ್ಲಾ ತನ್ನ ಅಜೆಂಡಾ ಜಾರಿಗೆ ಸದಾ ಕಾರ್ಯೋನ್ಮುಖ ವಾಗಿರುತ್ತದೆ.

ಈಗಲೂ ರಾಜ್ಯದಲ್ಲಿ ಏನೇ ಅಲ್ಲೋಲ ಕಲ್ಲೋಲವಾಗಿ, ಜನ ಸಾಯಲಿ ಅದಕ್ಕೆ ಅವು ಪ್ರಶ್ನೆಗಳಾಗಿ ಕಾಡುವುದಿಲ್ಲ. ಈಗಲೂ ಬಿಜೆಪಿ ಸರಕಾರದ ಎಲ್ಲಾ ಲಾಭ, ಅಪಾರ ಸಂಪನ್ಮೂಲದ ಸೂರೆಯಲ್ಲಿ, ಆಡಳಿತ ನಿಯಂತ್ರಣದಲ್ಲಿ ಯಾರಿಗೂ ಉತ್ತರದಾಯಿತ್ವವೇ ಇಲ್ಲದ ಸರ್ವಾಧಿಕಾರತ್ವದ ಪ್ರಧಾನ ಪಾತ್ರ ವಹಿಸುತ್ತಾ ಬಂದಿದೆ. ಎಲ್ಲಾ ಅಧಿಕಾರ ,ಅವಕಾಶಗಳನ್ನು ಬಳಸುತ್ತಾ ಬಂದಿದೆ ಈಗಿರುವ ಗುರಿ ಸ್ಪಷ್ಟ.

ಪುಟ 12 ಕ್ಕೆ

ಕಾರ್ಟೂನ್ ಕಾರ್ನರ್

ಕೃಪೆ : ದಿ ಹಿಂದೂ



ಅಂತರಾಷ್ಟ್ರೀಯ ಹಣಕಾಸು ಬಂಡವಾಳಗಳ ಹುನ್ನಾರದಿಂದ .....

ಪುಟ 2 ರಿಂದ

-ಜಿ.ವಿ. ಶ್ರೀರಾಮರೆಡ್ಡಿ

ಹೆಚ್ಚಿಸಲಾಗುತ್ತಿದೆ. ಕರ್ನಾಟಕದಲ್ಲಿ ಈ ವರೆಗೆ ಇದ್ದ ಒಂದು ಕುಟುಂಬಕ್ಕೆ 54 ಎಕರೆ ಮಿತಿಯನ್ನು 108 ಎಕರೆಗೆ ಹೆಚ್ಚಿಸಲಾಗುತ್ತಿದೆ. ಕುಟುಂಬದ ವ್ಯಾಖ್ಯಾನದಲ್ಲಿ ಇರುವ ದೋಷ ಪ್ರತ್ಯೇಕವಾಗಿ ಚರ್ಚೆಯಾಗಬೇಕಿರುವ ವಿಷಯ.

ಪಶ್ಚಿಮ ಬಂಗಾಳದಲ್ಲಿ ಎಲ್ಲಾ ರೀತಿಯ ಭೂಮಿಯನ್ನು ಸೇರಿದಂತೆ ಅಂದರೆ ಅದು ಕೃಷಿ ಭೂಮಿಯಾಗಿರಲಿ ಅಥವಾ ಕೃಷಿಯೇತರ ಭೂಮಿಯಾಗಿರಲಿ, ಒಣಭೂಮಿಯಾಗಿರಲಿ ಅಥವಾ ನೀರಾವರಿ ಭೂಮಿಯಾಗಿರಲಿ, ಬೀಳು ಭೂಮಿಯಾಗಿರಲಿ ಅಥವಾ ಬಂಜರು ಭೂಮಿಯಾಗಿರಲಿ ಒಂದು ಕುಟುಂಬಕ್ಕೆ 25 ಎಕರೆಗಿಂತ ಮೀರಬಾರದು ಎಂಬ ಮಿತಿಯನ್ನು ಕಟ್ಟು ನಿಟ್ಟಾಗಿ ಜಾರಿ ಮಾಡಲಾಗಿದೆ. ಒಂದು ಕುಟುಂಬದಲ್ಲಿ ಎಷ್ಟೇ ಜನ ಇರಲಿ ಅದನ್ನು ಒಂದೇ ಕುಟುಂಬವಾಗಿ ಪರಿಗಣಿಸಲಾಗಿದೆ. ಹೀಗೆ ಕೃಷಿ, ಕೃಷಿಯೇತರ ಎಲ್ಲಾ ಭೂಮಿಯೂ ಈ ಭೂಮಿತಿಗೆ ಒಳಪಟ್ಟಿದೆ.

ಭೂಹೀನರ ಸಂಖ್ಯೆ ಹೆಚ್ಚುತ್ತಿದೆ

ಬಂಡವಾಳಶಾಹಿ-ಭೂಮಾಲೀಕ ಪರ ಆರ್ಥಿಕ ಧೋರಣೆಗಳ ಪರಿಣಾಮದಿಂದ ಭೂಹೀನರಿಗೆ ಭೂಮಿ ಸಿಗುವ ಬದಲು ಭೂಮಿಹೀನರ ಸಂಖ್ಯೆ ವಿಪರೀತ ಪ್ರಮಾಣದಲ್ಲಿ ಬೆಳೆಯುತ್ತಿದೆ. ಬಡ ರೈತರು, ಮಧ್ಯಮ ರೈತರು ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. 1991ರಲ್ಲಿ ಒಟ್ಟು ಗ್ರಾಮೀಣ ಕೃಷಿ ಅವಲಂಬಿತರಲ್ಲಿ ಶೇ. 20 ರಷ್ಟು ಭೂಹೀನರು ಇದ್ದರೆ, ಈಗ ಇದು ಶೇ. 40ಕ್ಕೆ ಏರಿದೆ. ಭೂಸುಧಾರಣೆಗೆ ತರುತ್ತಿರುವ ಈ ರೀತಿಯ ತಿದ್ದುಪಡಿಯಿಂದ ಕೇವಲ ಶೇ. 5 ಜನರಿಗೆ ಪ್ರಯೋಜನವಾದರೆ ಶೇ. 95 ಜನರಿಗೆ ತೊಂದರೆ ಆಗುತ್ತದೆ.

ಎ.ಐ.ಕೆ.ಎಸ್-ಎ.ಐ.ಎ.ಡಬ್ಲ್ಯು.ಯು. ಸಂಘಗಳು ಆರ್ಥಿಕ ನೀತಿಗಳನ್ನು ವಿಮರ್ಶೆಗೊಳಪಡಿಸಿ ಎರಡು ಪ್ರಮುಖ ವೈರುಧ್ಯಗಳನ್ನು ಗುರುತಿಸಿವೆ.

1. ಸಾಮ್ರಾಜ್ಯಶಾಹಿ ಮತ್ತು ಇಡೀ ರೈತ ಸಮುದಾಯದ ನಡುವೆ ತೀವ್ರಗೊಳ್ಳುತ್ತಿರುವ ವೈರುಧ್ಯ.
2. ಶ್ರೀಮಂತರು ಮತ್ತು ಬಡವರ ನಡುವೆ ಬೆಳೆಯುತ್ತಿರುವ ವೈರುಧ್ಯ.

ಹೀಗಾಗಿ ಬಡವರಲ್ಲಿ ಬಡವರಾಗುತ್ತಿರುವವರ ಸಂಖ್ಯೆ ತೀವ್ರವಾಗಿ ಹೆಚ್ಚಳವಾಗುತ್ತಿರುವುದು ಆತಂಕಕಾರಿಯಾದ ಬೆಳವಣಿಗೆಯಾಗಿದೆ. ಇವರನ್ನು ಕೇಂದ್ರವಾಗಿಟ್ಟುಕೊಂಡು ಬಲಿಷ್ಠ ಚಳುವಳಿಯನ್ನು ಕಟ್ಟಬೇಕಾಗಿರುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಕಾಂ. ಮಿಶ್ರ ಪ್ರತಿಪಾದಿಸಿದರು.

ಭೂಸುಧಾರಣೆ ತರದೆ ಅಭಿವೃದ್ಧಿ ಬಗ್ಗೆ ಮಾತಾನಾಡುವುದು ಕೇವಲ ಬೂಟಾಟಿಕೆ

ಭೂಮಿ ವಿಷಯವನ್ನು ದೇಶದಲ್ಲಿ ಮುಖ್ಯ ಪ್ರಶ್ನೆಯಾಗಿ ರಂಗದ ಮೇಲೆ ತಂದದ್ದು ಅಖಿಲ ಭಾರತ ಕಿಸಾನ್ ಸಭಾ ಮತ್ತು ಕಮ್ಯುನಿಸ್ಟ್ ಪಕ್ಷ. ಭೂಮಿಯನ್ನು ಯಾರು ಉಳುಮೆ ಮಾಡುತ್ತಾರೋ ಅವರಿಗೆ ಭೂಮಿ ಸಿಗಬೇಕು ಎಂದು ಅತ್ಯಂತ ಸಮರಶೀಲ ಹೋರಾಟವನ್ನು 1940 ರ ದಶಕದಲ್ಲಿ ನಡೆಸಿದ ವಿರೋಚಿತ ಇತಿಹಾಸದಲ್ಲಿ ತೆಲಂಗಾಣ ಸಶಸ್ತ್ರ ಹೋರಾಟ, ಪುನ್ನಪ್ರವಯಲಾರ್ ಸುರ್ಮಾ ಕಣಿವೆ ಹೋರಾಟ, ತೇಭಾಗ ಚಳುವಳಿ ಮುಂತಾದವು ಮುಖ್ಯವಾದವುಗಳು. ಭೂಸುಧಾರಣೆ ತರದೆ ಅಭಿವೃದ್ಧಿ ಬಗ್ಗೆ ಮಾತನಾಡುವುದು ಕೇವಲ ಬೂಟಾಟಿಕೆ. ಎಂದು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಹಾಗೂ ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮ ರೆಡ್ಡಿ ಹೇಳಿದರು. ಶೇ.5 ಜನರ ಆಸ್ತಿ ಹೆಚ್ಚಳವನ್ನೇ ಗುರಿಯಾಗಿಟ್ಟುಕೊಂಡು ಆಡಳಿತ ನಡೆಸುವ ಸರ್ಕಾರಗಳು ಶೇ. 70 ಕ್ಕೂ ಹೆಚ್ಚು ಕೃಷಿ ಮೇಲೆ ಅವಲಂಬಿತವಾಗಿರುವ ಜನರಿಗೆ ಆಹಾರ, ವಸತಿ, ಕೂಲಿ, ಲಾಭದಾಯಕ ಬೆಲೆ ಇವುಗಳಿಂದ ವಂಚನೆ ಎಸಗಲಾಗಿದೆ.

ದೇಶದಲ್ಲಿ ತೀವ್ರಗೊಳ್ಳುತ್ತಿರುವ ಕೃಷಿ ಬಿಕ್ಕಟ್ಟಿನಿಂದ ಬಡತನ, ನಿರುದ್ಯೋಗ ತಾಂಡವವಾಡುತ್ತಿದೆ. ಆಹಾರ ಉತ್ಪಾದನೆ ತೀವ್ರವಾಗಿ ಕುಸಿದಿದೆ. ಇದರ ಪರಿಣಾಮವಾಗಿ ಆಹಾರದ ಬೆಲೆಗಳು ಯದ್ವಾತದ್ವಾ ಏರಿಕೆ ಕಂಡಿವೆ. 1 ದಿನದ ಸರಾಸರಿ ಆದಾಯ 20-00 ಆದರೆ 1 ಕೆ.ಜಿ. ಅಕ್ಕಿ 30 ರೂ. ಇದೆ. ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಬೆಲೆ ಏರಿಕೆ ಎರಡು ಪಟ್ಟು ಹೆಚ್ಚಾಗಿದೆ.

ದುಬಾರಿಯಾಗಿರುವ ಕೃಷಿ ಲಾಗುವಾಡುಗಳ ವೆಚ್ಚ ಮತ್ತು ತೀವ್ರಗೊಳ್ಳುತ್ತಿರುವ ಬಡತನದ ಕಾರಣದಿಂದ ರೈತರು ಭೂಮಿ ಮಾರಾಟ ಮಾಡುವ ಯಾತನಾಮಯವಾದ ಒತ್ತಡವನ್ನು ಅನುಭವಿಸುತ್ತಿದ್ದರೆ, ಆಳುವ ಸರ್ಕಾರಗಳು ಸ್ವಯಂ ಪ್ರೇರಿತವಾಗಿ ರೈತ ಜಮೀನು ಬಿಟ್ಟುಕೊಡಲು ಸಿದ್ಧನಿದ್ದನೆಂದು ತಪ್ಪಾಗಿ ಅರ್ಥೈಸುತ್ತಿವೆ.

ಭೂಮಿಯಿಂದ ರೈತನನ್ನು ಒಕ್ಕಲೆಬ್ಬಿಸಿ ಕಂಪನಿ ವಶ ಮಾಡುವ, ರಿಯಲ್ ಎಸ್ಟೇಟ್ ದಂಧೆಗೆ ಪ್ರೋತ್ಸಾಹ ಮಾಡುವ ವಿಷಯದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ಪಕ್ಷಗಳಲ್ಲಿ ಬೇಧ ಉಳಿದಿಲ್ಲ. ರೈತಾಪಿ ಕೃಷಿ ರಕ್ಷಣೆಗೆ ಕ್ರಾಂತಿಕಾರಕವಾದ ಭೂಸುಧಾರಣೆ, ಭೂಮಾಲೀಕ ವ್ಯವಸ್ಥೆ ನಾಶ ಮಾಡುವುದನ್ನು ಬಿಟ್ಟು ಕಾರ್ಪೋರೇಟ್ ಕಂಪನಿಗಳ ರಕ್ಷಣೆಗಾಗಿ ಭೂಸುಧಾರಣಾ ಕಾಯ್ದೆ ತಿದ್ದು ಪಡಿ ಮಾಡುತ್ತಿರುವುದು ಕೃಷಿರಂಗವನ್ನು ದಿವಾಳಿ ಸ್ಥಿತಿಗೆ ಕೊಂಡೊಯ್ಯುತ್ತದೆ ಎಂದು ತಿಳಿಸಿದರು.

"ಪ್ರಧಾನ ಮಂತ್ರಿ ಅಧ್ಯಕ್ಷತೆಯ ಭೂ ಸುಧಾರಣಾ ಕ್ರಮಗಳ ನಿಗಾ ಸಮಿತಿಕಳೆದ 4 ವರ್ಷಗಳಲ್ಲಿ ಒಂದು ಭಾರಿಯು ಸಭೆ ಸೇರಿಲ್ಲ"

- ಕಾಂ. ವಿಜುಕೃಷ್ಣನ್

ಕಿಸಾನ್ ಸಭಾದ ಅಖಿಲ ಭಾರತ ಸಹಕಾರ್ಯದರ್ಶಿ ಕಾಂ.ವಿಜುಕೃಷ್ಣನ್ ಭೂಸುಧಾರಣೆ ಕ್ರಮಗಳ ಕುರಿತು ನಿಗಾವಹಿಸುವ ಪ್ರಧಾನ ಮಂತ್ರಿ ಅಧ್ಯಕ್ಷತೆಯ ಸಮಿತಿ ಕಳೆದ 4 ವರ್ಷಗಳಲ್ಲಿ ಒಂದು ಭಾರಿಯು ಸಭೆ ಸೇರಿಲ್ಲ ಎಂಬುದೇ ಈ ಸರ್ಕಾರದ ಧೋರಣೆಯನ್ನು ತಿಳಿಸುತ್ತದೆ ಎಂದು ಕೇಂದ್ರ ಯುಪಿಎ ಸರ್ಕಾರದ ಧೋರಣೆಯನ್ನು ತೆರೆದಿಟ್ಟರು. ಕೋಟ್ಯಾಂತರ ಜನರ ಜೀವನಾಧಾರವಾಗಿರುವ ಭೂಮಿ ಕಂಪನಿ ಕೈ ವಶವಾದರೆ ಉಂಟಾಗುವ ನಿರುದ್ಯೋಗ ನಿವಾರಣೆಗೆ ಕೃಷಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸುತ್ತೇವೆ ಎನ್ನುವುದು ನಗೆಪಾಟಲಿನ ವಿಷಯ. ವಿದೇಶಿ ಪ್ರವಾಸಿಗರ ಮೋಜಿಗೆ ಎತ್ತಿನಗಾಡಿ ಸವಾರಿ, ದನಕರುಗಳಿಗೆ ಹುಲ್ಲು ತಿನ್ನಿಸುವುದು. ಜಾನಪದ ನೃತ್ಯ, ಹಾಡುಗಳಂತಹ ಕಾರ್ಯಕ್ರಮಗಳನ್ನು ಸಂಘಟಿಸುವುದು ಈ ಕೃಷಿ ಪ್ರವಾಸೋದ್ಯಮದಲ್ಲಿ ಸೇರಿವೆ. ಈ ರೀತಿ ರೈತಾಪಿ ಜನರನ್ನು ಮೃಗಾಲಯದ ಪ್ರಾಣಿಗಳಂತೆ ನೋಡಬೇಕೆಂದು ಸರ್ಕಾರಗಳು ಬಯಸುತ್ತಿವೆ ಎಂದು ಆಳುವ ಸರ್ಕಾರಗಳ ಧೋರಣೆಯನ್ನು ಕಟುವಾಗಿ ಟೀಕಿಸಿದರು.


ಈ ರಾಜ್ಯ ಸಮಾವೇಶದ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಕಾಂ. ಮಾರುತಿ ಮಾನ್ಪಡೆ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಜಂಟಿಯಾಗಿ ವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿಯವರ ಪ್ರಸ್ತಾವನೆಯೊಂದಿಗೆ ಪ್ರಾರಂಭವಾದ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಕೆಪಿಆರ್‌ಎಸ್ ರಾಜ್ಯ ಉಪಾಧ್ಯಕ್ಷ ಎನ್. ವೆಂಕಟಾಚಲಯ್ಯ ಸ್ವಾಗತಿಸಿದರೆ, ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರಾ ವಂದಿಸಿದರು.

ಮಧ್ಯಾಹ್ನದ ನಂತರದಲ್ಲಿ ಎರಡು ಲಿಖಿತ ವರದಿಗಳನ್ನು ಮಂಡಿಸಲಾಯಿತು. ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ, ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಈ ವರದಿಗಳನ್ನು ಮಂಡಿಸಿದರು. ರಾಜ್ಯದ ವಿವಿಧ ಜಿಲ್ಲೆಗಳ ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ತಮ್ಮ ಜಿಲ್ಲೆಗಳಲ್ಲಿ ಭೂ ಹೋರಾಟವನ್ನು ಬಲಗೊಳಿಸುವ ಕುರಿತು ಹಾಗೂ ಭೂ ಸುಧಾರಣೆಯ ಸಮಸ್ಯೆಗಳನ್ನು ಗುರುತಿಸಿ ವಿವರಿಸಿದರು.

ಪ್ರತಿಭಟನೆ: ಜುಲೈ 14, 2012 'ಭೂ ಸುಧಾರಣಾ ಕಾಯ್ದೆ' ತಿದ್ದುಪಡಿ ಪ್ರತಿ ದಹನ

ರಾಜ್ಯ ಬಿಜೆಪಿ ಸರ್ಕಾರವು ಭೂ ಸುಧಾರಣಾ ಕಾಯ್ದೆಗೆ ತರಲು ಹೊರಟಿರುವ ಜನವಿರೋಧಿ ತಿದ್ದುಪಡಿಯನ್ನು ಪ್ರತಿಭಟಿಸುವ ನಿಟ್ಟಿನಲ್ಲಿ ಜುಲೈ 14, 2012 ರಂದು ರಾಜ್ಯವ್ಯಾಪಿಯಾಗಿ ಸೂಚಿತ ತಿದ್ದುಪಡಿ ಮಸೂದೆಯ ಕರಡು ಪ್ರತಿಯನ್ನು ಸುಟ್ಟು ಸರ್ಕಾರದ ಕ್ರಮಕ್ಕೆ ಪ್ರತಿರೋಧ ಒಡ್ಡಲು ಸಮಾವೇಶ ಕರೆ ನೀಡಿತು.

ಕಾಂ. ಹಂಸ ನಿಧನ



ಕೊಡಗು ಜಿಲ್ಲೆಯ ವಿರಾಜಪೇಟೆ ಸಿಪಿಐ(ಎಂ) ನಗರ ಶಾಖೆಯ ಸದಸ್ಯ ಕಾಂ.ಹಂಸ 58 ವರ್ಷ, 31/05/2012 ರಂದು ಮೆದುಳಿನಲ್ಲಿ ತೀವ್ರ ರಕ್ತಸ್ರಾವದಿಂದಾಗಿ ಮರಣ ಹೊಂದಿದರು. ಕಳೆದ 35 ವರ್ಷಗಳಿಂದಲೂ ಸಿಪಿಐ(ಎಂ) ಪಕ್ಷದ ಸದಸ್ಯರಾಗಿದ್ದ ಹಂಸ ಎರಡು ವರ್ಷಗಳ ಕಾಲ ಶಾಖೆಯ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದ್ದರು. ಸ್ವತ: ಅನಕ್ಷರಸ್ಥರಾಗಿದ್ದರೂ ಹಲವು ವಿದ್ಯಾವಂತರನ್ನು ಸಿಪಿಐ(ಎಂ)ಪಕ್ಷಕ್ಕೆ ಸದಸ್ಯರಾಗಿ ಕರೆತರಲು ಪ್ರಜ್ಞಾಪೂರ್ವಕವಾಗಿ ಶ್ರಮಿಸಿದ ಒಡನಾಡಿ ವಿರಾಜಪೇಟೆಯಲ್ಲೆಲ್ಲಾ ಜನರ ಪ್ರೀತಿಗೆ ಪಾತ್ರರಾಗಿ, ಜನಪ್ರಿಯ ವ್ಯಕ್ತಿತ್ವ ಹೊಂದಿದ್ದರು. ನಿರಂತರವಾಗಿ ದುಡಿಯುವವರ ಪಕ್ಷಪಾತಿಯಾಗಿದ್ದ ಒಡನಾಡಿ, ಎಲ್ಲರ ಮೆಚ್ಚುಗೆಯ ಡ್ರೈವರ್ ಕೂಡ ಆಗಿದ್ದರು. ಇ.ಎಂ.ಎಸ್. ನಂಬೂದರಿಪಾಡ್‌ರಿಂದ ಮೊದಲುಗೊಂಡು ವಿರಾಜಪೇಟೆಗೆ ಯಾರೇ ಸಿಪಿಐ(ಎಂ)ಪಕ್ಷದ ಮುಖಂಡರು ಬಂದರೂ ಸ್ವಯಂಸೇವಕನಾಗಿ ಕಾರ್ಯ ನಿರ್ವಹಿಸುತ್ತಿದ್ದರು. 1980-81 ರ ಅವಧಿಯಲ್ಲಿ ನಡೆದ ತಿತಿಮತ್ತಿ ರೈತರ ಹೋರಾಟದಲ್ಲಿ ಪೋಲಿಸ್, ಅರಣ್ಯ ಇಲಾಖೆಯವರೊಂದಿಗೆ ಧೀರೋದಾತ್ತವಾಗಿ ಸೆಣಸಿದ್ದರು. ಆ ಹೋರಾಟದಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಿದ್ದರು. ರಾಜ್ಯದ ಹಲವೆಡೆ ಸಿಪಿಐ(ಎಂ) ಪಕ್ಷದ ಚುನಾವಣಾ ಕಾರ್ಯಕ್ಕೆ ವಾಹನ ಚಾಲಕರಾಗಿ ಹಲವಾರು ದಿನ ಪಕ್ಷಕ್ಕಾಗಿ ದುಡಿದಿದ್ದರು. ನಿರಂತರ ಪಕ್ಷಕ್ಕಾಗಿ ತನು, ಮನ, ಧನ ನೀಡಿದ್ದ ಈ ಒಡನಾಡಿ ಇನ್ನು ನೆನಪು ಮಾತ್ರ.

ಯುವಜನ ಚಳುವಳಿಯ ತ್ಯಾಗ ಬಲಿದಾನದ ಪರಂಪರೆ.....

ಡಿವೈಎಫ್‌ಐನ ಐತಿಹಾಸಿಕ ಹೆಜ್ಜೆ ಗುರುತುಗಳು

ದೇಶದ ಪ್ರಜಾಸತ್ತಾತ್ಮಕ ಯುವಜನ ಚಳುವಳಿ ಸಾಗಿಬಂದ ದಾರಿ ಯಾವುದು ? ಅದರ ಹೆಮ್ಮೆ ಹಿರಿಮೆ ಏನು ? ತ್ಯಾಗ ಬಲಿದಾನದ ಸ್ಫೂರ್ತಿಯ ಸೆಲೆಗಳು ಯಾವುವು ? ಪ್ರಸಕ್ತ ಸವಾಲುಗಳೇನು ? ಎಂದು ವಿವರಿಸಿದ್ದಾರೆ, ಡಿವೈಎಫೈಐನ ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿ. ಬೆಂಗಳೂರಿನಲ್ಲಿ ನಡೆಯಲಿರುವ 9 ನೇ ಅಖಿಲ ಭಾರತ ಯುವಜನ ಸಮ್ಮೇಳನದ ಅಂಗವಾಗಿ ಒಂದು ಅವಲೋಕನ.

ಬಿ.ರಾಜಶೇಖರಮೂರ್ತಿ

ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟೀಷ್ ವಸಾಹತುಶಾಹಿಯ ವಿರುದ್ಧ ಹೋರಾಡಿದ್ದ ಯುವ ಕ್ರಾಂತಿಕಾರಿಗಳ ಪರಂಪರೆಯನ್ನು ಡಿವೈಎಫ್‌ಐ ಯುವಜನ ಸಂಘಟನೆ ಹೊಂದಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಪಶ್ಚಿಮ ಬಂಗಾಲದ ಅನುಶೀಲನ್ ಮತ್ತು ಜುಗಾಂತರ್ ಯುವ ಸಮಿತಿಗಳು ಮತ್ತು ಜೊತೆಗಿದ್ದ ಸಂಘಟನೆಗಳು, ಪಂಜಾಬ್‌ನ ಘದರ್ ಆಂದೋಲನ ಮತ್ತು ದೇಶಾದ್ಯಂತ ಯುವ ಕಮ್ಯೂನಿಸ್ಟ್ ಗುಂಪುಗಳು ಮೂಡಿ ಬಂದು ರಾಷ್ಟ್ರೀಯ ವಿಮೋಚನ ಆಂದೋಲನ" ಕ್ಕೆ ಕ್ರಾಂತಿಕಾರಿ ಹುರುಪನ್ನು ನೀಡಿ ಯುವಜನತೆಯಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹೆಚ್ಚಿಸಿದ್ದವು.

ಅಕ್ಟೋಬರ್ ಕ್ರಾಂತಿಯ ಪ್ರಭಾವ

ಇದೇ ಸಂದರ್ಭದಲ್ಲಿ ಜರುಗಿದ್ದ ವಿಶ್ವಾದ್ಯಂತ ಅತ್ಯಂತ ಶಕ್ತಿಶಾಲಿಯಾದ ಘಟನೆಯೆಂದರೆ, ಝಾರ್ ಶಾಹೀ ಆಳ್ವಿಕೆ' ಯನ್ನು ಕಿತ್ತೆಸೆದ ಸಮಾಜವಾದಿ ಸೋವಿಯಟ್ ಒಕ್ಕೂಟ ರಚನೆಯ ಬೆಳವಣಿಗೆ. ಇದು ನಮ್ಮ ದೇಶದ ಸ್ವಾತಂತ್ರ್ಯದ ಚಳುವಳಿಯ ಕಣ್ಣೋಟವನ್ನೇ ಬದಲಿಸಿತು. ಇದರ ಜೊತೆಗೆ.ರಷ್ಯಾದಲ್ಲಿನ ಆಕ್ಟೋಬರ್ ಕ್ರಾಂತಿ (1917)ಯೂ ದೇಶದ ಸ್ವಾತಂತ್ರ್ಯದ ಚಳುವಳಿಗೆ ಹೊಸ ಆಯಾಮವನ್ನೇ ನೀಡಿತು. ಇದರಿಂದ ನಮ್ಮ ದೇಶದ ಯುವಜನರು ಸ್ಫೂರ್ತಿಗೊಂಡರು. ಇದರ ಪರಿಣಾಮ ದೇಶಾದ್ಯಂತ ಹೊಸ ಹೊಸ ಯುವಜನರ ಸ್ವಾತಂತ್ರ್ಯ ಹೋರಾಟದ ಅಲೆಗಳು ಏಳತೊಡಗಿದವು. ಇವುಗಳಲ್ಲಿ ಪ್ರಮುಖವಾಗಿ ಭಗತ್ ಸಿಂಗ್ ಸ್ಥಾಪಿಸಿದ ಮತ್ತು 'ವೈಜ್ಞಾನಿಕ ಸಮಾಜವಾದ'ದ ಕ್ರಾಂತಿಯ ತತ್ವದಿಂದ ಸ್ಫೂರ್ತಿ ಪಡೆದ 'ಭಾರತ್ ನೌಜವಾನ್ ಸಭಾ' ಉದಯಿಸಿತು. ಈ ಸಂದರ್ಭದಲ್ಲಿ ಭೂಮಾಲಿಕ–ಬಂಡವಾಳಿಗರ ಕಾಂಗ್ರೇಸ್ ನೇತೃತ್ವದ ಸ್ವಾತಂತ್ರ್ಯದ ಚಳುವಳಿಗಿಂತ ಭಗತ್ ಸಿಂಗ್ ನೇತೃತ್ವದ ಯುವಜನ ಚಳುವಳಿ ಬ್ರೀಟಿಷ್‌ರಲ್ಲಿ ನಡುಕವನ್ನುಂಟು ಮಾಡಿತ್ತು. ಸ್ವಾತಂತ್ರ್ಯ ಎಂದರೆ ?

ಭಗತ್ ಸಿಂಗ್, ಸುಖ್ ದೇವ್, ರಾಜ್ ಗುರು ಮತ್ತಿತರ ಯುವಜನ ಮತ್ತು ಕಮ್ಯೂನಿಸ್ಟರ ನೇತೃತ್ವದ ಸ್ವಾತಂತ್ರ್ಯ ಚಳುವಳಿಗಳು, ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆ ಅಲ್ಲ, ಬದಲಿಗೆ ಪುರಾತನ ಕಾಲದಿಂದ ಬಂದಿರುವ ಶೋಷಕ ವ್ಯವಸ್ಥೆಯನ್ನು ನಾಶ ಮಾಡಿ ಹೊಸ ಬದಲಾವಣೆಯನ್ನು ತರುವುದೇ ಸ್ವಾತಂತ್ರ್ಯ ಚಳುವಳಿಯೆಂದು ನಂಬಿದ್ದರು. ಹೀಗಾಗಿಯೇ ಬ್ರೀಟಿಷ್ ಸಾಮ್ರಾಜ್ಯಶಾಹಿಗಳು ಯುವಜನರ ಸ್ವಾತಂತ್ರ್ಯದ ಚಳುವಳಿಯನ್ನು ಬಗ್ಗು ಬಡಿಯಲು ಭಗತ್ ಸಿಂಗ್, ರಾಜ್ ಗುರು, ಸುಖ್‌ದೇವ್ ಅಂತಹ ಯುವ ನೇತಾರರನ್ನು ಗಲ್ಲಿಗೇರಿಸಿದ್ದು, ಚಂದ್ರಶೇಖರ ಅಜಾದ್‌ರನ್ನು ಗುಂಡಿಟ್ಟು ಕೊಂದಿದ್ದು, ಇದು ದೇಶದ ಯುವಜನತೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಸಮರಶೀಲತೆಯಿಂದ ತೊಡಗಿಕೊಳ್ಳುವಂತೆ ಪ್ರೇರೇಪಿಸಿತು. ಈ ಸ್ವಾತಂತ್ರ್ಯ ಚಳುವಳಿಯೂ

"ಇರುವೆಲ್ಲವನು ಎಲ್ಲ ಜನಕೆ ಸಮನಾಗಿಸುವ, ಸಮ ಸುಖದ, ಸಮದು:ಖದ, ಸಮಬಗೆಯ ಸಾಮಗಾನ ಲಹರಿಯ ಮೇಲೆ, ತೇಲಿ ಬರಲಿದೆ ನೋಡು ನಮ್ಮ ನಾಡು", "ಸರ್ವರಿಗೂ ಸಮ ಪಾಲು–ಸರ್ವರಿಗೂ ಸಮ ಬಾಳು" ಎಂಬ ಸ್ವಾತಂತ್ರ್ಯದ ಆಶಯಗಳು ಕವಿವಾಣಿಗಳಾಗಿ ದೇಶದ ಉದ್ದಗಲ ಹಬ್ಬಿದವು. ಇದೇ ಸಂದರ್ಭದಲ್ಲಿ ಜಾಗತಿಕ ಮಟ್ಟದಲ್ಲಿ ಫ್ಯಾಸಿಸಂ ವಿರುದ್ಧ ಮತ್ತು ವಸಾಹತುಶಾಹಿ ವಿರೋಧಿ ಭಾವನೆಗಳು ಭುಗಿಲೆದ್ದು ಬರುತ್ತಿದ್ದವು. ರಾಷ್ಟ್ರೀಯ ವಿಮೋಚನಾ ಚಳುವಳಿ ಹೋರಾಟಗಳು ಹೆಚ್ಚುತ್ತಿದ್ದವು. ಎರಡನೆಯ ಮಹಾ ಯುದ್ಧವು ಬಲಿಷ್ಟ ಸಾಮ್ರಾಜ್ಯಶಾಹಿ–ಪಾಳೇಗಾರಿ ವಿರೋಧಿ ಆಂದೋಲನವನ್ನು ಕಂಡಿತ್ತು. ಹೀಗಾಗಿಯೇ 1945 ರಲ್ಲಿ 'ವಿಶ್ವ ಪ್ರಜಾಸತಾತ್ಮಕ ಯುವಜನ ಒಕ್ಕೂಟ' ಸ್ಥಾಪನೆಯಾಯಿತು. ಇದು ನಮ್ಮ ದೇಶದಲ್ಲಿ ಚಳುವಳಿಯಲ್ಲಿ ತೊಡಗಿದ್ದ ಯುವಜನತೆಗೆ ಸೈದ್ಧಾಂತಿಕ ಶಕ್ತಿಯನ್ನು ನೀಡಿತು.

ಆದಿವಾಸಿ ಹಾಗೂ ರೈತ ಬಂಡಾಯಗಳು

ಇದೇ ಸಂದರ್ಭದಲ್ಲಿ ತೇಭಾಗ, ಪುನ್ನಪ್ರೆ ವಯಲಾರ್, ಉತ್ತರ ಮಲಬಾರ್ , ತೆಲಂಗಾಣ, ವಾರ್ಲಿ ಮತ್ತು ತ್ರಿಪುರಾ ಸೇರಿದಂತೆ ಹಲವೆಡೆ ರೈತ ಬಂಡಾಯಗಳು, ಮಹತ್ವದ ಹೋರಾಟಗಳು ನಡೆದವು. ಇವು ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಆಯಾಮ ಒದಗಿಸಿದವು. ಆದರೆ ದೇಶ ಇಭ್ಭಾಗವಾಗಿತ್ತು. ಹೀಗಿದ್ದರೂ 1947 ರ ಸ್ವಾತಂತ್ರ್ಯ ಭಾರತೀಯ ಜನತೆಯಲ್ಲಿ ಪ್ರಗತಿಶೀಲ– ಪ್ರಜಾಸತ್ತಾತ್ಮಕ ಆದರ್ಶಗಳು ಈಡೇರುತ್ತವೆಂಬ ನಿರೀಕ್ಷೆಗಳು ಇದ್ದವು. ಆದರೆ ಯುವಜನತೆಗೆ ಶಿಕ್ಷಣ–ಉದ್ಯೋಗ ಮರೀಚಿಕೆಯಾಗಿತ್ತು. ಎಲ್ಲಾ ನಿರೀಕ್ಷೆಗಳು ಹುಸಿಯಾದವು. ಜನತೆಗೆ ಸಿಕ್ಕ ಸ್ವಾತಂತ್ರ್ಯ ತುಂಬಾ ಸೀಮಿತವಾಗಿತ್ತು. ನಿಜವಾದ ಅಧಿಕಾರ ಭಾರತದ ಬಂಡವಾಳಿಗರ–ಭೂಮಾಲಿಕರ ಕೈಸೇರಿತ್ತು. ಇದರ ಪರಿಣಾಮವಾಗಿ ದೇಶದ ಒಂದು ಅತಿ ಸಣ್ಣ ವಿಭಾಗವಷ್ಟೇ ಅನುಕೂಲ ಪಡೆಯಿತು. ಆದರೆ ಇಡೀ ದೇಶದ ಜನಸಮುದಾಯ ಆರ್ಥಿಕ– ಸಾಮಾಜಿಕ ಸಂಕಷ್ಟಕ್ಕೆ ಒಳಗಾಯಿತು. ಇದರಿಂದಾಗಿ ಯುವಜನತೆ ಹತಾಶೆಗೆ ಒಳಗಾಯಿತು. ಬಹು ಪಾಲು ಯುವಜನ ನಿರುದ್ಯೋಗ, ಅನಕ್ಷರತೆ, ಹಸಿವು, ರೋಗಗಳಿಗೆ ಬಲಿಯಾಗತೊಡಗಿದರು. ಇದು ವಿದ್ಯಾರ್ಥಿ ಯುವಜನರಲ್ಲಿ ಸಂಘಟನೆಯ ಅಗತ್ಯತೆಯನ್ನು ಹೆಚ್ಚಿಸಿತು. ಈ ಪರಿಣಾಮವಾಗಿ ಉದ್ಯೋಗ ಮತ್ತು ಅಭಿವೃದ್ಧಿ ಹಾಗೂ ಸಾಮಾಜಿಕ ಹಿಂದುಳಿಯುವಿಕೆಯಂತಹ ಪ್ರಶ್ನೆಗಳನ್ನು ಕೈಗೆತ್ತುಕೊಂಡ ಯುವಜನತೆಯ ಗುಂಪುಗಳು ಅಖಿಲ ಭಾರತ ಯುವಜನ ಸಂಘಟನೆಯ ರಚನೆಗೆ ಹಾದಿ ಮಾಡಿಕೊಟ್ಟವು. ಈ ಅವಧಿಯಲ್ಲಿ ಯುವಜನರು ಪ್ರಜಾಸತ್ತಾತ್ಮಕ, ಸಾಮ್ರಾಜ್ಯಶಾಹಿ ವಿರೋಧಿ, ಪಾಳೇಗಾರಿ ವಿರೋಧಿ ಮತ್ತು ಜಾತ್ಯಾತೀತ–ಪ್ರಗತಿಪರ ದಿಕ್ಕುಗಳಲ್ಲಿ ಸಂಘಟನೆಗೊಳ್ಳುವ ಕೆಲಸ ಆರಂಭವಾಯಿತು.



BHAGAT SINGH SUKHDEV RAJGURU

ಸೈದ್ದಾಂತಿಕ ಭಿನ್ನತೆಗಳು

ಇದೇ ಸಂದರ್ಭದಲ್ಲಿ ಯುವಜನ ಚಳುಳಿಯ ಒಂದು ವಿಭಾಗ ಭಾರತೀಯ ಪ್ರಭುತ್ವ ಪ್ರಗತಿಶೀಲವಾಗಿದೆ. ಇದು ಬಡತನ, ನಿರುದ್ಯೋಗ ಮತ್ತು ಅನಕ್ಷರತೆಯನ್ನು ನಿರ್ಮೂಲನೆ ಮಾಡಿ ನಮ್ಮನ್ನು ಸಮಾಜವಾದದ ದಾರಿಯಲ್ಲಿ ಕಂಡೊಯ್ಯುತ್ತದೆಂಬ ವಾದವನ್ನು ಹೊಂದಿದ್ದರು. ಇದು ಕಾಂಗ್ರೇಸ್ ಆಳ್ವಿಕೆಯನ್ನು ಒಪ್ಪುವಂತೆ ಮಾಡಿತ್ತು. ಆದರೆ ಇನ್ನೊಂದು ಬಹುದೊಡ್ಡ ಯುವಜನ ವಿಭಾಗವು ಕಾಂಗ್ರೆಸ್ ಆಳ್ವಿಕೆ ಬಂಡವಾಳ–ಭೂಮಾಲಿಕರ ಹಿತ ಕಾಯುತ್ತದೆಯೇ ಹೊರತು ನಮ್ಮ ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ. ಹೀಗಾಗಿ ಈ ದುರಾಡಳಿತದ ವಿರುದ್ಧ ಸಂಘರ್ಷದ ಅಗತ್ಯವಿದೆಯೆಂಬ ನಿಲುವು ತಳೆಯಿತು. ವಾದ ವಿವಾದಗಳು ಹೆಚ್ಚಿದವು. ಈ ರೀತಿಯಲ್ಲಿನ ಚರ್ಚೆಗಳು ಅಂತಿಮವಾಗಿ ವಿವಿಧ ರಾಜ್ಯ ಮಟ್ಟದ ಯುವಜನ ಸಂಘಟನೆಗಳ ರಚನೆಗೆ ಹಾದಿ ಮಾಡಿಕೊಟ್ಟವು. ಇವುಗಳಲ್ಲಿ ಪ್ರಮುಖವಾಗಿ ಪಶ್ಚಿಮ ಬಂಗಾಲ, ತ್ರಿಪುರ, ಕರ್ನಾಟಕ, ಅಸ್ಸಾಂ ರಾಜ್ಯಗಳಲ್ಲಿ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟಗಳು. ಕೇರಳದ ಸಮಾಜವಾದಿ ಯುವಜನ ಒಕ್ಕೂಟ. ಪಂಜಾಬ್, ಉತ್ತರ ಪ್ರದೇಶ ಮತ್ತು ರಾಜಸ್ತಾನದಲ್ಲಿ ನೌಜವಾನ್ ಸಭಾ. ತಮಿಳುನಾಡಿನ ಸಮಾಜವಾದಿ ಯುವಜನ ರಂಗ ಮತ್ತು ಆಂಧ್ರ ಪ್ರದೇಶದ ಪ್ರಜಾತಂತ್ರ ಯುವಸಂಘ ಮುಂತಾದವು ಸಂಘಟಿತಗೊಂಡು ದೇಶಾದ್ಯಂತ ಯುವಜನಾಂದೋಲನಕ್ಕೆ ಮುಂದಾದವು. ಅಷ್ಟೇ ಅಲ್ಲ ಇಂದಿರಾಗಾಂಧಿ ಹೇರಿದ ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟದಲ್ಲಿ ಯುವಜನರನ್ನು ಅಣಿ ನೆರೆಸುವುದರಲ್ಲಿ ಯಶಸ್ವಿಯಾದವು. ಸರ್ವಾಧಿಕಾರಿ ಆಳ್ವಿಕೆಯನ್ನು ಪ್ರತಿರೋಧಿಸಲು ಯುವಜನ ದೊಡ್ಡ ರೀತಿಯಲ್ಲಿ ಮುಂದೆ ಬಂದರು. ಈ ಹೋರಾಟದಲ್ಲಿ ಯುವಜನರು ಪ್ರಧಾನ ಶಕ್ತಿಯಾಗಿದ್ದರು. ತುರ್ತು ಪರಿಸ್ಥಿತಿಯನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾದ್ದರಿಂದ ಹಿಂದೆಂದೂ ಕಾಣದ ರೀತಿಯಲ್ಲಿ ಯುವಜನ ಮುಂದೆ ಬಂದು ಬದುಕುವ ಪ್ರತಿಯೊಂದು ವಲಯದಲ್ಲೂ ತಮ್ಮ ಸ್ಥಾನವನ್ನು ಪಡೆದರು. ರಾಷ್ಟ್ರೀಯ ಐಕ್ಯತೆ, ಜಾತ್ಯಾತೀತತೆ ಮತ್ತು ಸಾಮಾಜಿಕ ಪ್ರಗತಿಯ ಶಕ್ತಿಗಳನ್ನು ಹರಿಯ ಬಿಡಬೇಕಾದರೆ ಸರ್ವಾಧಿಕಾರಿಶಾಹಿ, ವಿಭಜನಾಕಾರಿ ಮತ್ತು ಕೋಮುವಾದಿ ಶಕ್ತಿಗಳಿಂದ ಪ್ರತ್ಯೇಕಿಸಿಕೊಳ್ಳಬೇಕೆಂಬುದು ಸ್ವಯಂ ವೇದ್ಯವಾಗುತ್ತಿತ್ತು.

ಡಿವೈಎಫ್‌ಐ ಉದಯ

ಈ ಪ್ರಕ್ರಿಯೆಗೆ ಅನುವು ಮಾಡಿಕೊಡಲು ಒಂದು ಪರ್ಯಾಯ ಸಾಮಾಜಿಕ ಹಾಗೂ ಆರ್ಥಿಕ ದಿಕ್ಕು ನೀಡಲು ಭಾರತ ಪ್ರಜಾಸತಾತ್ಮಕ ಯುವಜನ ಫೆಡರೇಶನ್ (ಡಿವೈಎಫ್‌ಐ) ಯುವಜನ ಸಂಘಟನೆ 1980 ರಲ್ಲಿ ಪಂಜಾಬ್‌ನಲ್ಲಿನ ಲೂಧಿಯಾನದಲ್ಲಿ ಮೊದಲ ಅಖಿಲ ಭಾರತ ಸಮ್ಮೇಳನದಲ್ಲಿ ಉದಯಿಸಿತು. 1980ರಿಂದ ಡಿವೈಎಫ್‌ಐ ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ದೇಶದಲ್ಲೇ ಅತಿದೊಡ್ಡ ಯುವಜನ ಸಂಘಟನೆಯಾಗಿ ಹೊರಹೊಮ್ಮಿದೆ. 'ಎಲ್ಲರಿಗೂ ಶಿಕ್ಷಣ–ಎಲ್ಲರಿಗೂ ಉದ್ಯೋಗ' ಎಂಬ ಘೋಷಣೆಯನ್ನು ಅಂದೇ ರೂಪಿಸಲಾಯಿತು. ಈ ಧ್ಯೇಯಗಳನ್ನು ಈಡೇರಿಸಲು ನೂರಾರು ಸಂಗಾತಿಗಳು ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಹಾಗೂ ವಿಭಜನಾಕಾರಿ ಮತ್ತು ಆಳುವ ವರ್ಗಗಳ ಶಕ್ತಿಗಳಿಂದ ಹತ್ಯೆಗೊಳಗಾಗಿದ್ದಾರೆ. ಅಸ್ಸಾಂ, ಪಂಜಾಬ್, ಪಶ್ಚಿಮ ಬಂಗಾಲ, ತ್ರಿಪುರ ಮತ್ತಿತ್ತರ ರಾಜ್ಯಗಳಲ್ಲಿ ವಿಭಜನಾಕಾರಿ ಶಕ್ತಿಗಳಿಂದ ಇಂದಿಗೂ ಡಿವೈಎಫ್‌ಐ ಮುಖಂಡರು ಹತ್ಯೆಗೆ ಗುರಿಯಾಗುತ್ತಿದ್ದಾರೆ. ಇಂತಹ ಸ್ವಾತಂತ್ರ್ಯ

ಪುಟ 6 ಕ್ಕೆ

ಗ್ರಾಮ ಪಂಚಾಯತ್ ನೌಕರರ ಧರಣಿ ಮುಷ್ಕರ:

ಗ್ರಾಮ ಪಂಚಾಯತ್ ನೌಕರರ ಜೇಷ್ಠತಾ ಪಟ್ಟಿಗನುಸಾರವಾಗಿ ಗ್ರಾಮ ಪಂಚಾಯತುಗಳಲ್ಲಿ ತೆರವಾಗಿರುವ ಕಾರ್ಯದರ್ಶಿ ಮತ್ತು ಲೆಕ್ಕ ಸಹಾಯಕಿ ಹುದ್ದೆಗಳಿಗೆ ಶೀಘ್ರವೇ ನೇಮಕ ಆದೇಶ ನೀಡಬೇಕು. ಗ್ರಾ.ಪಂ.ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವ ಪಂಪ್



ಆಪರೇಟರ್‌ಗಳಿಗೆ ಕೆಲಸದ ಭದ್ರತೆ ನೀಡಬೇಕು, ಮೂರು ವರ್ಷಗಳಿಂದ ಬಾಕಿ ಇರುವ ತುಟ್ಟಿಭತ್ತೆಯನ್ನು ಒಂದೇ ಕಂತಿನಲ್ಲಿ ನೀಡಬೇಕು, ಜನಶ್ರೀ ವಿಮಾ ಯೋಜನೆಯನ್ನು ತತ್‌ಕ್ಷಣ ಜಾರಿಮಾಡಬೇಕು ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಸಿಐಟಿಯು ಸಂಯೋಜಕ ದ.ಕ. ಜಿಲ್ಲಾ ಗ್ರಾ.ಪಂ. ನೌಕರರ ಸಂಘದ ನೇತೃತ್ವದಲ್ಲಿ ದ.ಕ. ಜಿಲ್ಲಾ ಪಂಚಾಯತ್ ಕಚೇರಿ ಎದುರು ಜುಲಾಯಿ 9 ರಂದು ಹಗಲು ರಾತ್ರಿ ಧರಣಿ ಮುಷ್ಕರವನ್ನು ಆರಂಭಿಸಲಾಯಿತು.

ಈ ಹಿಂದೆ ಮೇಲಿನ ಬೇಡಿಕೆಗಳಿಗಾಗಿ ಜಿಲ್ಲಾ ಪಂಚಾಯತ್ ಎದುರು ಪ್ರತಿಭಟನೆ ನಡೆಸಿದಾಗ, ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದರೂ ಪ್ರಮುಖ ಬೇಡಿಕೆಗಳನ್ನು ಜಿಲ್ಲಾ ಪಂಚಾಯತ್ ಇತ್ಯರ್ಥಗೊಳಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಆಹೋ ರಾತ್ರಿ ಧರಣೆಗಾಗಿ ಸಿದ್ಧರಾಗಿ ಗ್ರಾ.ಪಂ.ನೌಕರರು ಬಟ್ಟೆಬರೆಗಳೊಂದಿಗೆ ನೂರಕ್ಕೂ ಮೀರಿದ ಸಂಖ್ಯೆಯಲ್ಲಿ ಬಂದು ಭಾಗವಹಿಸಿದರು.

ಧರಣಿ ಸತ್ಯಾಗ್ರಹವನ್ನು ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಉದ್ಘಾಟಿಸಿ ಮಾತನಾಡಿದರು. ದ.ಕ.ಜಿಲ್ಲಾ ಗ್ರಾ.ಪಂ. ನೌಕರರ ಸಂಘದ ಅಧ್ಯಕ್ಷ ಯಾದವ ಶೆಟ್ಟಿ, ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಕೃಷ್ಣಪ್ಪ ಸಾಲ್ಯಾನ್, ವಾಸುದೇವ ಉಚ್ಚಿಲ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಗ್ರಾ.ಪಂ. ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಜಯರಾಮ್ ಮಾಸ್ಟರ್ ಮತ್ತಿತರರು ಧರಣಿಯ ನೇತೃತ್ವ ವಹಿಸಿದ್ದರು.

ಸಂಜೆಯ ವೇಳೆಗೆ ಜಿ.ಪಂ.ಅಧ್ಯಕ್ಷ ಉಪಾಧ್ಯಕ್ಷೆ ಹಾಗೂ ಅಧಿಕಾರಿಗಳು ಧರಣಿ ಸ್ಥಳಕ್ಕೆ ಆಗಮಿಸಿ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ ಮೇರೆಗೆ, ಧರಣಿ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿದೆ.


ವರದಿ : ವಾ.ಉ.

ಮೆಸ್ಕಾಂ ಗುತ್ತಿಗೆ ಕಾರ್ಮಿಕರ ಅನಿರ್ದಿಷ್ಟಾವಧಿ ಮುಷ್ಕರ:

ಸೇವೆಯನ್ನು ಖಾಯಂ ಗೊಳಿಸುವುದು ಸಹಿತ ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಮೆಸ್ಕಾಂ ಗುತ್ತಿಗೆ ನೌಕರರು ಸಿಐಟಿಯು ಸಂಯೋಜಿತ ತಮ್ಮ ಸಂಘದ ನೇತೃತ್ವದಲ್ಲಿ ಜುಲಾಯಿ 10 ರಂದು ಮಂಗಳೂರಿನ ಮೆಸ್ಕಾಂ ಕಚೇರಿಯ ಎದುರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು.

ಮೆಸ್ಕಾಂ ಅಸ್ತಿತ್ವಕ್ಕೆ ಬರುವ ಮುನ್ನ ವಿದ್ಯುನ್ಮಂಡಲಿಯ ಸೇವೆಯಲ್ಲಿದ್ದವರು ಈಗಲೂ ತಾತ್ಕಾಲಿಕ ಸೇವೆಯಲ್ಲಿಯೇ ಮುಂದವರಿದಿದ್ದಾರೆ. ಗುತ್ತಿಗೆ ನೌಕರರಿಗೂ 1979ರ ಗುತ್ತಿಗೆ ಕಾರ್ಮಿಕರ ಕಾಯ್ದೆ ಪ್ರಕಾರ ವೇತನ ಚೀಟಿ, ಭವಿಷ್ಯನಿಧಿ, ರಜೆ ಸಂಬಳ, ಬೋನಸ್ ಸೌಲಭ್ಯ ನೀಡಬೇಕು, ಕೆಲಸದಿಂದ ತೆಗೆದು ಹಾಕಿದ ಕಾರ್ಮಿಕರನ್ನು ಮರು ನೇಮಕ ಮಾಡಿಕೊಳ್ಳಬೇಕು ಎಂಬುದಾಗಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಆಗ್ರಹಿಸಿದರು.

'ಬೇಡಿಕೆ ಈಡೇರಿಸದಿದ್ದರೆ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ 15 ದಿನ ಮೊದಲೇ ಮೆಸ್ಕಾಂಗೆ ಮನವಿ ನೀಡಿದ್ದೇವೆ. ಆದರೂ ವ್ಯವಸ್ಥಾಪಕ ನಿರ್ದೇಶಕರು ಸ್ಪಂದಿಸಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ಮುಖಂಡರಾದ ಬಿ.ಎಂ.ಭಟ್, ಎಸ್.ಎಂ.ಶಿವಕುಮಾರ್, ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ ಮತ್ತು ದ.ಕ.ಜಿಲ್ಲೆಗಳ ಗುತ್ತಿಗೆ ಕಾರ್ಮಿಕರು ಇನ್ನೂರು ಮಂದಿ ಧರಣಿಯಲ್ಲಿ ಭಾಗವಹಿಸಿದ್ದರು. ಸಂಘದ ಕಾರ್ಯದರ್ಶಿ ಮಹೇಶ್ ಸ್ವಾಗತಿಸಿ ವಂದಿಸಿದರು.

ಡಿವೈಎಫ್‌ಐನ ಐತಿಹಾಸಿಕ ಹೆಜ್ಜೆ ಗುರುತುಗಳು

ಪುಟ 5 ರಿಂದ

ಚಳುವಳಿಯ ಪರಂಪರೆ ಇರುವ ಡಿವೈಎಫ್‌ಐ ದೇಶಾದ್ಯಂತ ಯುವಜನತೆಯ ಆಶಾಕಿರಣವಾಗಿ ಹೊರಹೊಮ್ಮುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಅಂದರೆ, 1991 ರ ಹೊಸ ಆರ್ಥಿಕ ನೀತಿಗಳ ಪರಿಣಾಮ ಜನತೆಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು ಒದಗಿಸುವ ಜವಾಬ್ದಾರಿಯಿಂದ ಆಳುವ ಸರ್ಕಾರಗಳು ಜಾರಿಕೊಳ್ಳುತ್ತಿವೆ. ಹೀಗಾಗಿ ಖಾಸಗಿ ಒಡೆತನ ಹೆಚ್ಚಾಗಿ ಕೇವಲ ಕೆಲವೇ ಕೆಲವರು ಮಾತ್ರ ಅನುಕೂಲ ಪಡೆದು ಇನ್ನುಳಿದ ಬಹುತೇಕ ಜನತೆ ಕನಿಷ್ಟ ಜೀವನದ ಅಗತ್ಯಗಳನ್ನು ಪಡೆಯಲಾಗದೆ ಪರಿತಪಿಸುತ್ತಿದ್ದಾರೆ. ಇಂತಹ ಶೋಷಣೆಯ ಸಂಕೋಲೆಗಳಿಂದ ಜನತೆಯು ಮುಕ್ತಿ ಹೊಂದಲು, ಕಾರ್ಮಿಕರು, ರೈತರು, ಮಹಿಳೆಯರು, ವಿದ್ಯಾರ್ಥಿಗಳು ಇತರ ಪ್ರಗತಿಪರ ಶಕ್ತಿಗಳ ವಿಶಾಲ ಪ್ರಜಾಪ್ರಭುತ್ವದ ಆಂದೋಲನದಲ್ಲಿ ಡಿವೈಎಫ್‌ಐ ಒಂದು ಪ್ರಮುಖ ಅವಿಭಾಜ್ಯ ಅಂಗವಾಗಿದೆ.

9ನೇ ಅಖಿಲ ಭಾರತ ಯುವಜನ ಸಮ್ಮೇಳನ ಬೆಂಗಳೂರಿನಲ್ಲಿ

ಹೀಗಾಗಿ ಯುವಜನರನ್ನು ವಿಭಜಿಸುವ, ದುರ್ಬಲಗೊಳಿಸುತ್ತಿರುವ ದುಷ್ಟ ಶಕ್ತಿಗಳ ವಿರುದ್ಧ ಕಾರ್ಮಿಕ, ರೈತ, ವಿದ್ಯಾರ್ಥಿಗಳು ಮತ್ತು ಪ್ರಗತಿಪರ ಬುದ್ಧಿಜೀವಿಗಳೊಡಗೂಡಿ ಶೋಷಣೆ ಮತ್ತು ದಮನದಿಂದ ಮುಕ್ತವಾದ 'ಸಮ ಸಮಾಜ'ವನ್ನು ಹೊಂದಲು ನಡೆಯುವ ಆಂದೋಲನದಲ್ಲಿ ಯುವಜನತೆಯನ್ನು ತೊಡಗಿಸಿಕೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ ಎಲ್ಲರಿಗೂ ಶಿಕ್ಷಣ– ಎಲ್ಲರಿಗೂ ಉದ್ಯೋಗದ ಪರಿಕಲ್ಪನೆ. ಸರ್ಕಾರಿ ಮತ್ತು ಖಾಸಗಿ ಉದ್ಯೋಗಗಳ ಭದ್ರತೆ. ಯುವಜನತೆಯ ಬಹು ಕ್ರೀಡಾ–ಸಾಂಸ್ಕೃತಿಕ ವಿಕಸನ. ಹಾಗೂ ಜನತೆಯನ್ನು ದೈನಂದಿನವಾಗಿ ಬಾಧಿಸುವ ಸಮಸ್ಯೆಗಳ ವಿರುದ್ಧ ಯುವನಜತೆಯನ್ನು ಡಿವೈಎಫ್‌ಐ ಸಂಘಟಿಸುತ್ತಿದೆ. ಇಂತಹ ದೇಶಪ್ರೇಮಿ ಚಳುವಳಿಯನ್ನು ಮತ್ತಷ್ಟು ಬಲಿಷ್ಠಗೊಳಿಸಲು, ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ 'ಉತ್ತಮ ಭಾರತಕ್ಕಾಗಿ ಯುವಜನರ ಸಶಕ್ತೀಕರಣ' ಎಂಬ ಘೋಷಣೆಯಡಿಯಲ್ಲಿ ಡಿವೈಎಫ್‌ಐನ 9ನೇ ಅಖಿಲ ಭಾರತ ಸಮ್ಮೇಳನವು ಕರ್ನಾಟಕದ ರಾಜಧಾನಿ ಬೆಂಗಳೂರು ಮಹಾನಗರದಲ್ಲಿ ಸೆ.11 ರಿಂದ ಸೆ. 15, 2012ರವರೆಗೆ ನಡೆಯುತ್ತಿದೆ. ಪ್ರಜಾಸತ್ತಾತ್ಮಕ ಯುವಜನ ಚಳುವಳಿಯನ್ನು ಪ್ರೀತಿಸುವ, ಬಯಸುವ, ಬೆಂಬಲಿಸುವ ಎಲ್ಲರೂ ಸಮ್ಮೇಳನದ ಯಶಸ್ಸಿಗೆ ಕೈಜೋಡಿಸಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಿದೆ. ಇತರರನ್ನೂ ತೊಡಗಿಸಬೇಕಿದೆ.

ರೈಲು ವೇಳಾಪಟ್ಟಿ ಬದಲಾವಣೆ ವಿರೋಧಿಸಿ ಎಸ್‌ಎಫ್‌ಐ ಪ್ರತಿಭಟನೆ

ರೈಲು ವೇಳಾಪಟ್ಟಿ ಬದಲಾವಣೆಯಿಂದ ಮಂಗಳೂರು ನಗರದಲ್ಲಿರುವ ವಿವಿಧ ಕಾಲೇಜಿನ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಆಗಿರುವ ತೊಂದರೆಯನ್ನು ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಶನ್



ದ.ಕ. ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಜುಲಾಯಿ 4 ರಂದು ಮಂಗಳೂರು ಸೆಂಟ್ರಲ್ ರೈಲ್ವೇ ನಿಲ್ದಾಣದ ಎದುರು ಪ್ರತಿಭಟನೆ ನಡೆಸಲಾಯಿತು.

ಮಂಗಳೂರು ನಗರದಲ್ಲಿರುವ ಕಾಲೇಜುಗಳಿಗೆ ಕೇರಳದಿಂದ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ಬರುತ್ತಿದ್ದು, ಚೆರ್ವತ್ತೂರು–ಮಂಗಳೂರು ಪ್ಯಾಸೆಂಟರ್ ರೈಲು ಮಿತವ್ಯಯದ ಪ್ರಯಾಣಕ್ಕೆ ಅನುಕೂಲವಾಗಿತ್ತು. ಮಂಗಳೂರಿಗೆ ಕಾಲೇಜು ವೇಳೆಗೂ ಮುಂಚಿತವಾಗಿ ತಲುಪುವ ಪ್ಯಾಸೆಂಜರ್ ರೈಲು ಅದೊಂದೇ ಆಗಿದ್ದು, ಅದನ್ನು ಜುಲಾಯಿ 1 ರಿಂದ ತಡವಾಗಿ ಮಂಗಳೂರು ತಲುಪುವಂತೆ ಇಲಾಖೆಯು ವೇಳಾಪಟ್ಟಿ ಬದಲಾವಣೆ ಮಾಡಿತ್ತು. ಇದರಿಂದ ವಿದ್ಯಾರ್ಥಿಗಳಿಗೆ ಸಕಾಲಕ್ಕೆ ಕಾಲೇಜು ತಲುಪಲು ತೊಂದರೆ ಆಗುವದಿತ್ತು. ವೇಳಾಪಟ್ಟಿಯನ್ನು ಬದಲಾಯಿಸದೆ ಈ ಹಿಂದಿನಂತೆಯೇ ಮುಂದುವರೆಸಬೇಕು ಎಂದು ಆಗ್ರಹಿಸಿ ಎಸ್‌ಎಫ್‌ಐ ಈ ಪ್ರತಿಭಟನೆ ಆಯೋಜಿಸಿತ್ತು.

ಪ್ರತಿಭಟನೆಯನ್ನು ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ನಿತಿನ್ ಕುತ್ತಾರ್, ಕಾರ್ಯದರ್ಶಿ ರಜಾಕ್ ಮೊಂಟೆಪದವು, ಮಂಗಳೂರು ನಗರ ಸಮಿತಿ ಅಧ್ಯಕ್ಷ ಚರಣ್ ಪಂಜಿಮೊಗರು, ಕಾರ್ಯದರ್ಶಿ ರಿತೇಶ್, ಹಂರ್ಷು ಕಿನ್ಯ ಮುತ್ತಿತರರು ಭಾಗವಹಿಸಿದ್ದರು.

ಎಸ್‌ಎಫ್‌ಐ ಹಾಗೂ ಸಾರ್ವಜನಿಕರು ನಡೆಸಿದ ಪ್ರತಿಭಟನೆ ಹಾಗೂ ಮನವಿಯನ್ನು ಪರಿಗಣಿಸಿ, ರೈಲ್ವೇ ಇಲಾಖೆಯು ಜುಲಾಯಿ 13 ರಿಂದ ಜಾರಿಯಾಗುವಂತೆ ವೇಳಾಪಟ್ಟಿಯನ್ನು ಮರುಪರಿಷ್ಕರಿಸುವುದು ಎಸ್‌ಎಫ್‌ಐ ಹೋರಾಟಕ್ಕೆ ಸಂದ ಜಯವಾಗಿದೆ.

ಮಿಸ್ಟರ್ ಪಿ.ಸಿ. ಯಾವ ಐಸ್‌ಕ್ರೀಮ್‌ನ ಬಗ್ಗೆ ಮಾತಾಡುತ್ತಿದ್ದಾರೆ?

'ಪೀಪಲ್ಸ್ ಡೆಮಾಕ್ರಸಿ' ವಾರ ಪತ್ರಿಕೆಯ ಜುಲೈ 12, 2012 ರ ಸಂಚಿಕೆಯ ಸಂಪಾದಕೀಯ

ಈ ದೇಶದಲ್ಲಿ ಹೇಗೋ ಬದುಕುಳಿಯಲು ಹೆಣಗುತ್ತಿರುವವರು ಮಿನರಲ್ ವಾಟರ್, ಐಸ್‌ಕ್ರೀಮ್‌ಗಳಿಗೆ ಹಣ ಖರ್ಚು ಮಾಡಬಲ್ಲ ಜನಗಳಲ್ಲ. ಚಿದಂಬರಂ ಹೇಳುವ ಐಸ್‌ಕ್ರೀಮ್ ಬೆಲೆಯಷ್ಟನ್ನೂ ತಮ್ಮ ಸಕಲ ಅಗತ್ಯಗಳಿಗೆ ಖರ್ಚು ಮಾಡಲಾರದ ಭಾರತೀಯರ ಸಂಖ್ಯೆ ಸುಮಾರು 80 ಕೋಟಿ ಎಂದು ಪ್ರಧಾನ ಮಂತ್ರಿಗಳೇ ನೇಮಿಸಿದ ಸಮಿತಿಯ ಅಂದಾಜು ಹೇಳುತ್ತದೆ. ರೈತರಿಗೆ ನೀಡುವ ಕನಿಷ್ಟ ಬೆಂಬಲ ಬೆಲೆಗಳನ್ನು ಹೆಚ್ಚಿಸಿದ್ದರಿಂದಾಗಿ ಆಹಾರಧಾನ್ಯಗಳ ಬೆಲೆಗಳು ಏರಿಯೇ ಏರುತ್ತವೆ ಎಂಬ ಅವರ ಸಬೂಬು ಒಪ್ಪತಕ್ಕಂತದ್ದಲ್ಲ. ಜನತೆಗೆ ಒದಗಿಸುವ ಆಹಾರಧಾನ್ಯಗಳ ಮಾರಾಟ ಬೆಲೆಗೆ ಸಬ್ಸಿಡಿ ನೀಡಲು ಸರಕಾರದ ಬಳಿ ಸಾಕಷ್ಟು ಸಂಪನ್ಮೂಲಗಳಿಲ್ಲ ಎಂಬುದು ಜನಗಳಿಗೆ ಮಾಡುತ್ತಿರುವ ಅತಿ ದೊಡ್ಡ ಮೋಸ. ಇದಕ್ಕೆ ಸಂಪನ್ಮೂಲಗಳ ಕೊರತೆಯೇನಿಲ್ಲ. ನಿಜಸಂಗತಿಯೆಂದರೆ, ಈ ಯುಪಿಎ–2 ಸರಕಾರದಲ್ಲಿ ರಾಜಕೀಯ ಇಚ್ಛಾಶಕ್ತಿಯ ಸಂಪೂರ್ಣ ಕೊರತೆಯಿದೆ.

ಕೇಂದ್ರ ಗೃಹಮಂತ್ರಿ ಶ್ರೀ ಪಿ.ಚಿದಂಬರಂ ಇತಿಹಾಸದ 'ರಿವೈಂಡ್' ಗುಂಡಿಯನ್ನು ಒತ್ತಿರುವಂತೆ ಕಾಣುತ್ತದೆ. ಜನಗಳಿಗೆ ನೀರಿನ ಒಂದು ಬಾಟಲಿಗೆ 15 ರೂ., ಒಂದು ಐಸ್‌ಕ್ರೀಮ್‌ಗೆ 20 ರೂ. ಖರ್ಚು ಮಾಡಲು ಸಾಧ್ಯವಿದ್ದರೆ, ಅಕ್ಕಿ ಅಥವ ಗೋದಿಯ ಬೆಲೆಯನ್ನು 1ರೂ.ನಷ್ಟು ಹೆಚ್ಚಿಸಿದಾಗ ಏಕೆ ದೊಡ್ಡ ಗುಲ್ಲೆಬ್ಬಿಸುತ್ತಾರೆ ಎಂದು ಅವರು ಪ್ರಶ್ನಿಸಿರುವುದಾಗಿ ವರದಿಯಾಗಿದೆ.

'ಬ್ರೆಡ್ ಸಿಗದಿದ್ದರೆ ಕೇಕ್ ತಿನ್ನಲಿ' ಎಂದು ಫ್ರೆಂಚ್ ಕ್ರಾಂತಿಯ ಮುನ್ನಾದಿನ ರಾಣಿ ಮೇರಿ ಅಂಟೋಯ್ನೆಂಟ್ ಉದ್ಗರಿಸಿದಳೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ನ್ಯಾಯವಾಗಿ ಹೇಳಬೇಕಾದರೆ, ಆಕೆ ಈ ಪದಗಳನ್ನು ಉದ್ಗರಿಸಿದ್ದಳು ಎನ್ನುವುದಕ್ಕೆ ದಾಖಲೆಯೇನೂ ಇಲ್ಲ. ಪ್ರಖ್ಯಾತ ಫ್ರೆಂಚ್ ತತ್ವಜ್ಞಾನಿ ಜೀನ್ ಜಾಕ್ವೆ ರೂಸೋ 1765 ರಲ್ಲಿ ಬರೆದ ಒಂದು ತೆರನ ಆತ್ಮಚರಿತ್ರೆಯ ಸ್ವರೂಪದ 'ತಪ್ಪೊಪ್ಪಿಗೆಗಳು' ಎಂಬ ಕೃತಿಯಲ್ಲಿ ಇಂತಹ ಒಂದು ಉದ್ಗಾರ ಬರುತ್ತದೆ. ಆಗ ರಾಣಿ ಮೇರಿ ಅಂಟೋಯ್ನೆಂಟ್ ವಯಸ್ಸು ಕೇವಲ ಒಂಭತ್ತು ವರ್ಷ. ಬೇರೆ ಸಂಸ್ಕೃತಿಗಳಲ್ಲೂ ಇಂತಹ ಕತೆಗಳು ಸಿಗುತ್ತವೆ. ಚೀನೀಯರು ಸಾಮ್ರಾಟ ಹುಯಿಗೆ ಸಂಬಂಧಪಟ್ಟಂತೆ ಇಂತಹುದೇ ಒಂದು ಕತೆ ಹೇಳುತ್ತಾರೆ. ಅಲ್ಲಿ ಬ್ರೆಡ್, ಕೇಕ್ ಬದಲು ಅಕ್ಕಿ ಮತ್ತು ಮಾಂಸ ಇದೆ. ನಾವೇಕೆ ಹಿಂದುಳಿಯಬೇಕು, ಅಥವ ಇಂತಹ ಸಾಂಸ್ಕೃತಿಕ ಬಳುವಳಿಗಳಿಲ್ಲದೇ ಇರಬೇಕು ಎಂದು ಎರಡು ಶತಮಾನಗಳ ನಂತರ ನಮ್ಮ ಗೃಹಮಂತ್ರಿಗಳು ಆ ಸಾಲಿಗೆ ಸೇರಬಯಸುವಂತೆ ಕಾಣುತ್ತಿದೆ.

ಎರಡು ಭಾರತಗಳ ಅನುಮೋದನೆ!

ಹೇಗೋ ಬದುಕುಳಿಯಲು ಹೆಣಗುತ್ತಿರುವವರು ಮಿನರಲ್ ವಾಟರ್, ಐಸ್‌ಕ್ರೀಮ್‌ಗಳಿಗೆ ಹಣ ಖರ್ಚು ಮಾಡಬಲ್ಲ ಜನಗಳಲ್ಲ. ರಾಷ್ಟ್ರೀಯ ಮಾದರಿ ಸರ್ವೆ ಸಂಘಟನೆ(ಎನ್‌ಎಸ್‌ಎಸ್‌ಒ)ಯ ಕುಟುಂಬ ಖರ್ಚು ಕುರಿತ ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ, ಭಾರತದ ಪ್ರತಿಯೊಂದು ರಾಜ್ಯದಲ್ಲಿ 60ಶೇ.ಕ್ಕಿಂತ ಹೆಚ್ಚು ಮಂದಿ ಬಡತನದ ರೇಖೆಯ ಕೆಳಗಿದ್ದಾರೆ. ಈ ಬಡತನದ ಮಟ್ಟ ಎಂದರೆ ಒಂದು ದಿನ ಮಾಡಬಹುದಾದ ಒಟ್ಟು ಖರ್ಚು ಯೋಜನಾ ಆಯೋಗದ ಅಸಂಬದ್ಧ ನಿರೂಪಣೆಗಳ ಪ್ರಕಾರ ಸುಮಾರಾಗಿ ಗೃಹ ಮಂತ್ರಿಗಳು ಹೇಳುವ ಒಂದು ಐಸ್‌ಕೀಮ್‌ನ ಬೆಲೆಯಷ್ಟೇ. ಕೆಲವು ರಾಜ್ಯಗಳಲ್ಲಿ 60ಶೇ.ಕ್ಕೂ ಹೆಚ್ಚು ಮಂದಿ ಇಷ್ಟು ಖರ್ಚು ಮಾಡಲಾರದವರಿದ್ದಾರೆ. ಬಡತನದ ಲೆಕ್ಕಾಚಾರವನ್ನು ವಾಸ್ತವಿಕ ಆಧಾರದಲ್ಲಿ ಮಾಡಿದರೆ ಭಾರತದ ನಾಲ್ಕನೇ ಐದರಷ್ಟು ಮಂದಿ, ಅಂದರೆ ಸುಮಾರು 80 ಕೋಟಿ ಮಂದಿ ಬಡತನದ ರೇಖೆಯ ಕೆಳಗೆ ಇದ್ದಾರೆ. ಇದು ದಿವಂಗತ ಅರ್ಜುನ್ ಸೇನ್‌ಗುಪ್ತ ಅಧ್ಯಕ್ಷತೆಯ (ಸ್ವತಃ ಪ್ರಧಾನ ಮಂತ್ರಿಗಳೇ ನೇಮಿಸಿದ) ಸಮಿತಿಯ ಅಂದಾಜಿಗೆ ತಾಳೆಯಾಗುತ್ತದೆ. ಭಾರತೀಯರಲ್ಲಿ 77ಶೇ. ಮಂದಿ ದಿನಕ್ಕೆ 20ರೂ. ಗಿಂತಲೂ ಕಡಿಮೆ ಹಣದಲ್ಲಿ ಬದುಕುತ್ತಿದ್ದಾರೆ ಎಂಬುದು ಆ ಸಮಿತಿಯ ಅಂದಾಜು. ನಿಜವಾದ ಭಾರತ ಇದು. ಗೃಹಮಂತ್ರಿಗಳ ಹೇಳಿಕೆ, ಈಗ ನಿರ್ಮಾಣವಾಗುತ್ತಿರುವುದು ಎರಡು ಭಾರತಗಳು– ಒಂದು ಐಪಿಎಲ್ ಭಾರತ, ಇನ್ನೊಂದು ಬಿಪಿಎಲ್ ಭಾರತ– ಎಂಬ ವಾಸ್ತವತೆಯನ್ನು ಅನುಮೋದಿಸಿದೆ.

ಈ ವಾಸ್ತವತೆ ಸಾಲದೆಂಬಂತೆ, ಎಲ್ಲ ಆವಶ್ಯಕ ಸರಕುಗಳ ನಿರಂತರ ಬೆಲೆಯೇರಿಕೆ ನಡೆದಿದೆ. ಈ ವಾರದ ವೇಳೆಗೆ ಮುಂಗಾರಿನಲ್ಲಿ 25ಶೇ. ಕೊರತೆಯಿದೆಯೆಂಬ ಹವಾಮಾನ ಇಲಾಖೆಯ ಅಂದಾಜನ್ನು ನೋಡಿದರೆ ಈ ಪರಿಸ್ಥಿತಿ ಇನ್ನಷ್ಟು ಹದಗೆಡುವಂತೆ ಕಾಣುತ್ತಿದೆ. ಇದು ಬಹಳವಾಗಿ ತಟ್ಟಿರುವುದು ಬಹುಪಾಲು ಭಾರತೀಯ ಜನಗಳಿಗೆ ಪ್ರೊಟೀನ್ ಆಹಾರಾಂಶದ ಪ್ರಧಾನ ಮೂಲವಾದ ಬೇಳೆಕಾಳುಗಳ ಉತ್ಪಾದನೆಯನ್ನು. ಎಲ್ಲ ಬೇಳೆಗಳ– ಕಡಲೆ, ತೊಗರಿ, ಉದ್ದು ಮುಂತಾದವು– ಬೆಲೆಗಳು ಗಗನಕ್ಕೇರುತ್ತಿವೆ. ಆಮದುಗಳಿಂದ ಪರಿಸ್ಥಿತಿಯನ್ನು ಉತ್ತಮಗೊಳಿಸಬಹುದು ಎಂಬ ನಿರೀಕ್ಷೆಯನ್ನೂ ರೂಪಾಯಿಯ ಬೆಲೆ 20ಶೇ. ದಷ್ಟು ಇಳಿಯುತ್ತಿರುವಾಗ ಇಟ್ಟುಕೊಳ್ಳುವಂತಿಲ್ಲ. ಬಹುಪಾಲು ಭಾರತೀಯ ಜನತೆ ಬದುಕುಳಿಯಲು ಒಂದು ಗಂಭೀರ ಹೋರಾಟ ನಡೆಸಬೇಕಾದ ಪರಿಸ್ಥಿತಿಗೆ ಸಿದ್ಧವಾಗಬೇಕಾಗಿದೆ ಎಂಬುದು ಸ್ಪಷ್ಟ.

ದೈನಂದಿನ ಬದುಕಿನ ಎಲ್ಲ ವಲಯಗಳಲ್ಲೂ ಪರಿಸ್ಥಿತಿ ಹದಗೆಡುತ್ತಲೇ ಇದೆ. ಯೋಜನಾ ಆಯೋಗದ ಸಾರ್ವಜನಿಕ ಆರೋಗ್ಯ ರಕ್ಷಣೆ ಕುರಿತ ಉನ್ನತ ಮಟ್ಟದ ತಜ್ಞರ ಗುಂಪಿನ ಪ್ರಕಾರ ಆರೋಗ್ಯ ರಕ್ಷಣೆಯ ವಿಪರೀತ ವೆಚ್ಚದಿಂದಾಗಿ ಪ್ರತಿವರ್ಷ ನಾಲ್ಕು ಕೋಟಿ ಭಾರತೀಯರು ಬಡತನಕ್ಕೆ ತಳ್ಳಲ್ಪಡುತ್ತಿದ್ದಾರೆ. ಭಾರತ



ಸಾರ್ವಜನಿಕ ಆರೋಗ್ಯಕ್ಕೆ ಸರಕಾರ ಅತಿ ಕಡಿಮೆ ಖರ್ಚು ಮಾಡುತ್ತಿರುವ ದೇಶಗಳ ಪಟ್ಟಿಯಲ್ಲಿ ಸೇರಿದೆ. ಕೇಂದ್ರ ಮತ್ತು ರಾಜ್ಯಸರಕಾರಗಳೆಲ್ಲ ಸೇರಿ ಸಾರ್ವಜನಿಕ ಆರೋಗ್ಯಕ್ಕೆ ಖರ್ಚು ಮಾಡುತ್ತಿರುವ ಹಣದ ಮೊತ್ತ ದೇಶದ ಒಟ್ಟು ಆಂತರಿಕ ಉತ್ಪಾದನೆ(ಜಿಡಿಪಿ)ಯ 1.4ಶೇ.ಕ್ಕಿಂತಲೂ ಕಡಿಮೆ.

ಅತಿ ದೊಡ್ಡ ಮೋಸ

ರೈತರಿಗೆ ನೀಡುವ ಕನಿಷ್ಟ ಬೆಂಬಲ ಬೆಲೆಗಳನ್ನು ಹೆಚ್ಚಿಸಿದ್ದರಿಂದಾಗಿ ಆಹಾರಧಾನ್ಯಗಳ ಬೆಲೆಗಳು ಏರಿಯೇ ಏರುತ್ತವೆ ಎಂಬ ಗೃಹಮಂತ್ರಿಗಳ ಸಬೂಬು ಒಪ್ಪತಕ್ಕಂತದ್ದಲ್ಲ. ಹೌದು, ರೈತರ ಆರೋಗ್ಯಕ್ಕಾಗಿ, ಅದರಲ್ಲೂ ಭೀಕರ ಕೃಷಿ ಬಿಕ್ಕಟ್ಟು ಮತ್ತು ಹತಾಶ ಆತ್ಮಹತ್ಯೆಗಳ ಒಂದು ಪರಿಸ್ಥಿತಿಯಲ್ಲಿ, ಕನಿಷ್ಟ ಬೆಂಬಲ ಬೆಲೆಗಳನ್ನು ಹೆಚ್ಚಿಸಬೇಕಾಗಿದೆ. ಆದರೆ ಇದರ ಹಣಕಾಸು ಹೊರೆಯನ್ನು ಜನಗಳ ಮೇಲೆ ದಾಟಿಸಲು ಸಾಧ್ಯವಿಲ್ಲ. ಸರಕಾರ ಜನತೆಗೆ ಒದಗಿಸುವ ಆಹಾರಧಾನ್ಯಗಳ ಮಾರಾಟ ಬೆಲೆಗೆ ಸಬ್ಸಿಡಿ ನೀಡಬೇಕಾಗಿದೆ. ಇದಕ್ಕೆ ಸರಕಾರದ ಬಳಿ ಸಾಕಷ್ಟು ಸಂಪನ್ಮೂಲಗಳಿಲ್ಲ ಎಂಬುದು ಸಾಮಾನ್ಯವಾಗಿ ಮುಂದಿಡುವ ತರ್ಕ.

ಇದು ಜನಗಳಿಗೆ ಮಾಡುತ್ತಿರುವ ಅತಿ ದೊಡ್ಡ ಮೋಸ. ಕಳೆದ ವರ್ಷ ಕೇಂದ್ರ ಸರಕಾರ 5.28 ಲಕ್ಷ ಕೋಟಿ ರೂ.ಗಳಷ್ಟು ಭಾರೀ ಮೊತ್ತದ ತೆರಿಗೆ ರಿಯಾಯ್ತಿಗಳನ್ನು ಕೊಟ್ಟಿದೆ. ಹಣಕಾಸು ಕೊರತೆ, ಜಿಡಿಪಿಯ 6.9ಶೇ. ಎಂದರೆ 5.21 ಲಕ್ಷ ಕೋಟಿ ರೂ. ಆಗುತ್ತದೆ. ಅಂದರೆ ಈ ರಿಯಾಯ್ತಿಗಳನ್ನು ಕೊಟ್ಟಿರದಿದ್ದರೆ, ಕೊರತೆ ಇರುತ್ತಿರಲಿಲ್ಲ, ಮಿಗುತೆಯೇ ಇರುತ್ತಿತ್ತು. ಆದರೂ ಬಡವರಿಗೆ ಕೊಡಬೇಕಾದ ಸಬ್ಸಿಡಿಗಳನ್ನು ಮಾತ್ರವೇ ಹಣಕಾಸು ಕೊರತೆಯನ್ನು ಇಳಿಸುವ ಹೆಸರಿನಲ್ಲಿ ನಿಷ್ಕರುಣೆಯಿಂದ ಕಡಿತ ಮಾಡಲಾಗುತ್ತಿದೆ. ಈ ಸರಕಾರದ ಬಳಿ ತೆರಿಗೆ ರಿಯಾಯ್ತಿಗಳನ್ನು ಕೊಡಲು ಸಂಪನ್ಮೂಲಗಳಿವೆ, ಅವನ್ನು ಬೆಳವಣಿಗೆಗೆ ನೀಡುವ 'ಉತ್ತೇಜನೆ'ಗಳು ಎಂದು ಪರಿಗಣಿಸಲಾಗುತ್ತದೆ. ಅದು ಬಡವರ ಸಬ್ಸಿಡಿಗಳನ್ನು ಕಡಿತ ಮಾಡಿ ಶ್ರೀಮಂತರಿಗೆ ಸಬ್ಸಿಡಿಗಳನ್ನು ಕೊಡುತ್ತಿದೆ. ಇಂತಹ ಧೋರಣೆಗಳೇ ಎರಡು ಭಾರತಗಳನ್ನು ನಿರ್ಮಿಸುತ್ತಿರುವುದು, ಈ ಎರಡರ ನಡುವಿನ ಕಂದರ ಮತ್ತಷ್ಟು ಅಗಲವಾಗುತ್ತಲೇ ಇದೆ.

ಹಣಕಾಸು ಉದಾರೀಕರಣದ ಗೀಳು

ಶ್ರೀಮಂತರಿಗೆ ಕೊಡುವ ಇಂತಹ ರಿಯಾಯ್ತಿಗಳನ್ನು ರದ್ದು ಮಾಡಿ, ಇವನ್ನು ಕಾನೂನುಬದ್ಧ ತೆರಿಗೆಗಳಾಗಿ ವಸೂಲಿ ಮಾಡಿ, ನಮ್ಮ ಬಹು ಅಗತ್ಯವಾದ ಮೂಲರಚನೆಗಳನ್ನು ಕಟ್ಟಲು ಹೆಚ್ಚಿನ ಸಾರ್ವಜನಿಕ ಹೂಡಿಕೆಗಳಾಗಿ ಬಳಸಿದ್ದರೆ, ಅದು ಸಾಕಷ್ಟು ಗಮನಾರ್ಹ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು

ಪುಟ 15ಕ್ಕೆ

ಜನರ ಬದುಕಿನ ಮೇಲೆ ಬಿಜೆಪಿ ಸರ್ಕಾರದ ನಿರಂತರ ಗದಾ ಪ್ರಹಾರ

ಭ್ರಷ್ಟ ಸ್ವಜನ ಪಕ್ಷಪಾತ ಪಕ್ಷದ ಆಡಳಿತಕ್ಕೆ 49 ತಿಂಗಳು



ಜಾತಿ ರಾಜಕಾರಣದ ನಗ್ನ ನರ್ತನ! ಭ್ರಷ್ಟಾಚಾರದ ಬಹಿರಂಗ ಸಮರ್ಥನೆಯ ಅನಾವರಣ !! ಕರ್ನಾಟಕ ರಾಜಕೀಯ ಈ ಅಧಃ ಪತನದಿಂದ ಮೇಲೇಳಲಾರದಷ್ಟು ಪಾತಾಳಕ್ಕೆ ಕುಸಿದು ಬಿದ್ದು ಹೋಗಿದೆ. ಇದಕ್ಕೆ ಮೂಲಕಾರಣ ಬಿಜೆಪಿ ಎಂಬ ಡೋಂಗಿ ದೇಶ ಪ್ರೇಮಿ–ಹಿಂದುತ್ವವಾದಿ, ಭ್ರಷ್ಟ, ಫ್ಯಾಸಿಸ್ಟ್ ಪಕ್ಷ. ಅನೈತಿಕ ರಾಜಕಾರಣಕ್ಕೆ ಇನ್ನೊಂದು ಹೆಸರೇ ಬಿಜೆಪಿ.

ಅನೈತಿಕತೆಯೇ ಚರಿತ್ರೆ
ಅನೈತಿಕತೆಯೇ ವರ್ತಮಾನ

1982 ರಲ್ಲಿ ಭಾರತೀಯ ಜನತಾ ಪಕ್ಷವೆಂಬ ಹೆಸರಿನೊಂದಿಗೆ ಉದಯಿಸಿದ ಹಿಂದಿನ ಜನಸಂಘ ಅಂದಿನಿಂದ ಇಂದಿನವರೆಗೂ ಈ ದೇಶದಲ್ಲಿ ಮಾಡಿದ್ದು ಅನೈತಿಕ ರಾಜಕಾರಣವನ್ನೇ. ಕರ್ನಾಟಕದಲ್ಲಿ ಮೊದಲ ಬಾರಿಗೆ ಅಧಿಕಾರದ ಚುಕ್ಕಾಣಿಯನ್ನು



ಹಿಡಿದದ್ದು ಅನೈತಿಕ ಮಾರ್ಗದಲ್ಲೇ. ತನ್ನ ಅಧಿಕಾರಾವಧಿಯ 49 ತಿಂಗಳಲ್ಲಿ ಅದು ನಡೆಸಿದ್ದು ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ಹಣದ ಲೂಟಿ. ಕಳೆದ 4 ವರ್ಷದಲ್ಲಿ ಇಬ್ಬರು ಮುಖ್ಯ ಮಂತ್ರಿಗಳನ್ನು ಬದಲಾವಣೆ ಮಾಡಿ 3ನೆಯ ಮುಖ್ಯಮಂತ್ರಿಯನ್ನು ಗಾದಿಗೇರಿಸುತ್ತಿರುವುದು, ತಾವುಗಳು ನಡೆಸಿದ ಭ್ರಷ್ಟಾಚಾರದಿಂದ ಗಳಿಸಿದ ಸಂಪತ್ತನ್ನು ಉಳಿಸಿಕೊಳ್ಳಲು ಕರ್ನಾಟಕ ರಾಜ್ಯದ

ವಿಷವನ್ನೋ, ಹೊಲಸನ್ನೋ ಮೂರು ಪಾಲು ಮಾಡಿ ಯಾವುದು ಒಳ್ಳೆಯದು ? ಯಾವುದು ಕೆಟ್ಟದ್ದು? ಎಂದು ಕೇಳಿದರೆ ಅದಕ್ಕೆ ಉತ್ತರವಾದರೂ ಏನು ? ರಾಜ್ಯದಲ್ಲಿ ಮತಾಂಧ ಆರೆಸ್ಸೆಸ್ ನಿಯಂತ್ರಿತ ಬಿಜೆಪಿ ಸರ್ಕಾರವೊಂದು ಅಧಿಕಾರ ದಲ್ಲಿರುವುದೇ ಮೊದಲ ಮತ್ತು ಮೂಲ ಅಪಾಯ. ಭ್ರಷ್ಟಾಚಾರ, ಕಿತ್ತಾಟ, ಗುಂಪುಗಾರಿಕೆ, ಸಾರ್ವಜನಿಕ ಸಂಪತ್ತಿನ ನಿರ್ಲಜ್ಜ ಲೂಟಿ, ಜನರ ಸಂಕಟಗಳ ಹೆಚ್ಚಳ... ಇವೆಲ್ಲ ಇದರ ಭಾಗವಾಗಿಯೇ ಬರುವ ಅನಿವಾರ್ಯ ಬಳುವಳಿಗಳು.

ಜಿ.ವಿ ಶ್ರೀರಾಮರೆಡ್ಡಿ

ರಾಜಕಾರಣದಲ್ಲಿ ಒಂದು ನಿರ್ದಿಷ್ಟ ಜಾತಿಯ ಹಿಡಿತವನ್ನು ಸಾಧಿಸಲು ಮತ್ತು ಭ್ರಷ್ಟಾಚಾರದ ಆರೋಪದ ಅಡಿ ಜೈಲಿಗೆ ಹೋಗಿ ಬಂದ ಮತ್ತು ಜೈಲು ಪಾಲಾಗಲಿರುವವರನ್ನು ಶಿಕ್ಷೆಯಿಂದ ತಪ್ಪಿಸುವುದಕ್ಕೆ ಅಷ್ಟೇ.

ಏನು ಬದಲಾವಣೆ ತರಲು ಸಾಧ್ಯ ?

ಮುಖ್ಯಮಂತ್ರಿ ಬದಲಾವಣೆಯಿಂದ ರಾಜ್ಯದಲ್ಲಿ ಯಾವುದೇ ರೀತಿ ಬದಲಾವಣೆ ಆಗಲು ಸಾಧ್ಯವಿಲ್ಲ. ಬರಗಾಲದಿಂದ ಮತ್ತು ಆರ್ಥಿಕ ಹಿಂಜರಿತದಿಂದ ತತ್ತರಿಸಿ ಹೋಗುತ್ತಿರುವ ಕರ್ನಾಟಕದಲ್ಲಿ ಈ ಬದಲಾವಣೆಯಿಂದ ಜನರ ಯಾವುದೇ ಮೂಲಭೂತ ಸಮಸ್ಯೆಗಳನ್ನು ಬಿಡಿ, ತಕ್ಷಣದ ಸಮಸ್ಯೆಗಳನ್ನು ಸಹ ಪರಿಹಾರ ಮಾಡಲಾಗುವುದಿಲ್ಲ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ರಾಜಕೀಯ ಅಸ್ಥಿರತೆಯನ್ನು ಎದುರಿಸುತ್ತಾ ಇಡೀ ಆಡಳಿತ ಯಂತ್ರವನ್ನು ಭ್ರಷ್ಟಗೊಳಿಸಿದ ಮತ್ತು ನಿಷ್ಕ್ರಿಯಗೊಳಿಸಿದ ಬಿಜೆಪಿಗೆ ಈ ಬದಲಾವಣೆಯಿಂದ ಯಾವ ಸ್ಥಿರತೆಯನ್ನು ತರಲಾಗುವುದಿಲ್ಲ. ಕೇವಲ ಒಂದು ಜಾತಿಯ ಮತ್ತು ಒಬ್ಬ ವ್ಯಕ್ತಿ ಹಿತ ಕಾಯಲಿಕ್ಕೆ ಮಾತ್ರವೇ ಈ ಬದಲಾವಣೆ ಉಪಯೋಗವಾಗಬಹುದೇ ಹೊರತು, ರಾಜ್ಯಕ್ಕೆ ಮತ್ತು ಜನತೆಗೆ ಯಾವುದೇ ಪ್ರಯೋಜನವಿಲ್ಲ. ತಾನೊಂದು ರಾಷ್ಟ್ರೀಯ ಪಕ್ಷವೆಂದು ಜಂಬ ಕೊಚ್ಚಿಕೊಳ್ಳುವ ಬಿಜೆಪಿ ಕೇವಲ ಒಂದು ಜಾತಿಯನ್ನು ಓಲೈಸಲು ಮತ್ತು ತಾನು ಮಾಡಿದ ಭ್ರಷ್ಟಾಚಾರವನ್ನು ಮುಚ್ಚಿಕೊಳ್ಳಲು ಇಷ್ಟೊಂದು ಅಧಃ ಪತನಕ್ಕೆ ಹೋಗಿದ್ದು ಒಂದು ದುರಂತವೇ ಸರಿ.

ಕಾರಣವೇನು ?

ಈ ಬದಲಾವಣೆಗೆ ಅದರ ರಾಷ್ಟ್ರೀಯ ಮುಖಂಡರು ಕೆಲವು ರಾಜಕೀಯ ಕಾರಣಗಳನ್ನು ಕೊಡುತ್ತಾರೆ. ಆ ರಾಜಕೀಯ ಕಾರಣಗಳೇನು ? ಆ ರಾಜಕೀಯ ಕಾರಣಗಳು ಬೇರ್ಯಾವುವೂ ಅಲ್ಲ. ಮುಂದೆ ಬರಬಹುದಾದ ಚುನಾವಣೆಗಳೇ. ಅಂದರೆ ಮುಂದಿನ ಚುನಾವಣೆಯಲ್ಲಿ ಮತ್ತೇ ಕರ್ನಾಟಕದಲ್ಲಿ ಅಧಿಕಾರ ಪಡೆಯಬೇಕಾದರೆ ಬರಿದು ನಿರ್ದಿಷ್ಟ ಜಾತಿಯ ಬೆಂಬಲ ಮತ್ತು ಅದರ ನಾಯಕನನ್ನು ಓಲೈಸಬೇಕಾದಂತಹ ಹೀನಸ್ಥಿತಿ ಹಿಂದುತ್ವ ಸಿದ್ಧಾಂತದ ಆಧಾರದ ಮೇಲೆ ನಿಂತಿರುವ ಬಿಜೆಪಿಗೆ ಒದಗಿ ಬಂದಿದೆ. ಇದರ ಇನ್ನೊಂದು ಅರ್ಥ ತಾನು ರಾಜಕೀಯ ಅಧಿಕಾರವನ್ನು ಪಡೆಯಲು ಯಾವ ಮಾರ್ಗವಾದರೂ ಸರಿಯೇ. ಇದೇ ಇವರ ಹಿಂದುತ್ವ ಸಿದ್ಧಾಂತ. ಹಿಂದುತ್ವವೆಂಬುದು ಬಿಜೆಪಿಗೆ ರಾಜಕೀಯ ಅಧಿಕಾರವನ್ನು ಪಡೆಯಲು ಒಂದು ಅಸ್ತ್ರವೇ ಹೊರತು ಬೇರೇನೂ ಅಲ್ಲ. ಹಿಂದುತ್ವ ಮತ್ತು ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣದ ಹೆಸರಿನಲ್ಲಿ ಶ್ರೀಮಾನ್ ಅದ್ವಾನಿಯವರು ರಥ ಯಾತ್ರೆಯನ್ನು ನಡೆಸಿ ರಾಜಕೀಯ ಅಧಿಕಾರ ಸಿಕ್ಕಿದ ಮೇಲೆ ರಾಮ ಮಂದಿರ ಪ್ರಶ್ನೆಯನ್ನೂ ಶೈತ್ಯಾಗಾರಕ್ಕೆ ತಳ್ಳಿದರು. ಏಕೆಂದರೆ ಕೇಂದ್ರದಲ್ಲಿ ಅಧಿಕಾರ ಹಿಡಿಯಲು ಜಾತ್ಯತೀತ ಅಥವಾ ಜಾತ್ಯತೀತ ಎಂದು ಬಿಂಬಿಸಿಕೊಳ್ಳ ಬಯಸುವ ಪ್ರಾದೇಶಿಕ ಪಕ್ಷಗಳನ್ನು ಒಳಗೊಳ್ಳುವ ವಿಶಾಲ ರಾಜಕೀಯ ಒಕ್ಕೂಟ ಅನಿವಾರ್ಯ ಎಂಬುದು ಈ ಮುಖಂಡರಿಗೆ ಗೊತ್ತಾಗಿತ್ತು. ಕೋಮುವಾದಿ, ಅವಕಾಶವಾದಿ, ಅನೈತಿಕ ಮಾರ್ಗದಿಂದಲೇ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಕಾರಣರಾದ ಅದ್ವಾನಿಯವರಿಗೆ ಕರ್ನಾಟಕದಲ್ಲಿನ ಅವರ ಪಕ್ಷದ ನಾಯಕರಿಗೆ ನೈತಿಕತೆಯ ಪಾಠವನ್ನು ಹೇಳುವ ಯಾವ ಹಕ್ಕಿದೆ? ತಾನು ಭ್ರಷ್ಟಾಚಾರ ವಿರೋಧಿಯೆಂದು ಹೇಳುತ್ತಲೇ ಭ್ರಷ್ಟಾಚಾರ ಪ್ರಕರಣಗಳನ್ನು ಮುಚ್ಚಿ ಹಾಕಲು ಅಧಿಕಾರವನ್ನು ಬಯಸುವ ಬ್ಲಾಕ್ ಮೈಲ್ ರಾಜಕಾರಣಕ್ಕೆ ಒಪ್ಪಿಗೆಯನ್ನು ಕೊಟ್ಟು ಬಿಟ್ಟರು.

ಜಾತಿಯತೆಯ ವಿಷ ಪ್ರಾಶನ

ಬಿಜೆಪಿ ಎಂಬ ಈ ವಿಷ ಜಂತುವು ಕರ್ನಾಟಕ ರಾಜ್ಯ ಹಿಂದೆಂದೂ ಕಾಣದ ರೀತಿಯಲ್ಲಿ, ಜಾತಿ ವಿಷವನ್ನು ಸಮಾಜದಲ್ಲಿ ಹರಡುತ್ತಿದೆ. ಅದು ಜಾತಿ ಆಧಾರದ ಮೇಲೆ ಜನರನ್ನು ವಿಂಗಡಿಸಿ ಬಿಟ್ಟಿತು ಮತ್ತು ಅವುಗಳ ಮಧ್ಯೆ ವೈಷಮ್ಯವನ್ನು ಹುಟ್ಟಿ ಹಾಕಿ ಬಿಟ್ಟಿತು.



ಇದು ಇಂದು ರಾಜ್ಯ ಎದುರಿಸುತ್ತಿರುವ ಅತ್ಯಂತ ಅಪಾಯಕಾರಿ ಪರಿಸ್ಥಿತಿ. ಕರ್ನಾಟಕ ರಾಜ್ಯ ವಿವಿಧ ಜಾತಿ ಮತ್ತು ಧರ್ಮಗಳ ನಡುವಿನ ಸೌಹಾರ್ದತೆಗೆ ಇಡೀ ದೇಶದಲ್ಲೇ ಹೆಸರುಗಳಿಸಿತ್ತು. ಇಲ್ಲಿ ಬಹುತೇಕ ಎಲ್ಲಾ ಜಾತಿಗಳ ಮುಖ್ಯ ಮಂತ್ರಿಗಳು ಆಗಿಹೋಗಿದ್ದಾರೆ. ಆದರೆ ಅವರ್ಯಾರು ಈ ರೀತಿಯಲ್ಲಿ ಹಸಿ ಹಸಿ ಜಾತಿ ರಾಜಕಾರಣ ಮಾಡಲಿಲ್ಲ. ಇಂದು ಕರ್ನಾಟಕದಲ್ಲಿ ಪ್ರಬಲ ಜಾತಿಗಳ ರಾಜಕೀಯ ಮೇಲಾಟ

ಜನಶಕ್ತಿ ಕನ್ನಡ ವಾರಪತ್ರಿಕೆ

ನಡೆಯುತ್ತಿದೆ. ಇದು ಎಷ್ಟು ಅಪಾಯಕಾರಿ ಹಂತಕ್ಕೆ ತಲುಪಿದೆಯೆಂದರೆ ಆಯಾ ಜಾತಿಗಳ ಮುಖ್ಯ ಮಂತ್ರಿಯನ್ನು ರಕ್ಷಣೆ ಮಾಡಿಕೊಳ್ಳಲಿಕ್ಕಾಗಿ ಮುಗ್ಧ ಜನರನ್ನು ಬೀದಿಗಿಳಿಸಿ 'ಹೋರಾಟ'ದ ಹೆಸರಿನಲ್ಲಿ ಇನ್ನಷ್ಟು ಜಾತಿ ಭಾವನೆ, ಜಾತಿ ವಿಭಜನೆ ಬಿತ್ತಲಾಗುತ್ತಿದೆ.

ಹಿಂದೆ ಇಷ್ಟು ನಡೆದಿರಲಿಲ್ಲ

ಹಿಂದೆಯೂ ಹಲವಾರು ಮುಖ್ಯಮಂತ್ರಿಗಳನ್ನು ಬದಲಾಯಿಸಲಾಗಿದೆ. ಉದಾರಹಣೆಗೆ ವೀರೇಂದ್ರ ಪಾಟೀಲರನ್ನು ಕೇವಲ ಅನಾರೋಗ್ಯದ ಕಾರಣವನ್ನು ನೆಪಮಾಡಿ ಅಧಿಕಾರದಿಂದ ತೆಗೆದು ಹಿಂದುಳಿದ ವರ್ಗಕ್ಕೆ ಸೇರಿದ ಬಂಗಾರಪ್ಪನವರನ್ನು ಮುಖ್ಯಮಂತ್ರಿ ಮಾಡಿದರು. ಆಗ ಯಾವ ಜಾತಿಯವರೂ ಬೀದಿಗಿಳಿದು ಹೋರಾಟ ಮಾಡಲಿಲ್ಲ. ಅಂದು ವೀರೇಂದ್ರ ಪಾಟೀಲರನ್ನು ಇಳಿಸುವಾಗ ಯಾರ ಅಭಿಪ್ರಾಯವನ್ನು ಕೇಳದೆ, ದೆಹಲಿಗೆ ತೆರಳುವಾಗ ಹೈದ್ರಾಬಾದ್ ವಿಮಾನ ನಿಲ್ದಾಣದಲ್ಲಿ ಪತ್ರಿಕಾ ಮಾಧ್ಯಮಗಳಿಗೆ ತಿಳಿಸಿ ರಾಜೀವ ಗಾಂಧಿ ದೆಹಲಿಗೆ ಹಾರಿದರು. ಅತ್ಯಂತ ಅಪ್ರಜಾಸತ್ತಾತ್ಮಕವಾಗಿ ಮತ್ತು ಅವಮಾನಕರ ರೀತಿಯಲ್ಲಿ ಅವರನ್ನು ತೆಗೆದಾಗ ಲಿಂಗಾಯಿತ ಜಾತಿಯವರಾಗಲಿ ಅದರ ಮಠಾಧೀಶರಾಗಲಿ ಬೀದಿಗಿಳಿಯಲಿಲ್ಲ. 1983 ರಲ್ಲಿ ದೇವೇಗೌಡರು ಮುಖ್ಯಮಂತ್ರಿಯಾಗಲಿಲ್ಲವೆಂದು ಯಾವ ಒಕ್ಕಲಿಗರೂ ಹೋರಾಟ ಮಾಡಲಿಲ್ಲ. ಆದರೆ ಬಿಜೆಪಿ ಎಂಬ ವಿಷ ವೃಕ್ಷವು ಕರ್ನಾಟಕದಲ್ಲಿ ಅನೈತಿಕವಾಗಿ ಅಧಿಕಾರಕ್ಕೆ ಬಂದಾಗಿನಿಂದ ಇಡೀ ಕರ್ನಾಟಕದಲ್ಲಿ ಜಾತಿಯ ವಿಷ ಬೀಜವನ್ನು ಹಾಕಿ ಎಲ್ಲಾ ರಂಗಗಳಲ್ಲಿ ಜಾತಿಯ ಪ್ರಭಾವವನ್ನು ಮತ್ತು ಹಿಡಿತವನ್ನು ಹೊಂದಲು ತೀವ್ರ ರೀತಿಯ ಪ್ರಯತ್ನ ಮಾಡಿದೆ. ಇದರ ಪರಿಣಾಮ ಅತಿಹೆಚ್ಚಿಗೆ ಆಗಿರುವುದು ಕಾರ್ಯಾಂಗದಲ್ಲಿ. ಈ ಸಮಾಜದಲ್ಲಿ ಜಾತಿ ಜಾತಿಗಳ ಮಧ್ಯೆ ವೈಷಮ್ಯ ನಿರ್ಮಾಣ ಮಾಡಿದ್ದಾರೆ. ಈ ಅಪಾಯಕಾರಿ ಬೆಳವಣಿಗೆಗೆ ಬಿಜೆಪಿ ಎಂಬ ಪಕ್ಷ ಬಿತ್ತಿರುವ ಜಾತಿಯೆಂಬ ವಿಷ ಬೀಜವೇ ಕಾರಣವಾಗಿದೆ.

ಏನು ಲಾಭ ?

ಇಷ್ಟಕ್ಕೂ ಈ ಬದಲಾವಣೆಯಿಂದ ರಾಜ್ಯಕ್ಕೆ ಕಿಂಚಿತ್ತು ಕೂಡ ಉಪಯೋಗವಾಗುತ್ತಾ? ಖಚಿತವಾಗಿ ಇಲ್ಲ. ಇನ್ನು ಕೇವಲ 11 ತಿಂಗಳಲ್ಲಿ ಇವರ ಅವಧಿ ಮುಗಿಯುತ್ತೆ. 4 ವರ್ಷದಿಂದ ಎಲ್ಲಾ ರಂಗಗಳಲ್ಲಿ ದಿವಾಳಿ ಎದ್ದಿರುವ ಈ ರಾಜ್ಯವನ್ನು ಏನಾದರೂ ಅಭಿವೃದ್ಧಿಪಡಿಸಲಿಕ್ಕೆ ಸಾಧ್ಯವಿದೆಯೇ? ಖಚಿತವಾಗಿ ಹೇಳಬಹುದು ಸಾಧ್ಯವಿಲ್ಲ. ಏಕೆಂದರೆ 4 ವರ್ಷದಲ್ಲಿ ರಾಜ್ಯದ ಮೂಲಭೂತ ಅಭಿವೃದ್ಧಿಗೆ ಅವಶ್ಯವಿರುವ ಕೈಗಾರಿಕೆ, ಕೃಷಿ ಮತ್ತು ಮಾನವ ಸಂಪನ್ಮೂಲಗಳ ಅಭಿವೃದ್ಧಿ ಸ್ಥಗಿತಗೊಳಿಸಲಾಗಿದೆ. ಕಳೆದ ಮಾರ್ಚ್ ತಿಂಗಳಲ್ಲಿ ಮಂಡಿಸಿದ ಆಯ-ವ್ಯಯಕ್ಕೆ ಬರುವ ಅಧಿವೇಶನದಲ್ಲಿ ಒಪ್ಪಿಗೆ ಪಡೆಯಬೇಕಿದೆ. ಈ ಆಯವ್ಯಯದಲ್ಲಿ ಸೂಚಿಸಿರುವ ಬಾಬ್ತುಗಳು ಮತ್ತು 1.4 ಲಕ್ಷ ಕೋಟಿಗಳಿಗೆ ಕಾರ್ಯಕ್ರಮವೇ ರೂಪಿತವಾಗಿಲ್ಲ. ಹಾಗಾಗಿ ಅನುಷ್ಠಾನ ಮಾಡುವುದು ಯಾವಾಗ? ಇನ್ನು ಬಿಜೆಪಿಯಲ್ಲಿನ ಭಿನ್ನಾಭಿಪ್ರಾಯ ಮತ್ತು ಗುಂಪುಗಾರಿಕೆ ಇಲ್ಲಿಗೆ ಮುಕ್ತಾಯವಾಗುತ್ತಾ ? ಖಚಿತವಾಗಿ ಬರೆದು ಕೊಡಬಹುದು ಅದು ಸಾಧ್ಯವಿಲ್ಲ. ಕಾರಣ ಸ್ಪಷ್ಟ. ಈಗ ಬಿಜೆಪಿಯಲ್ಲಿ ಸ್ಪಷ್ಟವಾಗಿ 3 ಗುಂಪುಗಳಿವೆ.



ಒಂದು ಯಡಿಯೂರಪ್ಪ ಗುಂಪು, ಸದಾನಂದಗೌಡ ಗುಂಪು, ಮತ್ತು ಅನಂತಕುಮಾರ್ ಗುಂಪು, ಅನಂತಕುಮಾರ್ – ಯಡಿಯೂರಪ್ಪ ಇವರಿಬ್ಬರೂ ಸುಮ್ಮನೆ ಕೂರುವುದಿಲ್ಲ.


ಕ್ಯಾತೆ ಶುರು

ಮುಖ್ಯಮಂತ್ರಿಯಾಗಿ ನಿಯೋಜಿತರಾದ ಮೇಲೆ ಜಗದೀಶ್ ಶೆಟ್ಟರ್ ಅನಂತ್‌ಕುಮಾರರನ್ನು ಅವರ ಮನೆಗೆ ಹೋಗಿ ಭೇಟಿ ಮಾಡಿದಾಗಲೇ ಯಡಿಯೂರಪ್ಪನ ಶಿಷ್ಯರು ಕ್ಯಾತೆ ತೆಗೆದಿದ್ದಾರೆ. ಇನ್ನು ಜಗದೀಶ್ ಶೆಟ್ಟರ್ ಯಡಿಯೂರಪ್ಪನ ಅಣತಿಯನ್ನು ಒಂದು ಇಂಚು ತಪ್ಪಿದರೂ ಕಷ್ಟ. ಮತ್ತೆ ಈಗಾಗಲೇ ಉಪಮುಖ್ಯಮಂತ್ರಿ ಸ್ಥಾನಕ್ಕೆ ಮತ್ತು ಮಂತ್ರಿಮಂಡಲದಲ್ಲಿ ಸ್ಥಾನಕ್ಕೆ ತೀವ್ರ ಲಾಬಿಗಳು ಪ್ರಾರಂಭವಾಗಿವೆ. ಇನ್ನು ಉಳಿದಿರುವುದು 11 ತಿಂಗಳು. ಎಲ್ಲರಿಗೂ ಮಂತ್ರಿಗಳಾಗಬೇಕೆಂಬ ಆಸೆ ಮತ್ತು ಅತುರ. ಎಲ್ಲರನ್ನು ಮಂತ್ರಿಮಾಡಲು ಸಾಧ್ಯವಿಲ್ಲ. ಅವರ ಗುಂಪಿಗೆ ಎಷ್ಟು? ಇವರ ಗುಂಪಿಗೆ ಎಷ್ಟು? ಇದರಲ್ಲಿ ಮತ್ತೆ ಸಮಸ್ಯೆ ಉದ್ಭವವಾಗುತ್ತದೆ. ಇನ್ನೊಂದು ಕಡೆ ಭ್ರಷ್ಟಾಚಾರದ ಹಗರಣಗಳು ಯಾವ ಯಾವ ರೀತಿಯಲ್ಲಿ ಸುತ್ತಿಕೊಳ್ಳುತ್ತವೆ ಗೊತ್ತಿಲ್ಲ. ಈಗ ಭ್ರಷ್ಟಾಚಾರದಲ್ಲಿ ಮತ್ತು ಹಗರಣಗಳಲ್ಲಿ ಮುಳುಗಿರುವವರನ್ನು ಹೊಸ ಮುಖ್ಯಮಂತ್ರಿಗಳು ರಕ್ಷಣೆ ಮಾಡಬೇಕು. ಇಲ್ಲದಿದ್ದರೆ ಕುರ್ಚಿಗೆ ಅಪಾಯ. ಮತ್ತೊಂದು ಕಡೆ ಸಂಪೂರ್ಣ ನಿಷ್ಕ್ರಿಯಗೊಂಡಿರುವ ಆಡಳಿತ ಯಂತ್ರವನ್ನು ಸರಿದಾರಿಗೆ ತರಲು ಕನಿಷ್ಠ 6 ತಿಂಗಳು ಬೇಕಾಗುತ್ತದೆ.

ಚುನಾವಣೆ ಬರುತ್ತದೆ

ಅಷ್ಟು ಹೊತ್ತಿಗೆ ಚುನಾವಣೆ ತಯಾರಿ ಪ್ರಾರಂಭವಾಗುತ್ತದೆ. ಇನ್ನು ಈ ರಾಜ್ಯದಲ್ಲಿನ ಯಾವ ಸಮಸ್ಯೆಗಳನ್ನು ಪರಿಹಾರ ಮಾಡಲು ಸಾಧ್ಯ? ಹಾಗಾಗಿ ಕರ್ನಾಟಕ ರಾಜ್ಯ ಅಧೋಗತಿಗೆ ಹೋಗುವುದನ್ನು ಬಿಟ್ಟರೆ ಬೇರೆ ಏನೂ ಸಾಧ್ಯವಿಲ್ಲ. ಬಿಜೆಪಿ ಯಾವ ಯಾವ ರಾಜ್ಯದಲ್ಲಿ ಅಧಿಕಾರದಲ್ಲಿ ಇದೆಯೋ ಆ ಎಲ್ಲಾ ರಾಜ್ಯಗಳು ಒಂದಲ್ಲಾ ಒಂದು ರೀತಿಯಲ್ಲಿ ಅಧಃಪತನ ಹೊಂದಿವೆ. ಕೋಮುವಾದಿ ಸಿದ್ಧಾಂತವೇ ಒಂದು ಪ್ರತಿಗಾಮಿ ಸಿದ್ಧಾಂತ. ಅದು ಮಾನವ ದ್ವೇಷಿ. ಅದರ ಜೊತೆಗೆ ಭ್ರಷ್ಟತೆಯನ್ನು ಮೈಗೂಡಿಸಿಕೊಂಡಿದೆ. ಇಂತಹ ಪಕ್ಷದಿಂದ ಕರ್ನಾಟಕ ರಾಜ್ಯ ಇದಕ್ಕಿಂತ ಒಳ್ಳೆಯದನ್ನು ಹೇಗೆ ನಿರೀಕ್ಷಿಸಲು ಸಾಧ್ಯ?

ಇನ್ನು ಸ್ವಯಂ ಸೇವಕ ಸಂಘಟನೆ ಎಂದು ನಾಮಫಲಕ (ಆರ್.ಎಸ್.ಎಸ್.) ಹಾಕಿಕೊಂಡು ಸತ್ಯ ನಿಷ್ಠೆ ಏಕತೆ, ಶೀಲ ಮತ್ತು ಜ್ಞಾನ, ಧ್ಯೇಯ ವಾಕ್ಯಗಳನ್ನು ಹಾಕಿಕೊಂಡಿರುವ ಸ್ವಯಂ ಘೋಷಿತ ಸ್ವಯಂ ಸೇವಕರ ಸೋಗಲಾಡಿತನವು ಈಗ ಸಂಪೂರ್ಣವಾಗಿ ಬಯಲಾಗಿದೆ. ಗಡ್ಕರಿಯೆಂಬ ಅಪ್ಪಟ ವ್ಯಾಪಾರಿಯನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಮಾಡಿದಾಗಲೇ ಆರ್‌ಎಸ್‌ಎಸ್‌ನ ನಿಜ ಸ್ವರೂಪ ಬಯಲಾಯ್ತು. ಈಗ ಇನ್ನೊಂದು ಅವಧಿಗೆ ಅವರನ್ನೇ ಮುಂದುವರಿಸಿದ್ದಾರೆ. ಈ ಗಡ್ಕರಿ ಸಾಹೇಬರೇ



ಯಡಿಯೂರಪ್ಪ ಮತ್ತು ಅವರ ಎಲ್ಲಾ ಭ್ರಷ್ಟಾಚಾರಗಳ ರಕ್ಷಕರು. ಗಡ್ಕರಿ ಮಗನ ಮದುವೆಗೆ 500 ಕೋಟಿ ಕೊಟ್ಟಿದ್ದೇನೆಂದು ಯಡ್ಡಿಯೂರಪ್ಪ ಬಹಿರಂಗವಾಗಿ ಹೇಳಿದರೂ ಗಡ್ಕರಿ ಸಾಹೇಬರು ಪ್ರತಿಕ್ರಿಯಿಸಲಿಲ್ಲ. ಈಗ



ಯಡಿಯೂರಪ್ಪನ ಆಸೆಗಳನ್ನು ಪೂರೈಸಲು ನಾಯಕತ್ವದ ಬದಲಾವಣೆಗೆ ಸಾರಥ್ಯವಹಿಸಿದವರು ಅವರೇ. ಇದರ ಒಟ್ಟು ಫಲಿತಾಂಶ ಕರ್ನಾಟಕದಲ್ಲಿ ಭ್ರಷ್ಟಾಚಾರ ಮತ್ತು ಅದರ ಮೂಲಕ ರಾಜ್ಯದ ಲೂಟಿಯ ಇನ್ನೊಂದು ಅಧ್ಯಾಯದ ಆರಂಭ! ತಾನು ಭಿನ್ನ ಪಕ್ಷವೆಂದು ಹೇಳಿಕೊಳ್ಳುವ ಬಿಜೆಪಿ ಪಕ್ಷದ ಅಧಿಕಾರದ ಮುಂದುವರಿಕೆಯಿಂದ ರಾಜ್ಯದ ಜನತೆಯ ಹಿತರಕ್ಷಣೆ ಸಾಧ್ಯವೇ ಇಲ್ಲ ಎಂಬ ಸಂದೇಶ ಈಗಾಗಲೇ ರಾಜ್ಯದ ಮೂಲೆ ಮೂಲೆಗೆ ತಲುಪಿದೆ.

ಗಂಭೀರ ಹೋರಾಟದ ಮುನ್ನುಡಿ

ಈ ರಾಜ್ಯದಲ್ಲಿ ಇಷ್ಟೆಲ್ಲಾ ಅನಾಹುತಗಳು, ಬೆಳವಣಿಗೆಗಳು ಆಗುತ್ತಿದ್ದರೂ ವಿರೋಧ ಪಕ್ಷಗಳು ಪತ್ರಿಕಾ ಹೇಳಿಕೆಗಳನ್ನು ಕೊಡುವುದಷ್ಟೇ ತಮ್ಮ ಕೆಲಸವೆಂದು ಕೈ ಚೆಲ್ಲಿ ಕುಳಿತಿವೆ. ಇವರು ಸಹ ರಾಜ್ಯದ ಮತ್ತು ಜನತೆಯ ಸಮಸ್ಯೆಗಳನ್ನು ಜನರ ಮುಂದೆ ತೆಗೆದುಕೊಂಡು ಹೋಗಲಿಕ್ಕೆ ತಯಾರಿಲ್ಲ. ಮತ್ತೆ ಅವರಲ್ಲಿರುವ ಗುಂಪುಗಾರಿಕೆಗಳನ್ನು ಪರಿಹರಿಸುವುದಕ್ಕೂ ಅವರಿಗೆ ಆಗುತ್ತಿಲ್ಲ. ಹಾಗಾಗಿ ಭ್ರಷ್ಟ ಬಿಜೆಪಿಗೆ ಎಲ್ಲಾ ಹಾದಿಗಳು ಸುಗಮವಾಗಿವೆ. ಇದಕ್ಕೆ ಭಿನ್ನವಾಗಿ ಸಿಪಿಐ(ಎಂ), ಎಡಪಕ್ಷಗಳು ರಾಜ್ಯದ ಜ್ವಲಂತ ಸಮಸ್ಯೆಗಳಾದ ಬರಗಾಲ, ಕುಡಿಯುವ ನೀರಿನ ಸಮಸ್ಯೆಗಳನ್ನು ಎತ್ತಿಕೊಂಡು ಬಡವರ ವಿರೋಧಿಯಾದ ಕೇಂದ್ರ ಸರ್ಕಾರದ ಆಹಾರ ಅಭದ್ರತೆಯ ಸಂಭವನೀಯ ಮಸೂದೆಯ ವಿರುದ್ಧ ರಾಜ್ಯಾದ್ಯಂತ ಚಳುವಳಿ ಪ್ರಾರಂಭಮಾಡಿವೆ. ಇಂತಹ ಹೋರಾಟಗಳು ಮಾತ್ರವೇ ಈಗ ಜನತೆಯ ಮುಂದೆ ಉಳಿದಿರುವ ದಾರಿ.

ಕಾರ್ಮಿಕ ವರ್ಗದ ರಾಜ್ಯವ್ಯಾಪಿ ಮುಷ್ಕರ

ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ದೇಶಾದ್ಯಂತ ಜುಲೈ ತಿಂಗಳಲ್ಲಿ ನಡೆಯುತ್ತಿರುವ ಜನಾಂದೋಳನದ ಭಾಗವಾಗಿ ಜುಲೈ 10 ರಂದು ರಾಜ್ಯದ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ನಾನಾ ಜಿಲ್ಲೆಗಳ 'ನಗರ, ಪಟ್ಟಣ ಊರುಗಳಲ್ಲಿ ಸಿಐಟಿಯು ನೇತೃತ್ವದಲ್ಲಿ, ಕಾರ್ಮಿಕರು ವ್ಯಾಪಕವಾಗಿ ಪ್ರತಿಭಟನಾ ಪ್ರದರ್ಶನ ನಡೆಸಿದ ವರದಿಗಳು ಬರುತ್ತಿವೆ.

ಕಾರ್ಮಿಕರಿಗೆ ಕನಿಷ್ಟ ಮಾಸಿಕ ವೇತನ ರೂ.10,000 ಆದರೂ ಸಿಗಲೇ ಬೇಕು. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕಸ್ಟಮ್ಸ್ ಹಾಗೂ ಎಕ್ಸೈಸ್ ತೆರಿಗೆಯನ್ನು ಕಡಿಮೆಗೊಳಿಸುವುದರ ಮೂಲಕ ಅವುಗಳ ದರಗಳನ್ನು ಇಳಿಸಬೇಕು; ಆ ಮೂಲಕ ಆಹಾರ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಗ್ಗಿಸಬೇಕು. ಎಪಿಎಲ್ ಮತ್ತು ಬಿಪಿಎಲ್ ಎಂಬ ತಾರತಮ್ಯವನ್ನು ಕಿತ್ತುಹಾಕಿ, ಎಲ್ಲರಿಗೂ ಪಡಿತರ ಚೀಟಿ ವಿತರಿಸಿ ಕೆ.ಜಿ.ಗೆ ರೂ.2 ರಂತೆ 35 ಕೆ.ಜಿ. ಆಹಾರ ಧಾನ್ಯ ವಿತರಿಸಬೇಕು. ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಬೇಕು; ಅಲ್ಲಿ ತನಕ ಗುತ್ತಿಗೆ ಕಾರ್ಮಿಕರಿಗೆ ಎಲ್ಲಾ ಕಾನೂನು ಸವಲತ್ತುಗಳನ್ನು ನೀಡಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಎಲ್ಲ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಬೇಕು; ಕನಿಷ್ಟ ಪಿಂಚಣಿ ಮಾಸಿಕ ರೂ.1500 ಜಾರಿಗೊಳಿಸಬೇಕು. ಗುಣಮಟ್ಟದ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಅವಕಾಶ ಒದಗಿಸಿದ್ದ ಬೀಡಿ ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನವನ್ನು 1ನೇ ತರಗತಿಯಿಂದ 8ನೇ ತರಗತಿ ವರೆಗೂ ಮುಂದುವರಿಸಬೇಕು- ಇತ್ಯಾದಿ ಪ್ರಮುಖ ಬೇಡಿಕೆಗಳನ್ನು ಈ ಪ್ರತಿಭಟನಾ ಪ್ರದರ್ಶನದ ವೇಳೆ ಸರ್ಕಾರದ ಗಮನಕ್ಕೆ ತರಲಾಯಿತು.

ದಕ್ಷಿಣ ಕನ್ನಡ

ಜುಲೈ 10, 2012 ರಂದು ಕರಾವಳಿ ಜಿಲ್ಲೆಯಾದ್ಯಂತ ಧಾರಾಕಾರ ಮಳೆ ಸುರಿಯುತ್ತಿದ್ದರೂ; ವಿವಿಧ ವರ್ಗದ ಕಾರ್ಮಿಕರು ಪ್ರತಿಭಟನೆಯಲ್ಲಿ ಜತೆಗೂಡಿದ್ದರು. ಬೀಡಿ ಕಾರ್ಮಿಕರು, ಕಟ್ಟಡ ಮತ್ತು ನಿರ್ಮಾಣ ಕಾಮಗಾರಿ, ಹಮಾಲಿ, ಬೀದಿ ಬದಿ ವ್ಯಾಪಾರಸ್ಥರು, ಗೃಹ ರಕ್ಷಕ ದಳದ ತಾತ್ಕಾಲಿಕ ಸೆಕ್ಯುರಿಟಿ, ಮೆಸ್ಕಾಂ ಗುತ್ತಿಗೆ ಕಾರ್ಮಿಕರು, ಆಟೋ ಚಾಲಕರು ಮೊದಲಾದ ಕಾರ್ಮಿಕ ವಿಭಾಗದವರು ಸಾಕಷ್ಟು ಸಂಖ್ಯೆಯಲ್ಲಿ ಕೊಡೆ ಹಿಡಿದುಕೊಂಡೇ ಪ್ರತಿಭಟನೆಯಲ್ಲಿ ಭಾಗವಹಿಸಿದರು.

ಮಂಗಳೂರು

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷರಾದ ಬಿ.ಮಾಧವ ಅವರು, ಬೀಡಿ ಕಾರ್ಮಿಕರ ಮಕ್ಕಳು ಉತ್ತಮವಾದ ಪ್ರಾಥಮಿಕ ಶಾಲೆಗಳಲ್ಲಿ ಸ್ಕಾಲರ್‌ಶಿಪ್ ನೆರವಿನಿಂದ ವಿದ್ಯಾಭ್ಯಾಸ ಪಡೆಯಲು ಹೊಂದಿದ್ದ ಅವಕಾಶವನ್ನು ರದ್ದುಪಡಿಸಿದ ಕೇಂದ್ರ ಸರ್ಕಾರದ ಕ್ರಮವನ್ನು ತೀವ್ರವಾಗಿ ಟೀಕಿಸಿದರು. ಖಾಯಂ ಹುದ್ದೆಗಳಿರುವ ಕಡೆಗಳಲ್ಲಿ ಗುತ್ತಿಗೆ ಹಾಗೂ ಹೊರಗುತ್ತಿಗೆಗಳ ಮೂಲಕ ನೇಮಿಸಿಕೊಳ್ಳಲು ಉದ್ಯಮಿಗಳಿಗೆ ಅವಕಾಶ ನೀಡಿರುವ ಸರ್ಕಾರದ ನೀತಿಯನ್ನು ಖಂಡಿಸಿದರು. 15ನೇ ಭಾರತೀಯ ಕಾರ್ಮಿಕ ಸಮ್ಮೇಳನವು ಕಾರ್ಮಿಕರಿಗೆ ಒದಗಿಸಬೇಕೆಂದು ನಿರ್ಣಯಿಸಿದ ಸವಲತ್ತುಗಳನ್ನು ಖಾತರಿಗೊಳಿಸದಿರುವ ಕೇಂದ್ರ ಸರ್ಕಾರದ ಧೋರಣೆಯನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಕಾಲಕಾಲಕ್ಕೆ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನಗಳು ನೀಡುತ್ತಿರುವ ಕಾರ್ಮಿಕ ಹಿತೈಷಿ ಸಲಹೆಗಳನ್ನು ಸರ್ಕಾರಗಳು ಹಾಗೂ ಉದ್ಯಮಿಗಳು ನಿರ್ಲಕ್ಷಿಸುತ್ತಿರುವ ಬಗ್ಗೆ ಖೇದ ವ್ಯಕ್ತಪಡಿಸಿದರು; ಉದ್ಯಮಗಳಿಗೆ ಸರ್ಕಾರಗಳು ಸೂಕ್ತ ನಿವೇಶನ ನೀಡದಿದ್ದಲ್ಲಿ, ದೇಶವು ತೀವ್ರ ಥರವಾದ ಆರ್ಥಿಕ ಸಂಕಷ್ಟವನ್ನು ಎದುರಿಸಬೇಕಾಗಬಹುದೆಂದು ಎಚ್ಚರಿಸಿದರು.

ಮಂಗಳೂರು ಮತ್ತು ಉಳ್ಳಾಲ ಪ್ರದೇಶದ ಕಾರ್ಮಿಕರು ಭಾಗವಹಿಸಿದ್ದ ಈ ಪ್ರತಿಭಟನೆಯನ್ನುದ್ದೇಶಿಸಿ, ಕಾರ್ಮಿಕ ಮುಖಂಡರಾದ ಸುನಿಲ್ ಕುಮಾರ್ ಬಜಾಲ್ ಮತ್ತು ಜಯಂತಿ ಬಿ. ಶೆಟ್ಟಿ ಮಾತನಾಡಿದರು. ಕಾರ್ಮಿಕ ಮುಖಂಡರಾದ ಬಾಬು ದೇವಾಡಿಗ, ಪದ್ಮಾವತಿ ಶೆಟ್ಟಿ, ಜಯಂತ ನಾಯಕ್, ಭಾರತಿ ಬೋಳಾರ್, ಎಲ್.ಟಿ.ಸುವರ್ಣ, ಸಿಪಿಐ(ಎಂ) ಮುಖಂಡರಾದ ಕೃಷ್ಣಪ್ಪ ಸಾಲ್ಯಾನ್ ಮುಂತಾದವರು ಭಾಗವಹಿಸಿದ್ದರು.





ಗದಗ ಅಪ್ಪರ್ ಜಿಲ್ಲಾಧಿಕಾರಿ ರುದ್ರೇಗೌಡರಿಗೆ ಮನವಿ ಸಲಿಸುತ್ತಿರುವುದು

ಉಡುಪಿ

ಸಿಐಟಿಯು ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಉಡುಪಿ ತಾಲೂಕು ಕಚೇರಿ ಮುಂದೆ ಪ್ರತಿಭಟನಾ ಧರಣಿ ನಡೆಸಲಾಯಿತು. ಬಳಿಕ ತಹಶೀಲ್ದಾರರ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ವಿಶ್ವನಾಥ ರೈ, ದೋಗು ಸುವರ್ಣ, ರಮೇಶ್ ಮೆಂಡನ್ ಮೊದಲಾದವರು ಭಾಗವಹಿಸಿದ್ದರು.

ಕುಂದಾಪುರ ಧರಣಿ ಸತ್ಯಾಗ್ರಹ

ಸಿಐಟಿಯು ಜನರಲ್ ಕೌನ್ಸಿಲ್ ಕರೆ ನೀಡಿದ ಕೇಂದ್ರ ಕಾರ್ಮಿದ ಸಂಘಟನೆಗಳ ಜಂಟಿ 10 ಬೇಡಿಕೆಗಳಿಗಾಗಿ ಜುಲೈ 2 ರಿಂದ 9 ರವರೆಗೆ ಪ್ರಚಾರಾಂದೋಲನ ನಡೆಸಿ ಜುಲೈ 10ರಂದು ಬೇಡಿಕೆ ಈಡೇರಿಕೆಗೆ ಕುಂದಾಪುರ ತಹಶೀಲ್ದಾರರ ಕಛೇರಿ ಎದುರು ಸಾವಿರಾರು ಕಾರ್ಮಿಕರು ಸಿಐಟಿಯೂ ನೇತೃತ್ವದಲ್ಲಿ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿದರು. ಇಡೀ ದಿನ ಎಡಬಿಡದೆ ಮಳೆ ಸುರಿಯುತ್ತಿದ್ದರೂ ಕಾರ್ಮಿಕರು ಕೈಯಲ್ಲಿ ಛತ್ರಿ, ಬಾವುಟಗಳನ್ನು ಹಿಡಿದು ಕೇಂದ್ರ-ರಾಜ್ಯ ಸರಕಾರಗಳ ವಿರುದ್ಧ ನಮ್ಮ ಬೇಡಿಕೆಗಾಗಿ ಘೋಷಣೆಗಳ ಸದ್ದು ಮೊಳಗುತ್ತಿದ್ದುದನ್ನು ಗಮನಿಸಿದ ತಹಶೀಲ್ದಾರರು ತಮ್ಮ ಸಹಾಯಕ ಹಾಗೂ ಕಾನ್‌ಸ್ಟೇಬಲ್ ಮೂಲಕ ಮನವಿ ನೀಡಿ ಎಂಬ ಒತ್ತಾಯ ಪದೇ ಪದೇ ಮಾಡುತ್ತಿದ್ದರು. ಆಮೇಲೆ ಸ್ವತಃ ತಹಶೀಲ್ದಾರರೇ ಧರಣಿ ನಿರತರ ಬಳಿ ಬಂದು ಮನವಿ ನೀಡಿ ಎಂದರು. ಧರಣಿ ಅಂತ್ಯಕ್ಕೆ ಮನವಿ ನೀಡಲಾಯಿತು.

ಧರಣಿಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಕೆ. ಶಂಕರ ಮಾತನಾಡಿ ದೇಶದ ಎಲ್ಲಾ ಕಾರ್ಮಿಕ ಸಂಘಟನೆಗಳು ತಮ್ಮ ಭಿನ್ನಾಭಿಪ್ರಾಯ ಮರೆತು ಇದುವರೆಗೂ 14 ಒಂದು ದಿನದ ಮುಷ್ಕರ ಅಭೂತಪೂರ್ವ ಎಂಬಂತೆ ನಡೆಸಿವೆ. ಆದರೆ ಕೇಂದ್ರ ಕಾರ್ಮಿಕ ಸಂಘಟನೆಗಳ 10 ಬೇಡಿಕೆಗಳ ಬಗ್ಗೆ ಸರಕಾರ ಗಮನ ಹರಿಸದಿರುವ ಬಗ್ಗೆ ಕಾರ್ಮಿಕರು ಮನಗಾಣ ಬೇಕು. ಕಾರ್ಮಿಕ ವರ್ಗ ಬಂಡವಾಳ ಶಾಹಿ ನೀತಿಯ ವಿರುದ್ಧ ಮತ್ತಷ್ಟು ಬಲಿಷ್ಟ ಹೋರಾಟಗಳನ್ನು ಕಟ್ಟಿ ಬೆಳೆಸಬೇಕಾಗಿದೆ ಎಂದರು.

ಸಿಐಟಿಯುವಿನ ತಾಲೂಕು ಕಾರ್ಯದರ್ಶಿ ಸುರೇಶ್ ಕಲ್ಲಾಗರ ಹೋರಾಟದ 10 ಬೇಡಿಕೆಗಳನ್ನು ವಿವರಿಸಿ ಮಾತನಾಡಿದರು. ಹೋರಾಟದಲ್ಲಿ ಹಂಚು ಕಾರ್ಮಿಕರು, ಕಟ್ಟಡ ಕಾರ್ಮಿಕರು, ಕ್ಯಾಶು ಕಾರ್ಮಿಕರು, ಬೀಡಿ ಕಾರ್ಮಿಕರು ಭಾಗವಹಿಸಿದ್ದರು. ಸಿಐಟಿಯು ತಾಲೂಕು ಅಧ್ಯಕ್ಷರಾದ ಹೆಚ್. ನರಸಿಂಹ ಮಹಾಬಲ ವಡೇರಹೋಬಳಿ, ದಾಸಭಂಡಾರಿ, ವಿ. ನರಸಿಂಹ, ಉಪಸ್ಥಿತರಿದ್ದರು. ಕಾಂ| ವೆಂಕಟೇಶ್ ಕೋಣಿ ಧನ್ಯವಾದ ಅರ್ಪಿಸಿದರು.

ಗುರುಪುರ

ಗುರುಪುರ ಕೈಕಂಭದ ನಾಡ ಕಚೇರಿ ಎದುರು ಸಿಐಟಿಯು ಗುರುಪುರ ವಲಯ ಸಮಿತಿಯ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಪ್ರತಿಭಟನೆಯಲ್ಲಿ ಸಿಐಟಿಯು ದ.ಕ.ಜಿಲ್ಲಾ ಸಮಿತಿಯ ಉಪಾಧ್ಯಕ್ಷ ಯು.ಬಿ.ಲೋಕಯ್ಯ, ವಲಯ ಸಮಿತಿ ಕಾರ್ಯದರ್ಶಿ ಸದಾಶಿವ ದಾಸ್, ನೋಣಯ್ಯ ಗೌಡ ಮತ್ತಿತರರು ಭಾಗವಹಿಸಿದ್ದರು.

ಮೂಡಬಿದರೆ

ಮೂಡಬಿದ್ರೆ ನಾಡ ಕಚೇರಿ ಎದುರು ನಡೆದ ಪ್ರತಿಭಟನೆಯನ್ನು ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಉದ್ಘಾಟಿಸಿ ಮಾತನಾಡಿದರು. ಸಿಐಟಿಯು ಜಿಲ್ಲಾ ಉಪಾಧ್ಯಕ್ಷೆ ರಮಣಿ, ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಕಾರ್ಮಿಕ ಮುಖಂಡರಾದ ಗಿರಿಜ, ರಾಧಾ, ಶಂಕರ ಮಿತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಿ.ಸಿ.ರೋಡ್

ಸಿಐಟಿಯು ಬಂಟ್ವಾಳ ತಾಲೂಕು ಸಮಿತಿಯ ವತಿಯಿಂದ ಬಿ.ಸಿ.ರೋಡ್‌ನಲ್ಲಿ ತಾಲೂಕು ಕಚೇರಿಯ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲಾಯಿತು. ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ತಾಲೂಕು ಸಮಿತಿ ಅಧ್ಯಕ್ಷ ರಾಮಣ್ಣ

ಪುಟ 15ಕ್ಕೆ

ಹೊಲಸನ್ನು ಮೂರು ಪಾಲು ಮಾಡಿ ನಾರುವುದು ಯಾವುದು ನಾರದಿರುವುದು ಯಾವುದು ಎನ್ನಲುಂಟೇ ಅಯ್ಯಾ !!

ದೃಶ್ಯ 1– ಅವರು ಹನ್ನೊಂದು ತಿಂಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದರು. ಆದರೂ ಲೋಕಾಯುಕ್ತ, ಉಪ ಲೋಕಾಯುಕ್ತ ಹುದ್ದೆ ಭರ್ತಿಯಾಗದೇ –ಕೇಳುವರಿಲ್ಲದೇ ಅನಾಥವಾಗಿ ಬಿದ್ದಿರುವ ಕರ್ನಾಟಕ ರಾಜ್ಯದ ಲೋಕಾಯುಕ್ತ ಸಂಸ್ಥೆಗೆ ದಕ್ಷ, ಪ್ರಾಮಾಣಿಕ ವ್ಯಕ್ತಿಗಳನ್ನು ನೇಮಿಸಲಿಲ್ಲ. ಕರ್ನಾಟಕ ರಾಜ್ಯದ ನೈಸರ್ಗಿಕ ಸಂಪತ್ತನ್ನು ನಿರ್ದಯವಾಗಿ ಲೂಟಿ ಮಾಡಿದವರನ್ನು, ಕರ್ನಾಟಕದ ಜನತೆ ಎಂದೂ ಕೇಳರಿಯದ, ಕಂಡರಿಯದ ಸ್ವರೂಪದ ಹೊಲಸು ಹಗರಣಗಳಲ್ಲಿ ಭಾಗಿಯಾದ ಬಿಜೆಪಿ – ಆರೆಸ್ಸೆಸ್ ಮುಖಂಡರನ್ನು ರಕ್ಷಿಸಿಕೊಳ್ಳುವ 'ರಕ್ಷಣಾ' ಖಾತೆ ವ್ಯವಹಾರ ಬಿಟ್ಟರೆ ಇನ್ನಾವ ಖಾತೆ ದಕ್ಷವಾಗಿ ನಿರ್ವಹಿಸಲಾಯಿತೆಂಬುದು ಯಾರಿಗೂ ಗೊತ್ತಿಲ್ಲ. ಇಪ್ಪತ್ತು ಮತ್ತೂ ಹೆಚ್ಚು ಖಾತೆ ತಲೆ ಮೇಲೆ ಹೊತ್ತು ಹೈರಾಣದ ಡಿ.ವಿ.ಸದಾನಂದ ಗೌಡರನ್ನು ಭ್ರಷ್ಟಾಚಾರ ರಹಿತ ಆಡಳಿತ ಕೊಟ್ಟಿದ್ದಾರೆ, ದಕ್ಷ ಆಡಳಿತ ಕೊಟ್ಟಿದ್ದಾರೆಂದು ಎಂದು ಹೊಗಳಿ ಅಟ್ಟಕ್ಕೇರಿಸಲಾಗುತ್ತಿದೆ.

0 0 0 0

ದೃಶ್ಯ 2– ಇತ್ತ ಕಡೆಯಾದರೂ ಏನು ನಡೆದಿದೆ. ಮುಖ್ಯ ಮಂತ್ರಿ ಹುದ್ದೆಗೆ ಹೊಸ ವ್ಯಕ್ತಿ ಬಂದಿದ್ದಾರೆ. ಅವರು ಸಜ್ಜನರಂತೆ. ಸರಳ ವ್ಯಕ್ತಿಯಂತೆ. ವಿನಯವಂತರಂತೆ. 1990 ರ ದಶಕದ ಮೊದಲರ್ಧದಲ್ಲಿ ಹುಬ್ಬಳ್ಳಿ–ಧಾರವಾಡಗಳಲ್ಲಿ ಯಾವ ವಾತಾವರಣ ಇತ್ತು ಯಾವ ಪರಿಸ್ಥಿತಿ ಇತ್ತು ಎಂಬುದನ್ನು ಬೇಕೆಂದೇ ಈಗ ನೆನಪಿಸದೇ ಇರಲು ಪ್ರಯತ್ನಿಸಲಾಗುತ್ತಿದೆ. ಬಾಬಾಬುಡನ್ ಗಿರಿ ಪ್ರಶ್ನೆಯನ್ನು ಹಿಡಿದುಕೊಂಡು ಕರ್ನಾಟಕಕ್ಕೆ ಬೆಂಕಿ ಹಚ್ಚುವ ಪ್ರಯತ್ನಗಳಿಗೂ ಎಷ್ಟೋ ವರ್ಷ ಮೊದಲೇ ಹುಬ್ಬಳ್ಳಿ ಈದ್ಗಾ ಪ್ರಶ್ನೆಯನ್ನು ಹಿಡಿದುಕೊಂಡು ಕರ್ನಾಟಕ ರಾಜ್ಯವನ್ನು ಹಿಡಿಯಲು, ಅದಾಗದಿದ್ದರೆ ಕೊನೆ ಪಕ್ಷ ಉತ್ತರ ಕರ್ನಾಟಕವನ್ನಾದರೂ ಹಿಡಿದುಕೊಳ್ಳಲು ಬಿಜೆಪಿ ಮತ್ತು ಸಂಘ ಪರಿವಾರ ಪ್ರಯತ್ನಿಸುತ್ತಿತ್ತು. ಈ ಶೆಟ್ಟರ್ ಆಗ ಬಿಜೆಪಿ ಪಕ್ಷದ ಧಾರವಾಡ ಜಿಲ್ಲಾ ಅಧ್ಯಕ್ಷರಾಗಿದ್ದರು. ಆ ಕೋಮು ಉದ್ವಿಗ್ನ ಪರಿಸ್ಥಿತಿ ಸೃಷ್ಟಿಸುವುದರಲ್ಲಿ ಶೆಟ್ಟರ್ ಪಾತ್ರವೆಲ್ಲ ಅವರು ಮುಖ್ಯಮಂತ್ರಿ ಹುದ್ದೆ ಏರಿದ ಕೂಡಲೇ ಅಳಿಸಿ ಹೋಗುತ್ತದಾ ?

ಈಗ ಜಗದೀಶ ಶೆಟ್ಟರ್ ಅವರು 'ಎಲ್ಲರನ್ನೂ ಸರಿದೂಗಿಸಿಕೊಂಡು ಹೋಗು'ತ್ತಾರಂತೆ. ಈ ಮಾತಿನ ನಿಜವಾದ ಅರ್ಥ ಏನು ಅಂತ ವಿಚಾರಿಸಲು, ವಿಮರ್ಶಿಸಲು ಬಹುತೇಕ ಯಾವ ದೂರದರ್ಶನ ಚಾನಲ್ಲುಗಳಿಗೂ ಮನಸ್ಸಿಲ್ಲ.

ಸದಾನಂದ ಗೌಡರು ಜುಲೈ 12, 2012 ರಂದು ದೂರದರ್ಶನ ವಾಹಿನಿಗಳಿಗೆ ನೀಡಿದ ಸಂದರ್ಶನದಲ್ಲಿ ಹೇಳುತ್ತಿದ್ದರು. ಬಿಜೆಪಿಯ ಸಚಿವರು, ಶಾಸಕರುಗಳಿಂದ ನನಗೆ ಆಡಳಿತದ ಅವಧಿಯಲ್ಲಿ ಸಹಕಾರ ಸಿಗಲಿಲ್ಲ. ಅವರುಗಳು ವಿವಿಧ ಕಡತಗಳನ್ನು ಹೊತ್ತುಕೊಂಡು ಬಂದು ನಾನು ಅದನ್ನು ಪರಿಶೀಲನೆ ನಡೆಸದೇ ಹಾಗೇ ಸಹಿ ಹಾಕಬೇಕೆಂದು ಒತ್ತಾಯಿಸುತ್ತಿದ್ದರು ಅಂತ. ಸದಾನಂದ ಗೌಡರ ಬದಲಾವಣೆಯ ಒಂದು ಪ್ರಮುಖ ಕಾರಣ ಏನೆಂದು ಸದಾನಂದಗೌಡರೇ ಬಹಿರಂಗ ಮಾಡಿದ್ದಾರೆ.


★

ಡಿ–ನೋಟಿಫಿಕೇಷನ್ ಭೂತ

ಸದಾನಂದಗೌಡರು ಪಾಪ ಆರೆಸ್ಸೆಸ್‌ನ 'ಕಟ್ಟಾ' ಅನುಯಾಯಿಯಾಗಿ ಕಡತಕ್ಕೆ ಕಣ್ಣು ಮುಚ್ಚಿ ಸಹಿ ಹಾಕುತ್ತಿದ್ದರೋ ಏನೋ. ಆದರೆ ಯಡಿಯೂರಪ್ಪ, 'ಕಟ್ಟಾ' ಅವರುಗಳ ಪರಪ್ಪನ ಅಗ್ರಹಾರ ಯಾತ್ರೆಗಳು ಅವರನ್ನು ಬೆಚ್ಚಿ ಬೀಳಿಸಿದ್ದವು. ಮುಂದೆ 'ಜಗದೀಶನಾಳ್ವಿಕೆ' ಹೇಗಿರಬಹುದು ಎಂಬುದು ಊಹಾ ಪೋಹ ಆಗುತ್ತದೆ. ಅದು ಬೇಡ. ಆದರೆ ಹಿಂದೆ ಅವರು ಕಂದಾಯ ಸಚಿವರಾಗಿದ್ದಾಗ ಅದು ಹೇಗಿತ್ತು ಎಂದು ನೋಡಬಹುದಲ್ಲ. ? (ಹಾಗೆ ಪರಿಶೀಲಿಸುವುದು ಪೂರ್ವಗ್ರಹ ಪೀಡನೆಯಾಗುವುದಿಲ್ಲ.) ಅದೇ ನೋಡಿ ಈಗ ಅಸಲಿ ವಿಷಯ.

ದಾಸನಪುರ ಹೋಬಳಿಯ 188 ಎಕರೆ ಡಿ–ನೋಟಿಫಿಕೇಷನ್ ಕತೆ

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ದಾಸನಪುರ ಹೋಬಳಿ ಅಂತ ಇದೆ. ಆ ವ್ಯಾಪ್ತಿಯಲ್ಲಿ ಎಪಿಎಂಸಿ ಮಾರುಕಟ್ಟೆಗೆಂದು 2004 ರಲ್ಲಿ ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ 356 ಎಕರೆ ಜಮೀನು ಗುರುತಿಸಿ ನೋಟಿಫೈ ಮಾಡಲಾಗಿತ್ತು. ಅಂದರೆ ಅಧಿಸೂಚನೆ ಹೊರಡಿಸಲಾಗಿತ್ತು. 2006 ರಲ್ಲಿ ಜೆಡಿ(ಎಸ್)– ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಕಂದಾಯ ಮಂತ್ರಿಗಳಾಗಿದ್ದ ಜಗದೀಶ ಶೆಟ್ಟರ್ ಅವರು ಸದರಿ 356 ಎಕರೆ ಜಮೀನಿನಲ್ಲಿ 188 ಎಕರೆ ಭೂಮಿಯನ್ನು ಕಾನೂನು ಬಾಹಿರವಾಗಿ ಡಿ ನೋಟಿಫೈ ಮಾಡಿದ್ದಾರೆಂದು ಕರ್ನಾಟಕ ಜನ ಜಾಗೃತಿ ವೇದಿಕೆಯ ಅಧ್ಯಕ್ಷ ತಲಕಾಡು ಚಿಕ್ಕರಂಗೇ ಗೌಡ ಎಂಬುವರು ದಾಖಲೆ ಬಹಿರಂಗಪಡಿಸಿ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದಾರೆ. ಜಗದೀಶ ಶೆಟ್ಟರ್ ಅವರ ವಿರುದ್ಧ ದೂರು ದಾಖಲಾಗಿದೆ. ಅಂದರೆ ಡಿ ನೋಟಿಫಿಕೇಷನ್ ಭೂತ, ಭೂ ಗಳ್ಳತನ, ಭೂ ಕಬಳಿಕೆ ಹಗರಣಗಳ ಭೂತ ಬಿಜೆಪಿ ಸರ್ಕಾರವನ್ನು ಅಷ್ಟು ಸುಲಭವಾಗಿ ಬಿಡುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಆರೆಸ್ಸೆಸ್ ನಿಯಂತ್ರಿತ ಬಿಜೆಪಿ ಸರ್ಕಾರದಿಂದ ಜನರ ಸಮಸ್ಯೆಗಳಿಗೆ ಪರಿಹಾರವನ್ನು ನಿರೀಕ್ಷಿಸುವುದು–ಒಳ್ಳೆಯ ಸರ್ಕಾರವನ್ನು ನಿರೀಕ್ಷಿಸುವುದು ಎಂದರೆ ಬೇವಿನ ಬೀಜವನ್ನು ಬಿತ್ತಿ ಮಾವು ಫಲ ನಿರೀಕ್ಷಿಸಿದಂತೆ. ಜನತೆ ಬಿತ್ತನೆ ಬೀಜವನ್ನು ಬದಲಿಸಕೊಳ್ಳಬೇಕಿದೆ ಅಷ್ಟೆ.



ಕೃಪೆ : ದಿ ಹಿಂದೂ



ಬಿಜೆಪಿ ದರ್ಬಾರ್

ಆರ್.ರಾಮಕೃಷ್ಣ

ಆಳುವ ಜನಗಳಿಗೆ ಲೆಕ್ಕಕ್ಕೆ ಇಲ್ಲದ ರೈತರ ಆತ್ಮಹತ್ಯೆಗಳ ಸಾಲು ಸಾಲು

ಬಿಜೆಪಿ ಪಕ್ಷದೊಳಗಿನ ಹೀನಾಯ ಕಿತ್ತಾಟಗಳು, ಕುರ್ಚಿ ಎಳೆದಾಟಗಳು, ಸಾಂಗವಾಗಿ ನಡೆಯುತ್ತಿರುವಾಗಲೇ ರಾಜ್ಯದಲ್ಲಿ ಜನರ ಬದುಕು ಏನಾಗುತ್ತಿದೆ ಎಂಬುದನ್ನು ನೋಡಿ. ಹಾವೇರಿ ತಾಲ್ಲೂಕಿನ ನೆಗಳೂರಿನ ಕರಿಬಸಪ್ಪ ತಿರುಕಪ್ಪ ಸನದಿ , 64 ವರ್ಷದ ರೈತ ವಿಷಸೇವಿಸಿ ಆತ್ಮಹತ್ಮೆಗೆ ಶರಣಾಗಿದ್ದಾರೆ. ಗುತ್ತಲದ ಸೆಂಟ್ರಲ್ ಬ್ಯಾಂಕಿನಲ್ಲಿ 2 ಲಕ್ಷ, ಮಹೇಂದ್ರ ಫೈನಾನ್ಸ್ ಕಂಪನಿಯಲ್ಲಿ 2.7 ಲಕ್ಷ ಹಾಗೂ ಕೆವಿಜಿ ಬ್ಯಾಂಕಿನಲ್ಲಿ 26 ಸಾವಿರ ರೂಪಾಯಿ ಸಾಲವಿದ್ದ ಈ ರೈತ ಕಳೆದ ವರ್ಷದ ಬೆಳೆ ಹಾನಿಯಿಂದ ನೊಂದಿದ್ದ ಮನುಷ್ಯ. ರಾಜುರೆಡ್ಡಿ ಹನುಮರೆಡ್ಡಿ ಶೆಟಪ್ಪ ಎಂಬ 32 ವರ್ಷದ ಯುವ ರೈತ ಕೂಡ ಇದೇ ಜುಲೈ 11, 2012 ರಂದು ವಿಷ ಸೇವಿಸಿ ದುರಂತ ಸಾವು ಅಪ್ಪಿಕೊಂಡಿದ್ದಾನೆ. ಕೆವಿಜಿ ಬ್ಯಾಂಕಿನಲ್ಲಿ 1.5 ಲಕ್ಷ ಮಹೇಂದ್ರ ಫೈನಾನ್ಸ್‌ನಲ್ಲಿ 3 ಲಕ್ಷ ಅಲ್ಲದೇ ಒಂದಷ್ಟು ಕೈ ಸಾಲವೂ ಸೇರಿ ಈ ಯುವಕನ ಪ್ರಾಣ ಬಲಿ ಪಡೆದಿದೆ.

ರೈತರ ಹೆಸರಿನಲ್ಲಿ ಅಧಿಕಾರ ಪಡೆದ ರಾಜ್ಯದ ಅಧಿಕಾರಸ್ಥ ಬಿಜೆಪಿ ಸರ್ಕಾರಕ್ಕೆ, ಕೇಂದ್ರದ ಯುಪಿಎ ಸರ್ಕಾರಕ್ಕೆ ಈ ಸಮಸ್ಯೆಗಳ ಬಗೆಗೆ ಚಿಂತಿಸಲು ಏನಾದರೂ ಸ್ವಲ್ಪ ಪುರುಸೊತ್ತಿದೆಯೇ ?

ಕೃತಜ್ಞತೆಗಳು

1970ರ ದಶಕದಿಂದಲೂ ಐಕ್ಯರಂಗ/ ಜನಶಕ್ತಿ ವಾರ ಪತ್ರಿಕೆಯ ಚಂದಾದಾರರಾಗಿ, ಓದುಗರಾಗಿ ಪ್ರೋತ್ಸಾಹಿಸುತ್ತಾ ಬಂದಿರುವ ಧಾರವಾಡದ ವಿವಾ ನೌಕರರ ಮುಖಂಡರಾದ ಸಂಗಾತಿ ಆರ್.ಎಚ್.ಆಯಿ ಅವರು 'ಜನಶಕ್ತಿ'ಗೆ ಐದು ನೂರುಗಳನ್ನು ದೇಣಿಗೆಯಾಗಿ ಕಳುಹಿಸಿದ್ದಾರೆ. ಜನಶಕ್ತಿ ಬಳಗ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

– ಸಂಪಾದಕರು

ಬೆಳ್ತಂಗಡಿ ಸೂರಿಲ್ಲದ ಬೀಡಿ ಕಾರ್ಮಿಕರಿಗೆ ಮನೆ ನಿರ್ಮಾಣಕ್ಕೆ ಶಂಕುಸ್ಥಾಪನೆ

ಶೇ.ನಿ. ಲ್ಯಾಲ

ಬೆಳ್ತಂಗಡಿ ತಾಲೂಕು ಎಡ ಚಳುವಳಿಯು ಬೆಳೆಯುತ್ತಿರುವ ತಾಲೂಕು. ಇಲ್ಲಿ ಬೀಡಿ ಕೈಗಾರಿಕೆಯೇ ಬಡ ಜನರ ಉದ್ಯೋಗ ಆಧಾರಿತ ಕೈಗಾರಿಕೆ. ಸರಿ ಸುಮಾರು 45,000 ಕ್ಕೂ ಮಿಕ್ಕಿ ಮಹಿಳೆಯರು ಬೀಡಿ ಕೈಗಾರಿಕೆಯನ್ನು ಅವಲಂಬಿಸಿದ್ದಾರೆ. ಬೀಡಿ ಕೈಗಾರಿಕೆಯಲ್ಲಿ ಶೋಷಣೆಯ ಬೇಗೆಯಲ್ಲಿ ಬೆಂದಿರುವ ಈ ಮಹಿಳೆಯರ ಪಾಲಿಗೆ ಮೂಲಭೂತ ಸಮಸ್ಯೆಗಳು ಸುತ್ತಿಕೊಂಡಿದೆ. ಒಟ್ಟಿನಲ್ಲಿ ಇವರ ಸ್ಥಿತಿ ಬಾಣಲೆಯಿಂದ ಬೆಂಕಿಗೆ ಬಿದ್ದ ಹಾಗೆ. ಬೆಳ್ತಂಗಡಿ ತಾಲೂಕಿನಲ್ಲಿ ಸರಿ ಸುಮಾರು 70,000 ಕ್ಕೂ ಹೆಚ್ಚು ಜನ ಸ್ವಂತ ಭೂಮಿ, ಮನೆ ಇಲ್ಲದವರು, ಇದರಲ್ಲಿ 20,000 ಬೀಡಿ ಕಾರ್ಮಿಕರು ಎಂಬುದರಲ್ಲಿ ಎರಡು ಮಾತಿಲ್ಲ.

ರಾಜ್ಯದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಬೀಡಿ ಕಾರ್ಮಿಕರಿಗೆ ಸ್ವಂತ ಜಮೀನನ್ನು ನೀಡಿ, ಮನೆ ನಿರ್ಮಿಸಿ ಅವರ ಉತ್ತಮ ಬದುಕಿಗೆ ಬೆಳಕಾಗಲು ನಿರ್ಧರಿಸಿ ಬೆಳ್ತಂಗಡಿಯಲ್ಲಿ ವರ್ಷದ ಹಿಂದೆ ಸಂಗಾತಿ ಎ.ಕೆ. ಗೋಪಾಲನ್ ಅವರ ಹೆಸರಿನಲ್ಲಿ ಸಹಕಾರಿ ಸಂಸ್ಥೆಯೊಂದನ್ನು ಹುಟ್ಟು ಹಾಕಲಾಯಿತು. ತನ್ನ ಜೀವಿತಾವಧಿಯಲ್ಲಿ ಬೀಡಿ ಕಾರ್ಮಿಕರ ಪರವಾಗಿ ಸಂಸತ್ತಿನ ಒಳಗೆ, ಹೊರಗೆ ಹೋರಾಟಗೈದು ಬೀಡಿ ಕಾರ್ಮಿಕರಿಗೆ ಹಲವಾರು ಸವಲತ್ತುಗಳನ್ನು ಕಲ್ಪಿಸಿಕೊಟ್ಟು ಬೀಡಿಕಾರ್ಮಿಕರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದ ದೇಶದ ಅಗ್ರಗಣ್ಯ ಕಾರ್ಮಿಕ ನಾಯಕ, ಕಾರ್ಮಿಕ ವರ್ಗದ ಕಣ್ಮಣಿ ಸಂಗಾತಿ ಎ.ಕೆ. ಗೋಪಾಲನ್ ಅವರ ಹೆಸರಿನಲ್ಲಿ "ಸಂಗಾತಿ ಎ.ಕೆ.ಜಿ. ಬೀಡಿ ಕಾರ್ಮಿಕರ ಗೃಹ ನಿರ್ಮಾಣ ಸಹಕಾರಿ ಸಂಘ (ನಿ) ಬೆಳ್ತಂಗಡಿ" ಎಂಬ ಸಹಕಾರಿ ಸಂಘವು ನೊಂದಾವಣೆಗೊಂಡ ಒಂದೇ ವರ್ಷದಲ್ಲಿಯೇ ತನ್ನ ಉದ್ದೇಶದ ಮೊದಲ ಕಾರ್ಯಕ್ರಮಕ್ಕೆ ಚಾಲನೆ ನೀಡಿತು.

ಮನೆ ನಿರ್ಮಾಣದ ಮೊದಲ ಹಂತವಾಗಿ ಸ್ವಾತಂತ್ರ್ಯ ಹೋರಾಟಗಾರ ಮೈಸೂರು ಹುಲಿ ಎಂದೇ ಪ್ರಸಿದ್ಧರಾದ ಟಿಪ್ಪು ಸುಲ್ತಾನರ ಕೋಟೆ ಎಂದೇ ಪ್ರಸಿದ್ಧವಾದ, ಸಮುದ್ರಮಟ್ಟಕ್ಕಿಂತ 1700 ಅಡಿ ಎತ್ತರವಿರುವ, ಮಳೆಗಾಲವನ್ನು ಹೊರತುಪಡಿಸಿ ಸಾವಿರಾರು ಪ್ರವಾಸಿಗರ ಚಾರಣ ಸ್ಥಳವಾದ ಖ್ಯಾತ ಜಮಲಾಬಾದ್ ಕೋಟೆಯ ಸಮೀಪ ಸಹಕಾರಿ ಸಂಘದ ನಿರ್ದೇಶಕರಾದ ಸಯ್ಯದ್ ಹಬೀಬ್ ಮತ್ತು ಸಯ್ಯದ್ ಅಸ್ಗರ್‌ರವರು ದಾನವಾಗಿ ಒಂದು ಎಕ್ರೆ ಜಮೀನು ನೀಡಿದ್ದಾರೆ. ಈ ಜಮೀನಿನಲ್ಲಿ ಪ್ರಥಮ ಹಂತದ 44 ಮನೆಗಳ ಶಿಲಾನ್ಯಾಸ ಕಾರ್ಯಕ್ರಮವು ಮೇ 26ರಂದು ನಡೆಯಿತು. ಸಿ.ಪಿ.ಐ(ಎಂ) ನ ಲೋಕಸಭಾ ಉಪನಾಯಕ, ಕಾಸರಗೋಡು ಸಂಸದ ಪಿ. ಕರುಣಾಕರಣ್ ಶೀಲಾನ್ಯಾಸ ಗೈದರು. ಬಳಿಕ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ "ದೇಶಾದ್ಯಂತ ಇರುವ ಕೋಟ್ಯಾಂತರ ಬೀಡಿ ಕಾರ್ಮಿಕರಿಗಾಗಿ ಅನೇಕ ಸೌಲಭ್ಯಗಳು ದೊರಕಲು ಕಾರಣರಾದ ದೇಶದ ಅಗ್ರಗಣ್ಯ ಕಾರ್ಮಿಕ ನಾಯಕ ಎ.ಕೆ. ಗೋಪಾಲನ್ ಅವರ ಹೆಸರಿನಲ್ಲಿ ಸ್ಥಾಪನೆಯಾದ ಗೃಹ ನಿರ್ಮಾಣ ಸಹಕಾರಿ ಸಂಘದ ಮೂಲಕ ಬೀಡಿ ಕಾರ್ಮಿಕರಿಗೆ ಮನೆಗಳನ್ನು ನಿರ್ಮಿಸಿ ಕೊಡುತ್ತಿರುವುದು ಶ್ಲಾಘನೀಯ ಎಂದರು. ದೇಶಾದ್ಯಂತ ಬೀಡಿ ಕೈಗಾರಿಕೆಯಲ್ಲೂ ಕಾರ್ಮಿಕರಿಗೆ ಶೋಷಣೆ, ದೌರ್ಜನ್ಯಗಳು ಹೆಚ್ಚುತ್ತಿದ್ದು, ಮತ್ತೊಂದೆಡೆ ಕೇಂದ್ರ ಸರ್ಕಾರ ವಿಶ್ವ ಆರೋಗ್ಯ ಸಂಸ್ಥೆಯ ತೀರ್ಮಾನದಂತೆ ತಂಬಾಕು ಉತ್ಪಾದನಾ ನಿಷೇಧ ಕಾನೂನು ಜಾರಿಮಾಡಲು ಹೊರಟಿದೆ. ಇದರಿಂದ ಬೀಡಿ ಕಾರ್ಮಿಕ ಕುಟುಂಬಗಳು ಬೀದಿ ಪಾಲಾಗಲಿವೆ ಎಂದು ಕಳವಳ ವ್ಯಕ್ತಪಡಿಸಿ ಸರ್ಕಾರದ ಈ ನೀತಿಯ ವಿರುದ್ಧ ತೀವ್ರವಾದ ಹೋರಾಟದ ಅಗತ್ಯವಿದೆ ಎಂದರು. ಬೀಡಿ ಕಾರ್ಮಿಕರಿಗೆ ಸಿಗುತ್ತಿರುವ ಸವಲತ್ತುಗಳನ್ನು ನಮ್ಮನ್ನಾಳುವ ಸರ್ಕಾರಗಳು ದೋಚಲು ಯತ್ನಿಸುತ್ತಿವೆ. ಬೀಡಿ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ಸಿಗುತ್ತಿದ್ದ ವಿದ್ಯಾರ್ಥಿವೇತನ, ಬೀಡಿ ಕಾರ್ಮಿಕರ ಪಿಂಚಣಿಯನ್ನು ಕಡಿತ ಮಾಡಲು ಹುನ್ನಾರ ನಡೆಸುತ್ತಿದ್ದು ಇದರ ವಿರುದ್ಧ ಸಂಸತ್ತಿನಲ್ಲಿ ಧ್ವನಿ ಎತ್ತುವುದಾಗಿ ಪ್ರಕಟಿಸಿದರು.

ಈ ಸಂಧರ್ಭ ಮುಖ್ಯ ಅತಿಥಿಯಾಗಿ ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದ ಎ.ಜಿ.ಎಂ. ರವಿಕುಮಾರ್ ಮಾತನಾಡಿ ನಿಗಮದಿಂದ ಬೀಡಿ ಕಾರ್ಮಿಕರು, ಕೂಲಿ ಕಾರ್ಮಿಕರು, ಅಂಗನವಾಡಿ ನೌಕರರು, ಹಮಾಲರು, ಅಂಗವಿಕಲರು, ಹೀಗೆ ಸಮಾಜದಲ್ಲಿ ಶೋಷಣೆಗೆ ಒಳಪಟ್ಟವರಿಗೆ ಮನೆ ನಿರ್ಮಿಸಿ ಕೊಡಲಾಗುತ್ತಿದೆ. ಬೆಳ್ತಂಗಡಿಯಲ್ಲಿ ಬೀಡಿ ಕಾರ್ಮಿಕರಿಗೆ ಮನೆ ನಿರ್ಮಿಸಿ ಕೊಡುವ ಪ್ರಯತ್ನವಾಗಿ 44 ಮನೆ ನಿರ್ಮಾಣಕ್ಕೆ ಶಿಲಾನ್ಯಾಸ ಮಾಡಲಾಗಿದ್ದು, ಎ.ಕೆ.ಜಿ. ಸಹಕಾರಿ ಸಂಘವು ಮುಂದಿನ ದಿನಗಳಲ್ಲಿ ತಾಲೂಕಿನ ಎಲ್ಲಾ ವಸತಿ ರಹಿತ ಬೀಡಿ ಕಾರ್ಮಿಕರಿಗೆ ಮನೆ ನಿರ್ಮಾಣ ಮಾಡುವ ಜವಾಬ್ದಾರಿ ಹೊತ್ತುಕೊಂಡಲ್ಲಿ ನಿಗಮವು ಸಂಪೂರ್ಣ ಬೆಂಬಲ ನೀಡಲಿದೆ ಎಂದು ಘೋಷಿಸಿದರು.

ಸಭೆಯನ್ನು ಉದ್ದೇಶಿಸಿ ಆಲ್ ಇಂಡಿಯ ಬೀಡಿ ವರ್ಕರ್ಸ್ ಫೆಢರೇಶನ್ (ಸಿಐಟಿಯು) ರಾಷ್ಟ್ರಾಧ್ಯಕ್ಷ ಬಿ.ಮಾಧವ, ಲ್ಯಾಲ ಜಿ.ಪಂ. ಸದಸ್ಯ ಕೆ.ಶೈಲೇಶ್ ಕುಮಾರ್, ನಡ ತಾ.ಪಂ. ಗಣೇಶ್ ಕಣಾಲು ಮಾತನಾಡಿ ಶುಭ ಹಾರೈಸಿದರು. ಅಧ್ಯಕ್ಷತೆಯನ್ನು ಸಂಗಾತಿ ಎ.ಕೆ.ಜಿ.ಬೀಡಿ ಕಾರ್ಮಿಕರ ಗೃಹ ನಿರ್ಮಾಣ ಸಹಕಾರಿ ಸಂಘದ ಅಧ್ಯಕ್ಷ ಹರಿದಾಸ್ ಎಸ್.ಎಂ. ವಹಿಸಿದ್ದರು. ವೇದಿಕೆಯಲ್ಲಿ ದಾನಿಗಳಾದ ನಿರ್ದೇಶಕ ಸಯ್ಯದ್ ಹಬೀಬ್ ಸಾಹೇಬ್, ಸಯ್ಯದ್ ಅಸ್ಗರ್ ಉಪಸ್ಥಿತರಿದ್ದರು. ಈ ಸಂಧರ್ಭ ಅವರನ್ನು ಸಂಸದ ಪಿ. ಕರುಣಾಕರಣ್ ಸನ್ಮಾನಿಸಿದರು.

ನಿರ್ದೇಶಕ ಶಿವಕುಮಾರ್ ಎಸ್.ಎಂ. ನಿರ್ವಹಿಸಿದ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಬಿ.ಎಂ.ಭಟ್ ಸ್ವಾಗತಿಸಿ, ನಿರ್ದೇಶಕ ಶೇಖರ್ ಎಲ್. ಧನ್ಯವಾದ ಅರ್ಪಿಸಿದರು.

ಬದಲಾದ ಮುಖ್ಯಮಂತ್ರಿ....

ಪುಟ 3 ರಿಂದ

ಹೇಗೂ ಮನಃ ಅಧಿಕಾರಕ್ಕೆ ಬರಬೇಕೆಂಬುದು.

ಗುಪ್ತ ಅಜೆಂಡಾವೇ

ಇಂತಹ ಸರಕಾರ ಮುಂಬರುವ ಚುನಾವಣೆ ಮೇಲೆ ಕಣ್ಣಿರಿಸಿ ತನ್ನ ಕೋಮುವಾದೀ ಅಜೆಂಡಾ ಜಾರಿಗೆ ಒತ್ತು ನೀಡತೊಡಗಿದೆ. ಹಿಂದೆಲ್ಲಾ ಬಿಜೆಪಿ ಜನರ ನಡುವೆ ತನ್ನ ಪ್ರಭಾವ ಕಳೆದು ಕೊಂಡು ಶಕ್ತಿ ಹೀನವಾದಗಲೆಲ್ಲಾ ಆರೆಸ್ಸೆಸ್ ನೆರವಿಗೆ ಬಂದಿದೆ. ಕೋಮು ಗಲಭೆಗಳ ಮೂಲಕ ಮನಃ ನೆಲೆ ಸೃಷ್ಟಿಸಿದೆ. ಈಗಲೂ ಪ್ರಜ್ಞಾ ಪೂರ್ವಕ ಪ್ರಯತ್ನಗಳನ್ನು ಮುಂದುವರಿಸಿದೆ. ಶಿಕ್ಷಣದ ಕೋಮುವಾದೀಕರಣವನ್ನು ಸಮರ್ಥಿಸಿ ಸಚಿವ ಕಾಗೇರಿಯನ್ನು ಅಭಿನಂದಿಸಿ ಸ್ವಯಂಸೇವಕರಾದ ಪಕ್ಷಾಧ್ಯಕ್ಷ ಈಶ್ವರಪ್ಪ ಪ್ರಚೋದಿಸಿದ್ದರು,ಅದು ನಡೆಯುತ್ತಲೇಇದೆ. ವಿಶ್ವವಿದ್ಯಾಲಯಗಳನ್ನು ಪುರೋಹಿತಶಾಹಿ ಆಚರಣೆಗಳ ಅಗ್ರಹಾರಗಳನ್ನಾಗಿ ಪರಿವರ್ತಿಸ ಲಾಗುತ್ತಿದೆ. ಇದರೊಟ್ಟಿಗೆ ಜಾನುವಾರು ಹತ್ಯೆ ನಿಷೇದದ ಮಸೂದೆಯನ್ನು ಮುಂದಿರಿಸಿ ಮತ್ತೇ ಅದನ್ನು ಅಲ್ಪಸಂಖ್ಯಾತರ ವಿರುದ್ಧ ಬಳಸಲು ಪ್ರಯತ್ನಿಸುತ್ತಿದೆ. ಶಿಕ್ಷಣದ ಹಕ್ಕು ಕಾಯ್ದೆ ಜಾರಿಗೆ ಗಂಭೀರವಾದ ಕ್ರಮ ಅನುಸರಿಸದ ಸರಕಾರ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳನ್ನು ಗುರುತಿಸುವ ಮಾನದಂಡವನ್ನು ದಿಢೀರನೇ ಪ್ರಕಟಿಸಿದೆ. ಕಾಶ್ಮೀರದ ಸಮಸ್ಯೆಯ ಬಗೆಗೆ ಕೇಂದ್ರ ಸರಕಾರ ನೇಮಿಸಿದ ಸಂಧಾನಕಾರರನ್ನೇ ನೆಪವಾಗಿರಿಸಿಕೊಂಡು ರಾಜ್ಯದಾದ್ಯಂತ ಪ್ರತಿಭಟನೆಗಳನ್ನು ಆಯೋಜಿಸಿದೆ. ಜನತೆಯನ್ನು ಕೋಮುವಾದೀ ನೆಲೆಯಲ್ಲಿ ದ್ವೇಷ ಹೆಚ್ಚಿಸುವ, ವಿಭಜಿಸುವ ಹಲವು ಕೃತ್ಯಗಳು ಬಹಿರಂಗದಲ್ಲೂ ಗುಪ್ತವಾಗಿಯೂ ನಡೆದಿವೆ.

ಎಚ್ಚರದ ಪ್ರತಿರೋಧ


ಇದೇ ಬಿಜೆಪಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಜನತೆಯಿಂದ ತಿರಸ್ಕೃತ ಗೊಂಡಿದ್ದಾಗ ಮನಃ ಅಧಿಕಾರಕ್ಕೆ ಬರಲು ಮತೀಯವಾದೀ ಹಿಂದುತ್ವವೇ ತನ್ನ ಸಿದ್ಧಾಂತವೆಂದೂ ಅದರ ಆಧಾರದಲ್ಲೇ ಕಾರ್ಯವೆಸಗುವುದಾಗಿ ಘೋಷಿಸಿತ್ತು. ರಾಜ್ಯದಲ್ಲಿಯೂ ಇದು ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆಗಳಿವೆ. ಆದ್ದರಿಂದ ಜನತೆ ಈ ಕೋಮುವಾದಿ ಹುನ್ನಾರಗಳನ್ನು ಅರಿತು ಅವುಗಳನ್ನು ಸೋಲಿಸಬೇಕು. ನೂರೆಂಟು ಸಮಸ್ಯೆಗಳಿಂದ ತತ್ತರಿಸಿರುವ ಜನತೆಯನ್ನು ಆಹಾರದ ಹಕ್ಕು, ಬರ, ಬೆಲೆ ಏರಿಕೆ, ಉದ್ಯೋಗ ಮುಂತಾದ ಸಮಸ್ಯೆಗಳಾಧಾರದಲ್ಲಿ ಸಂಘಟಿಸುವ ಮೂಲಕ ಅವರ ಅಜೆಂಡಾ ಪ್ರಾಧಾನ್ಯತೆ ಪಡೆಯುವಂತೆ ಒತ್ತಡ ಹೇರಬೇಕು. ಇಲ್ಲವಾದಲ್ಲಿ ಜನತೆಯ ಅತೃಪ್ತಿಯನ್ನು ಕೋಮುವಾದಿಗಳು, ಮತೀಯ ಮೂಲಭೂತವಾದಿಗಳು, ಜಾತೀವಾದಿಗಳು ದುರುಪಯೋಗ ಪಡಿಸಿಕೊಳ್ಳಲು ಮುಕ್ತ ಅವಕಾಶ ನೀಡಿದಂತಾಗುತ್ತದೆ. ಸೌಹಾರ್ದಕರ್ನಾಟಕ ಉಳಿಸಲೇ ಬೇಕಲ್ಲವೇ?

ಕನ್ನಡ ವಾರಪತ್ರಿಕೆ

ಸಿಎಜಿ: ಮೇರೆ ದಾಟಿದೆ ಎಂಬ ಟೀಕೆ ಅಸಂಬದ್ಧ

"ಲೆಕ್ಕ ಪರಿಶೋಧನೆಯನ್ನು ಉತ್ತಮ ಆಡಳಿತದ ಒಂದು ಭಾಗೀದಾರ ಎಂದು ಕಂಡಾಗ ಕಾರ್ಯಾಂಗದ ಅಧಿಕಾರ ವ್ಯಾಪ್ತಿಯೊಳಗೆ ಅತಿಕ್ರಮಣ ಎಂಬ ಆಪಾದನೆಗಳು ತಮ್ಮ ಸಂಬದ್ಧತೆಯನ್ನು ಕಳಕೊಳ್ಳುತ್ತವೆ"- ಇದು ದೇಶದ ಮಹಾಲೆಕ್ಕ ಪರಿಶೋಧನಾ ಕಚೇರಿ(ಸಿಎಜಿ)ಯ ಒಂದು ಹಿನ್ನೆಲೆ ಪ್ರಬಂಧದಲ್ಲಿನ ಉದ್ಗಾರ. 2ಜಿ, ಏರ್ ಇಂಡಿಯಾ ಮುಂತಾದ ಹಗರಣಗಳು ಬೆಳಕಿಗೆ ಬರಲು ಕಾರಣವಾದ ಸಿಎಜಿ ವರದಿಗಳು ಸ್ವತಃ ಯುಪಿಎ ಪ್ರಧಾನಮಂತ್ರಿಗಳೂ ಸೇರಿದಂತೆ ಆಳುವ ಕೂಟದ ವಕ್ತಾರರುಗಳ ಟೀಕೆಗಳಿಗೆ ಗುರಿಯಾಗಿರುವ ಹಿನ್ನೆಲೆಯಲ್ಲಿ ಈ ಉದ್ಗಾರ ಬಂದಿದೆ. ಸಿಎಜಿಯ ಕೆಲಸ ಲೆಕ್ಕ-ಪತ್ರಗಳನ್ನು ಪರಿಶೀಲಿಸುವದಷ್ಟೆ, ಸಂವಿಧಾನ ವಿಧಿಸಿದ ಮೇರೆಯನ್ನು ಅದು ಮೀರಬಾರದು, ಸರಕಾರದ ನೀತಿಗಳ ಬಗ್ಗೆ ಅದು ಮಾತಾಡುವಂತಿಲ್ಲ, 2ಜಿ ಹಂಚಿಕೆ, ಏರ್ ಇಂಡಿಯಾ ವಿಮಾನ ಖರೀದಿ ಇವೆಲ್ಲ ಸರಕಾರದ ನೀತಿಯ ಪ್ರಶ್ನೆಗಳು, ಆದ್ದರಿಂದ ಇದರಲ್ಲಿ ದೇಶದ ಖಜಾನೆಗೆ ನಷ್ಟವಾಗಿದೆ ಎಂಬ ಲೆಕ್ಕಾಚಾರಕ್ಕೆ ಅರ್ಥವಿಲ್ಲ ಎಂಬುದು ಆಳುವ ಮಂದಿಯ ವಾದ. ಪ್ರಧಾನಮಂತ್ರಿಗಳೇ ಈ ಅರ್ಥ ಬರುವಂತೆ ಜೂನ್ 2011ರಲ್ಲಿ ಹೇಳಿಕೆ ನೀಡಿದ್ದರು. ಇವೆಲ್ಲಾ ಹುರುಳಿಲ್ಲದ ವಾದ ಎಂಬುದೀಗ ಸಿಎಜಿಯ ಕಟು ಉತ್ತರ. ಪ್ರಭುತ್ವದ ಆದಾಯಗಳನ್ನು ತಟ್ಟಬಹುದಾದ ಧೋರಣೆಗಳನ್ನು ಪ್ರಶ್ನಿಸಲು ಮತ್ತು ಸೂಕ್ತ ಶಿಫಾರಸುಗಳನ್ನು ಮಾಡಲು ಸಂವಿಧಾನಾತ್ಮಕವಾಗಿ ಬಾಧ್ಯವಾಗಿದೆ ಎಂಬುದನ್ನು ಅದು ನಮ್ಮ ಅರ್ಥಶಾಸ್ತ್ರಜ್ಞ 'ಜಂಟಲ್ಮನ್' ಪ್ರಧಾನ ಮಂತ್ರಿಗಳೂ ಸೇರಿದಂತೆ ಯುಪಿಎ-2 ವಕ್ತಾರರುಗಳಿಗೆ ಈ ಪ್ರಬಂಧದಲ್ಲಿ ನೆನಪಿಸಿದೆ.

ಇವರೆಲ್ಲಾ ಅಪಾದಿಸುವಂತೆ ಸಿಎಜಿ ತನ್ನ ಅಧಿಕಾರದ ಮೇರೆ ಮೀರಿಲ್ಲ, ಸಂವಿಧಾನದತ್ತ ಅಧಿಕಾರದ ವ್ಯಾಪ್ತಿಯೊಳಗೆ ಕೆಲಸ ಮಾಡಿದೆ ಎಂದು ತನ್ನನ್ನು ಅದು ಸಮರ್ಥಿಸಿಕೊಂಡಿದೆ; ಅಧಿಕಾರಸ್ಥರ ಟೀಕೆಗಳ ಹಿನ್ನೆಲೆಯಲ್ಲಿ 2ಜಿ ತರಂಗಾಂತರ ಹಂಚಿಕೆ ಮತ್ತು ಏರ್ ಇಂಡಿಯಾ ಸಂಬಂಧಪಟ್ಟಂತೆ ದೇಶದ ಖಜಾನೆಗೆ ಎಷ್ಟು



ಕೃಪೆ : ದಿ ಹಿಂದು

ನಷ್ಟವಾಗಿದೆ ಎಂಬ ತನ್ನ ಲೆಕ್ಕಾಚಾರಗಳ ಮರು ಪರಿಶೀಲನೆ ನಡೆಸಿದ ಅವೆಲ್ಲಾ ಸಂಪೂರ್ಣವಾಗಿ ಸರಿಯಾಗಿವೆ ಎನ್ನುತ್ತಾ ಅವಕ್ಕೆ ಇನ್ನಷ್ಟು ಸಮರ್ಥನೆಗಳನ್ನು ಒದಗಿಸಿದೆ.

ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್‌ಗೆ 111 ಹೊಸ ವಿಮಾನಗಳ ಖರೀದಿ 'ಆರಂಭದಿಂದಲೇ ವಿಪತ್ತಿಗೆ ಆಹ್ವಾನವಾಗಿತ್ತು', ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್ ವಿಲೀನದ ಮೊದಲು ಅದರ ಹಣಕಾಸು ಆಯಾಮದ ಬಗ್ಗೆ ಸಾಕಷ್ಟು ಪೂರ್ವ-ಪರಿಶೀಲನೆ ನಡೆಸಿಲ್ಲ ಎಂಬ ತನ್ನ ಟಿಪ್ಪಣಿಯನ್ನು ಈಗ ವಿಮಾನಯಾನ ಮಂತ್ರಿಗಳ ಹೇಳಿಕೆಯೇ ದೃಢಪಡಿಸಿದೆ ಎಂದು ಅದು ಹೇಳಿದೆ. ಸಿಎಜಿ ಇನ್ನೂ ಹತ್ತಾರು ಪ್ರಕಟಣೆಗಳು, ವಿಶ್ಲೇಷಣೆಗಳು, ಮಾಧ್ಯಮ ವರದಿಗಳು ಮತ್ತು ಚರ್ಚೆಗಳನ್ನು ಉದಾಹರಿಸುತ್ತಾ ತನ್ನ ಏರ್ ಇಂಡಿಯಾ ವರದಿ "ಎಂದಿನ ಲೆಕ್ಕ ಪರಿಶೋಧನಾ ವರದಿಗಳಂತಿರಲಿಲ್ಲ, ಅದು ಹಲವು ತಾಂತ್ರಿಕ ಪರಿಕಲ್ಪನೆಗಳನ್ನು ಬಳಸಿತ್ತು. ಅವುಗಳ ಪೂರ್ಣ ಅರ್ಥ ಮತ್ತು ಅವುಗಳಿಂದ ಹೊಮ್ಮಿರುವ ಲೆಕ್ಕ ಪರಿಶೋಧನಾ ಟಿಪ್ಪಣಿಗಳು ತೆರೆದ ಮನಸ್ಸಿನಿಂದ ವಿಶ್ಲೇಷಣೆ ನಡೆಸುವ ವ್ಯಕ್ತಿಗಳಿಗಷ್ಟೆ ಸ್ಪಷ್ಟವಾಗುತ್ತವೆ. ಸರಕಾರದ ಆನಂತರದ ಕ್ರಿಯೆಗಳು ಇದನ್ನು ಸಮರ್ಥಿಸುತ್ತವೆ" ಎಂದು ಅದು ಬಹಳ ಕಟುವಾಗಿಯೇ ಹೇಳಿದೆ.

★

2ಜಿ ಹಗರಣ: ಮಾಜಿ ಮಂತ್ರಿ, ಪ್ರಧಾನಿ ಕಚೇರಿಯತ್ತ ಬೊಟ್ಟು ತೋರಿದ್ದಾರೆ ಮಾಜಿ ಟೆಲಿಕಾಂ ಕಾರ್ಯದರ್ಶಿ

ಸಿಎಜಿ 2ಜಿ ತರಂಗಾಂತರ ಹಂಚಿಕೆ ಕುರಿತಂತೆ ನವಂಬರ್ 201ರಲ್ಲಿ ನೀಡಿದ ವರದಿ ಖಜಾನೆಗೆ ಭಾರೀ ನಷ್ಟದ ಬಗ್ಗೆ ಮಾತ್ರವಲ್ಲ, ಧೋರಣೆಯ ಅನುಷ್ಠಾನದಲ್ಲಿಯೂ ಆಗಿದ್ದ ಉಲ್ಲಂಘನೆಗಳ ಬಗ್ಗೆ ಹೇಳಿತ್ತು. ದೇಶದ ಸರ್ವೋಚ್ಚ ನ್ಯಾಯಾಲಯ ಕೂಡ ಸ್ವತಂತ್ರವಾಗಿಯೇ ಇವೇ ಕಾರಣಗಳನ್ನು ಕೊಡುತ್ತಾ ಈ ಪರವಾನಿಗೆಗಳನ್ನು ರದ್ದು ಮಾಡಿದೆ, ದೇಶದ ಖಜಾನೆಗೆ ನಷ್ಟವಾಗಿದೆ ಎಂಬ ತೀರ್ಮಾನಕ್ಕೆ ಬಂದಿದೆ ಎಂಬ ಸಂಗತಿಯತ್ತ ಸಿಎಜಿ ಈಗ ನಡೆಸಿರುವ ಮರುವಿಮರ್ಶೆಯಲ್ಲಿ ಗಮನ ಸೆಳೆಯಲಾಗಿದೆ.

'ಧೋರಣೆ ರೂಪಿಸುವುದು ಸರಕಾರದ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ, ತಾನು ಆ ಧೋರಣೆಯ ಅನುಷ್ಠಾನವನ್ನು ಪರಿಶೀಸಿರುವುದಷ್ಟೇ' ಎಂದು ತನ್ನ ವರದಿಯಲ್ಲೇ ಹೇಳಿರುವುದನ್ನು ನೆನಪಿಸಿರುವ ಸಿಎಜಿಯ ಈ ಮರುವಿಮರ್ಶೆ, ತನ್ನ ವರದಿ ಅಪರೂಪದ ನೈಸರ್ಗಿಕ ಸಂಪನ್ಮೂಲವೊಂದನ್ನು ಅಪಾರದರ್ಶಕವಾಗಿ, ಅನ್ಯಾಯಪೂರ್ವಕವಾಗಿ ಹಂಚಲಾಗಿದೆ ಎಂಬ ಸಂಗತಿಯನ್ನು ಎತ್ತಿ ತೋರಿದ್ದು, ನ್ಯಾಯಾಲಯ ಕೂಡ ನೈಸರ್ಗಿಕ ಸಂಪನ್ಮೂಲಗಳು ಜನತೆಯ ಸಂಪತ್ತು, ಅವುಗಳ ನ್ಯಾಯಪೂರ್ಣ ಹಂಚಿಕೆಯಾಗುವಂತೆ ಒಂದು ಹರಾಜಿನ ವಿಧಾನವನ್ನು ಪ್ರಭುತ್ವ ಅನುಸರಿಸಬೇಕಾಗಿದೆ ಎಂದು ಹೇಳಿರುವುದರತ್ತ



ವೇದರಾಜ ಎನ್.ಕೆ.

ಗಮನ ಸೆಳೆದಿದೆ.

ಈ ನಡುವೆ ಜಂಟಿ ಸಂಸದೀಯ ಸಮಿತಿಯ ಮುಂದೆ ಮಾಜಿ ಟೆಲಿಕಾಂ ಕಾರ್ಯದರ್ಶಿ ಸಿದ್ಧಾರ್ಥ ಬೆಹುರಾರವರ ಹೇಳಿಕೆ ಮಾಜಿ ಟೆಲಿಕಾಂ ಮಂತ್ರಿ ಮತ್ತು ಪ್ರಧಾನ ಮಂತ್ರಿಗಳ ಕಚೇರಿಯನ್ನು ಮತ್ತೊಮ್ಮೆ ಇಕ್ಕಟ್ಟಿಗೆ ಸಿಲುಕಿಸಿದೆ. ತಾನು ಈ ಹುದ್ದೆಗೆ ಬರುವಾಗಲೇ 2ಜಿ ತರಂಗಾಂತರ ಹಂಚಿಕೆಯ ಬಗ್ಗೆ ಎಲ್ಲವೂ ಇತ್ಯರ್ಥವಾಗಿದೆ ಎಂದು ತನಗೆ ಆಗ ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ಹಿರಿಯ ಅಧಿಕಾರಿಯಾಗಿದ್ದವರು, ಈಗ ಪ್ರಧಾನ ಮಂತ್ರಿಗಳ ಪ್ರಮುಖ ಕಾರ್ಯದರ್ಶಿಯಾಗಿರುವವರು ಹೇಳಿದ್ದರು ಎಂದಿರುವ ಬರುವಾ, ಅರ್ಜಿಗಳ ದಿನಾಂಕಗಳ ಆಧಾರದಲ್ಲಿ ಆದ್ಯತೆ ಕೊಡಬೇಕೆಂಬ ವಿಷಯದಲ್ಲಿ ದೂರಸಂಪರ್ಕ ಮಂತ್ರಿಗಳೊಂದಿಗೆ ತನಗೆ ಭಿನಾಭಿಪ್ರಾಯ ಇದೆ ಎಂದು ಒಪ್ಪಿಕೊಂಡಿದ್ದಾರೆ, ಈ ಮೂಲಕ 2ಜಿ ತರಂಗಾಂತರ ಹಂಚಿಕೆಯಲ್ಲಿನ ಕಾನೂನುಬಾಹಿರತೆಯಲ್ಲಿ ತನ್ನ ಪಾತ್ರವೇನೂ ಇಲ್ಲ, ಆಗಿನ ದೂರಸಂಪರ್ಕ ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳ ಕಚೇರಿಯದ್ದೇ ಮುಖ್ಯ ಪಾತ್ರ ಎಂದು ಸೂಚಿಸಿದ್ದಾರೆ.

★

ಕಿರುಸಾಲ ಸಂಸ್ಥೆಗಳು ಮಹಿಳಾ ಕಲ್ಯಾಣಕ್ಕಾಗಿಯೋ ಅಥವ ಮಾರುಕಟ್ಟೆ ಪ್ರೇರಿತವೋ

ಯುಪಿಎ-2 ಸರಕಾರ ಮೇ 22 ರಂದು ಸಂಸತ್ತಿನಲ್ಲಿ ಮಂಡಿಸಿದ ಕಿರುಸಾಲಸಂಸ್ಥೆಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಮಸೂದೆ 2012ನ್ನು ನೋಡಿದರೆ, ಈ ಪ್ರಶ್ನೆ ಸಹಜವಾಗಿ ಏಳುತ್ತದೆ, ಅದು ಮಾರುಕಟ್ಟೆ ಪ್ರೇರಿತ ಎಂದೇ ಮೇಲ್ನೋಟಕ್ಕೆ ಅನಿಸುತ್ತದೆ. ಮಾರುಕಟ್ಟೆ ನಿಯಮಗಳ ಹೆಸರಿನಲ್ಲಿ ಕೆಲವು ವಿಭಾಗಗಳನ್ನು ಹೊರಗೆ ತಳ್ಳಿ ನಂತರ ಅವರನ್ನು ಒಳಗೊಳ್ಳುವ ಬೆಳವಣಿಗೆಯ ಮಾತಾಡುವುದು ನವ-ಉದಾರವಾದದ ಹೂರಣ. ಈ ಮಸೂದೆಯಲ್ಲಿಯೂ ಅದೇ ಕಾಣುತ್ತಿದೆ ಎಂಬುದು ತಜ್ಞರ ಸಂದೇಹ.

ಸಾಲ ನೀಡುವ ಸಂಸ್ಥೆಗಳು ಮಹಿಳೆಯರನ್ನು ಇತರ ದುರ್ಬಲ ವಿಭಾಗಗಳನ್ನು ತಲುಪದೇ ಹೋದುದರಿಂದಲೇ ಕಿರುಸಾಲ ಸಂಸ್ಥೆಗಳು ಹುಟ್ಟಿಕೊಳ್ಳಲು ಪ್ರಧಾನ ಕಾರಣ ಎನ್ನುವ ಈ

ಮಟ 15ಕ್ಕೆ

ಚುನಾವಣೆಗಳಲ್ಲಿ ವಿಪರೀತ ಹಣಬಳಕೆ ಅತಿ ದೊಡ್ಡ ಸಮಸ್ಯೆ : ಚುನಾವಣಾ ಆಯೋಗ

ಚುನಾವಣೆಗಳಲ್ಲಿ ಹಣದ ಬಳಕೆ ವಿಪರೀತವಾಗಿರುವುದು ಒಂದು ದೊಡ್ಡ ಸಮಸ್ಯೆಯಾಗಿದೆ, ಅದು ಚುನಾವಣೆಗಳ ಸಮಯದಲ್ಲಿ ಅಸಮ ಸ್ಪರ್ಧೆಗೆ ಕಾರಣವಾಗುವುದರಿಂದ, ಪ್ರಜಾಪ್ರಭುತ್ವವನ್ನು ಹೊಲಬುಗೆಡಿಸುವುದರಿಂದ ಹಣದ ಪಾತ್ರವನ್ನು ಇಳಿಸುವುದರ ಅಗತ್ಯ ಬಹಳವಿದೆ ಎಂದು ಭಾರತದ ಚುನಾವಣಾ ಆಯೋಗದ ಮಹಾನಿರ್ದೇಶಕ(ಖರ್ಚುಗಳು) ಹೇಳಿದ್ದಾರೆ.

ನಮ್ಮ ರಾಜಕೀಯ ವ್ಯವಸ್ಥೆಯನ್ನು ಅಸ್ಥಿರಗೊಳಿಸಲು ರಾಜಕೀಯ ಪಕ್ಷಗಳಿಗೆ ವಿದೇಶಿ ಹಣ ಹರಿದು ಬರುವ ಅಪಾಯವೂ ಇದೆ ಎಂದ ಅವರು ರಾಜ್ಯಸಭಾ ಚುನಾವಣೆಗಳಲ್ಲಿ ಶಾಸಕರಿಗೆ ಲಂಚ ಕೊಡಲು ಹಣದ ಬಳಕೆ ಮಾಡಲಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಅಹಮದಾಬಾದಿನಲ್ಲಿ 'ರಾಷ್ಟ್ರೀಯ ಚುನಾವಣಾ ಪಹರೆ'(ನ್ಯಾಶನಲ್ ಎಲೆಕ್ಷನ್ ವಾಚ್-ಎನ್‌ಇಡಬ್ಲ್ಯು)ಯ ಗುಜರಾತ ಘಟಕದ ಉದ್ಘಾಟನೆಯ ಸಂದರ್ಭದಲ್ಲಿ ಮಾತನಾಡುತ್ತಾ ಅವರು, ಚುನಾವಣಾ ಆಯೋಗ ಈ ದಿಕ್ಕಿನಲ್ಲಿ ಕೆಲವು ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದರು.

ಜಗದಗಲ

ಶರತ್‌ಚಂದ್ರ

ಪರಾಗುವೇ ಅಧ್ಯಕ್ಷರ ಪದಚ್ಯುತಿ

ದಕ್ಷಿಣ ಅಮೆರಿಕಾದ ಪರಾಗುವೇಯಲ್ಲಿ 2008 ರಲ್ಲಿ ಚುನಾಯಿತರಾದ ಎಡಪಂಥೀಯ ಅಧ್ಯಕ್ಷ ಲುಗೋರನ್ನು 24 ಗಂಟೆಗಳೊಳಗೆ ಅಸಂವೈಧಾನಿಕವಾಗಿ ಪಾರ್ಲಿಮೆಂಟು ಪದಚ್ಯುತಗೊಳಿಸಿದ್ದು ತೀವ್ರ ರಾಜಕೀಯ ಬಿಕ್ಕಟ್ಟು ಉಂಟಾಗಿದೆ. ಜೂನ್ 15 ರಂದು ಕುರುಗವುಟಿ ಎಂಬ ಪ್ರದೇಶದಲ್ಲಿ ಭೂರಹಿತ ರೈತರ ಹೋರಾಟದ ಕ್ಯಾಂಪಿನಲ್ಲಿ ನಡೆದ ನರಮೇಧವನ್ನು ನೆಪವಾಗಿಟ್ಟುಕೊಂಡು ವಿರೋಧ ಪಕ್ಷಗಳು ಈ 'ಪಾರ್ಲಿಮೆಂಟರಿ ಕ್ಷಿಪ್ರಕ್ರಾಂತಿ' ನಡೆಸಿವೆ. ಈ ನರಮೇಧದಲ್ಲಿ ದೊಡ್ಡ ಸಂಖ್ಯೆಯಲ್ಲಿ ರೈತರು ಮತ್ತು ಪೋಲಿಸರು ಸತ್ತಿದ್ದು, ದೊಡ್ಡ ಪ್ರಮಾಣದ ಮಾನವ ಹಕ್ಕುಗಳ ಉಲ್ಲಂಘನೆ ಆಗಿದೆ. ಅದನ್ನೇ ನೆಪ ಮಾಡಿಕೊಂಡು ವಿರೋಧ ಪಕ್ಷಗಳು ಪದಚ್ಯುತಿಯ ಕಾರ್ಯಾಚರಣೆ ಪ್ರಾರಂಭಿಸಿದ್ದವು. ಅಧ್ಯಕ್ಷರ ಪದಚ್ಯುತಿಯ ನಂತರ ಉಪಾಧ್ಯಕ್ಷ ಫ್ರಾಂಕೊ ಅಧಿಕಾರ ವಹಿಸಿಕೊಂಡಿದ್ದಾನೆ. ಸಂವಿಧಾನದ ಪ್ರಕಾರ 2013ರಲ್ಲಿ ಮುಂದಿನ ಚುನಾವಣೆ ಆಗುವವರೆಗೆ ಆತ ಅಧ್ಯಕ್ಷನಾಗಿ ಮುಂದುವರೆಯಬಹುದು.

ಈ ನರಮೇಧವನ್ನು ಈ ಪ್ರದೇಶದ ಒಬ್ಬ ಭಾರೀ ಶ್ರೀಮಂತ ಮತ್ತು ಅವನು ಸೆನೆಟರು ಆಗಿದ್ದ ಕೊಲೆರಾಡೊ ಪಕ್ಷ ಸ್ಥಳೀಯ ಪೋಲೀಸು ಆಡಳಿತಗಳೊಂದಿಗೆ ಶಾಮೀಲಾಗಿ ನಡೆಸಲಾಗಿದೆ. ನರಮೇಧ ನಡೆಸಿದ್ದು ಈ ಶ್ರೀಮಂತನ ಬಾಡಿಗೆ ಬಂಟರು ಎಂಬ ಪ್ರಬಲ ಗುಮಾನಿ ಇದೆ. ಕುರುಗವುಟಿಯಲ್ಲಿ 50 ಸಾವಿರಾರು ಎಕ್ರೆಗಳ ಜಮೀನನ್ನು ಈ ಶ್ರೀಮಂತ 1989ರಲ್ಲಿ ಕೊನೆಯಾದ ಸರ್ವಾಧಿಕಾರಿ ಆಡಳಿತದಲ್ಲಿ ಕಬಳಿಸಿದ್ದ. ಇದು ಕಾನೂನುಬಾಹಿರ ಎಂದು 2008 ರಲ್ಲಿ ರಚಿತವಾದ ಕಮಿಶನ್ ಹೇಳಿತ್ತು. ಈ ಭೂಮಿಯನ್ನು ಭೂಹೀನ ರೈತರಲ್ಲಿ ಹಂಚಬೇಕು ಎಂದೂ ಹೇಳಿತ್ತು. ಈ ತೀರ್ಪನ್ನು ಜಾರಿ ಮಾಡಬೇಕೆಂದು ಕಳೆದ ಕೆಲವು ತಿಂಗಳುಗಳಿಂದ ಭೂರಹಿತ ರೈತರ ಹೋರಾಟ ನಡೆಯುತ್ತಿತ್ತು. ಆ ಜಮೀನಿನ ಬಳಿ ಕ್ಯಾಂಪುಗಳಲ್ಲಿ ಭೂರಹಿತ ರೈತರು ಧರಣಿ ಸತ್ಯಾಗ್ರಹ ಹೂಡಿದ್ದರು. ಭೂಮಿ ಆಕ್ರಮಿಸಬೇಕು ಎಂಬ ಯೋಜನೆ ಸಹ ಭೂರಹಿತ ರೈತರ ಸಂಘಟನೆಗೆ ಇತ್ತು.

2008 ರ ನಂತರ ಅಧಿಕಾರಕ್ಕೆ ಬಂದ ಎಡಪಂಥಿಯ ಅಧ್ಯಕ್ಷರ ಆಡಳಿತದಲ್ಲಿ ಭೂಸುಧಾರಣೆ ಜಾರಿಯ ಗತಿ ತೀವ್ರಗೊಂಡಿತ್ತು. ಇತರ ಸಾಮಾಜಿಕ ಚಳುವಳಿಗಳಿಗೂ ಇತರ ಸಾಮಾಜಿಕ ವಿಷಯಗಳ ಬಗ್ಗೆ ಹಕ್ಕೊತ್ತಾಯಗಳನ್ನು ಮುಂಡಿಸುವ ಜಾರಿಗೊಳಿಸುವ ಅವಕಾಶ ವಿಸ್ತಾರವಾಗುತ್ತಿತ್ತು. ಬಲಪಂಥೀಯ ಶಕ್ತಿಗಳು ಸ್ವಾಭಾವಿಕವಾಗಿಯೇ



ಇದನ್ನು ಸಹಿಸದೆ, ಈ ಆಡಳಿತವನ್ನೇ ಉರುಳಿಸುವ ಸಂಚು ಹೂಡಿದ್ದವು. ಕುರುಗವುಟಿ ನರಮೇಧ, ಆ ಮೇಲಿನ ಅಧ್ಯಕ್ಷರ ಪದಚ್ಯುತಿಯ ಹಿಂದೆ ಸುಸಂಘಟಿತ ಪ್ರಯತ್ನ ಎದ್ದು ಕಾಣುತ್ತಿದೆ. ಕೆಲವು ಪ್ರತಿಗಾಮಿಯಲ್ಲದ ಪಕ್ಷಗಳನ್ನು ಈ ನಾಟಕಕ್ಕೆ ಮೋಸದಲ್ಲಿ ಸೆಳೆಯಲಾಗಿದೆ.

ಆದರೆ 2008 ರ ನಂತರದ ತೀವ್ರ ಪ್ರಜಾಸತ್ತಾತ್ಮಕ ಬದಲಾವಣೆಗಳನ್ನು ಅಳಿಸಲು ಹೊರಟಿರುವ ಅಧ್ಯಕ್ಷರ ಪದಚ್ಯುತಿಗೆ ಪರಾಗುವೇ ಒಳಗೆ ತೀವ್ರ ಪ್ರತಿರೋಧ ವ್ಯಕ್ತವಾಗಿದೆ. ಸಾಮಾಜಿಕ ಚಳುವಳಿಗಳು ಮತ್ತು ಪ್ರಗತಿಪರ ಪಕ್ಷಗಳು ಪಾರ್ಲಿಮೆಂಟಿಗೆ ಮುತ್ತಿಗೆ ಹಾಕಿ ತೀವ್ರವಾಗಿ ಪ್ರತಿಭಟಿಸಿವೆ. ಆದರೆ ಹೊಸ ಅಧ್ಯಕ್ಷರ ಆಡಳಿತ ಸಹ ತೀವ್ರ ದಮನಕಾರಿ ಕ್ರಮಗಳೊಂದಿಗೆ ದಾಳಿ ಮಾಡಿದೆ. ಭೂಹೀನ ಬಡ ರೈತರ ಚಳುವಳಿ ನಡೆಸುತ್ತಿದ್ದ ಸಂಘಟನೆಯ ಕಾರ್ಯಕರ್ತರನ್ನು ಮತ್ತು ಅವರ ಸಂಬಂಧಿಕರನ್ನು ಜೈಲಿಗೆ ತಳ್ಳಿದೆ. ನರಮೇಧದ ನಂತರವೂ ನೂರಾರು ರೈತರು ಕಾರ್ಯಕರ್ತರು 'ಕಾಣೆ'ಯಾಗಿದ್ದಾರೆ.

ಆದರೆ ಲುಗೋ ಪದಚ್ಯುತಿಗೆ ಅಂತರ್ರಾಷ್ಟ್ರೀಯ (ಅದರಲ್ಲೂ ಲ್ಯಾಟಿನ್ ಅಮೆರಿಕದ ದೇಶಗಳ) ಪ್ರತಿಕ್ರಿಯೆ ಫ್ರಾಂಕೋ ಆಡಳಿತಕ್ಕೆ ನುಂಗಲಾರದ ತುತ್ತಾಗಿದೆ. ಹೆಚ್ಚಿನ ಲ್ಯಾಟಿನ್ ಅಮೆರಿಕದ ದೇಶಗಳು ಫ್ರಾಂಕೊ ಸರ್ಕಾರಕ್ಕೆ ಮಾನ್ಯತೆ ಕೊಡಲು ನಿರಾಕರಿಸಿವೆ. ಅರ್ಜೆಂಟಿನಾ ಮತ್ತು ವೆನೆಜುವೇಲಾ ತಮ್ಮ ರಾಯಭಾರಿಯನ್ನು ಅಧಿಕೃತವಾಗಿ ವಾಪಸು ಕರೆಸಿಕೊಂಡಿವೆ. ವೆನೆಜುವೇಲಾ ತೈಲ ಪೂರೈಕೆಯನ್ನು ನಿಲ್ಲಿಸಿದೆ. ಬ್ರೆಜಿಲ್, ಕೊಲಂಬಿಯಾ, ಮೆಕ್ಸಿಕೊ, ಚಿಲಿ, ಉರುಗುವೇ, ಪೆರು ತಮ್ಮ ರಾಯಭಾರಿಗಳನ್ನು ಸಮಾಲೋಚನೆಗೆ ಕರೆಸಿಕೊಂಡಿವೆ. ಮೆರ್ಕೊಸುರ್(ದಕ್ಷಿಣದ ಸಾಮಾನ್ಯ ಮಾರುಕಟ್ಟೆ) ತನ್ನ ಮುಂದಿನ ಶೃಂಗಸಭೆಗೆ ಫ್ರಾಂಕೊ ಸರ್ಕಾರವನ್ನು ಫ್ರಾಂಕೊ. ಸರ್ಕಾರವನ್ನು ಆಹ್ವಾನಿಸಿಲ್ಲ. ಬದಲಿಗೆ ಮಾಜಿ ಅಧ್ಯಕ್ಷ ಲುಗೋ ಅವರನ್ನು ಆಹ್ವಾನಿಸಿದೆ. ಮೆರ್ಕೊಸುರ್ ಕೂಟದಲ್ಲಿ ಅತ್ಯಂತ ಸಣ್ಣ ಮತ್ತು ಆರ್ಥಿಕವಾಗಿ (ಕೂಟದ ಒಟ್ಟು ಉತ್ಪಾದನೆಯ ಕೇವಲ ಶೆ.0.7 ರಷ್ಟು ಮಾತ್ರ) ದುರ್ಬಲ ದೇಶವಾಗಿರುವ ಪರಾಗುವೇ ಮೇಲೆ ಕೂಟ ಆರ್ಥಿಕ ದಿಗ್ಬಂಧನ ವಿಧಿಸಿದರೆ ಪರಾಗುವೇ ಅದನ್ನು ತಾಳಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಮೆರ್ಕೊಸುರ್ ಈ ಕ್ರಮವನ್ನು ತೆಗೆದುಕೊಳ್ಳುವುದೇ ? ಆಂತರಿಕ ಪ್ರತಿರೋಧ ತೀವ್ರವಾಗಿ ಬೆಳೆಯುವುದೇ ಎಂದು ಕಾದು ನೋಡಬೇಕಾಗಿದೆ.

ಸಾಮ್ರಾಜ್ಯಶಾಹಿ ಆಕ್ರಾಮಕತೆ ವಿರುದ್ಧ ಹೋರಾಟಕ್ಕೆ ಕರೆ

ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ 14ನೇ ಅಂತರ್ರಾಷ್ಟ್ರೀಯ ಸಭೆಯನ್ನು ಲೆಬನಾನಿನ ಬೀರುತಿನಲ್ಲಿ ಈ ವರ್ಷ ನವೆಂಬರ್ ಕೊನೆಯಲ್ಲಿ ನಡೆಸಲು ನಿರ್ಧರಿಸಲಾಗಿದೆ. ಈ ಸಭೆಗೆ ತಯಾರಿ ನಡೆಸಲು ಕಾರ್ಯಕಾರಿ ಸಮಿತಿ ಬೀರುತಿನಲ್ಲಿ ಜೂನ್ 16–17 ರಂದು ಸಭೆ ಸೇರಿತ್ತು. ನವೆಂಬರ್ ಸಭೆಯ ವಿಷಯವನ್ನು ಈ ರೀತಿ ನಿರೂಪಿಸಲಾಗಿದೆ.

"ಸಾಮ್ರಾಜ್ಯಶಾಹಿಯ ಹೆಚ್ಚುತ್ತಿರುವ ಆಕ್ರಾಮಕತೆ ವಿರುದ್ಧ ಹೋರಾಟ ತೀವ್ರಗೊಳಿಸಲು; ಜನತೆಯ ಸಾಮಾಜಿಕ, ರಾಜಕೀಯ ಮತ್ತು ಪ್ರಜಾಸತ್ತಾತ್ಮಕ ಆವಶ್ಯಕತೆಗಳನ್ನು ಹಾಗೂ ಆಕಾಂಕ್ಷೆಗಳನ್ನು ಈಡೇರಿಸಲು; ಮತ್ತು ಸಮಾಜವಾದಕ್ಕಾಗಿ"

ಕಾರ್ಯಕಾರಿ ಸಮಿತಿಯಲ್ಲಿ ಬ್ರೆಜಿಲ್, ಕ್ಯೂಬಾ, ದಕ್ಷಿಣ ಆಫ್ರಿಕಾ, ಪೋರ್ಚುಗಲ್, ಗ್ರೀಸ್, ರಶ್ಯಾ, ಲೆಬನಾನ್, ಚೆಕ್, ಸ್ಪೈನ್ ದೇಶಗಳ ಕಮ್ಯುನಿಸ್ಟ್ ಪಕ್ಷಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಭಾರತದಿಂದ ಸಿಪಿಐ(ಎಂ) ಪ್ರತಿನಿಧಿಯಾಗಿ ಸೀತಾರಾಂ ಯೆಚೂರಿ ಭಾಗವಹಿಸಿದ್ದರು. ಸಿಪಿಐ ಮಾತ್ರ ಭಾಗವಹಿಸಿರಲಿಲ್ಲ.

ಬಂಡವಾಳಶಾಹಿ ಬಿಕ್ಕಟ್ಟು ತೀವ್ರವಾಗುತ್ತಿದ್ದಂತೆ ವಿಶ್ವದ ಜನತೆಯ ಮೇಲೆ ಸಾಮ್ರಾಜ್ಯಶಾಹಿಯ ಆಕ್ರಾಮಕತೆ ಸಹ ತೀವ್ರವಾಗುತ್ತಿದೆ. ಚಿಕಾಗೊದ ನಾಟೋ ಕೂಟದ ಸಭೆಯಲ್ಲಿ ಮುಂದಿಟ್ಟಿರುವ ಯೋಜನೆ; ಸುಡಾನಿನ ಒಳಗೆ ವೈಷಮ್ಯಗಳನ್ನು ಹೆಚ್ಚು ಮಾಡುತ್ತಾ ಆಂತರಿಕ ಯುದ್ಧ ಹುಟ್ಟು ಹಾಕುತ್ತಿರುವುದು; ಸಿರಿಯಾ ಮತ್ತು ಇರಾನಿನ ಮೇಲೆ ಬೇರೆ ಬೇರೆ ನೆಪಗಳಲ್ಲಿ ಯುದ್ಧ ಹೂಡಲು ತಯಾರಿ; ಲೆಬನಾನ್ ಜನತೆ ಮೇಲೆ ಇಸ್ರೇಲಿ ಆಕ್ರಮಣದ ಬೆದರಿಕೆ ಇವು ಅರಬ್ ಪಶ್ಚಿಮ ಏಶ್ಯಾ ಮತ್ತು ಉತ್ತರ ಆಫ್ರಿಕಾದಲ್ಲಿ ಸಾಮ್ರಾಜ್ಯಶಾಹಿಯ ಆಕ್ರಾಮಕತೆಗೆ ಕೆಲವು ಉದಾಹರಣೆಗಳು. ಅಲ್ಲಿ, ಏಶ್ಯಾದಲ್ಲಿ ಮತ್ತು ಎಲ್ಲೆಡೆ ಸಾಮ್ರಾಜ್ಯಶಾಹಿ ಹೂಡುತ್ತಿರುವ ಯುದ್ಧಗಳು, ಹೊಸ ಉದಯಿಸುತ್ತಿರುವ ದೇಶಗಳ ಪರವಾಗಿ ಶಕ್ತಿಯ ಬಲಾಬಲ ಬದಲಾಗುವುದನ್ನು ತಡೆಯುವ ಉದ್ದೇಶ ಹೊಂದಿವೆ. ಪ್ರಾಕೃತಿಕ ಸಂಪನ್ಮೂಲಗಳು, ಶಕ್ತಿ ಇಂಧನದ ಮೂಲಗಳು, ಪ್ರಾಕೃತಿಕ ಸಂಪನ್ಮೂಲಗಳು ಮತ್ತು ಸರಕುಗಳಿಗೆ ಮಾರುಕಟ್ಟೆ ಮತ್ತು ಸಾಗಾಣಿಕೆ ಹಾದಿಗಳಲ್ಲಿ ಹೊಸ ಉದಯಿಸುತ್ತಿರುವ ದೇಶಗಳ ಕೈ ಮೇಲಾಗದಂತೆ ತಡೆಯುವುದು ಅದರ ಉದ್ದೇಶ, ಎಂದು ಸಭೆಯ ನಂತರ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಅರಬ್, ಅಮೆರಿಕ, ಯುರೋಪಿನ ದೇಶಗಳಲ್ಲಿ ಜನತೆಯ ಶೋಷಣೆ ತೀವ್ರಗೊಳಿಸುವ ನೀತಿಗಳನ್ನು ಹೊರಿಸುವ ಪ್ರಯತ್ನದ ವಿರುದ್ಧ ಗಮನಾರ್ಹ ಮಹತ್ವಪೂರ್ಣ ಹೋರಾಟಗಳನ್ನು ಹಮ್ಮಿಕೊಳ್ಳಲಾಗಿದೆ. ಬಂಡವಾಳಶಾಹಿಯ ಕೇಂದ್ರಗಳಾದ ಅಮೆರಿಕ ಮತ್ತು ಯುರೋಪುಗಳಲ್ಲಿ ಕಾರ್ಮಿಕ ವರ್ಗ ತೀವ್ರ ಸಂಘರ್ಷಕ್ಕೆ ಇಳಿದಿದ್ದು, ಸರ್ಕಾರಗಳನ್ನು ಕೆಳಗಿಳಿಸುವ ಶಕ್ತಿ ಹೊಂದಿವೆ. ಅವರು ಅರಬ್ ದೇಶಗಳಲ್ಲಿ ಸಾಮ್ರಾಜ್ಯಶಾಹಿಯ ಬೆಂಬಲದೊಂದಿಗೆ ಬದಲಾವಣೆಗೆ ವಿರುದ್ಧವಾದ ಸಂಪ್ರದಾಯವಾದಿಗಳು, ಮಿಲಿಟರಿ ಮತ್ತು ಧಾರ್ಮಿಕ–ರಾಜಕೀಯ ಶಕ್ತಿಗಳ ವಿರುದ್ಧ ಹೋರಾಡುತ್ತಿದ್ದಾರೆ. ಈ ಹೋರಾಟಗಳು ಮತ್ತು ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಾಮ್ರಾಜ್ಯಶಾಹಿಯ

➔

ಜನಶಕ್ತಿ
ಕನ್ನಡ ವಾರಪತ್ರಿಕೆ

ಾರ್ಮಿಕ ವರ್ಗದ ರಾಜ್ಯವ್ಯಾಪಿ ಮುಷ್ಕರ.....

ಟ 10 ರಿಂದ

ಸಿಐಟಿಯು ಮುಖಂಡರಾದ ವಾಸು ಗಟ್ಟಿ, ಾರಪ್ಪ ಬಡಕಬೈಲು, ಜಾನಕಿ, ಶೀನ ಬಂಗೇರ, ೊಂಬಯ್ಯ ಮೂಲ್ಯ, ಬಿ.ನಾರಾಯಣ, ವಿಕಲಾ, ಲಕ್ಷ್ಮೀ ಮತ್ತಿತರರು ಪ್ರತಿಭಟನೆಯಲ್ಲಿ ಾಗವಹಿಸಿದ್ದರು.

ಳ್ತಂಗಡಿ

ಸುಮಾರು ನೂರು ಮಂದಿ ಅಂಗನವಾಡಿ ೌಕರರನ್ನೊಳಗೊಂಡ 700 ಕ್ಕೂ ಮೀರಿದ ಾರ್ಮಿಕರ ಪ್ರತಿಭಟನೆ ಬೆಳ್ತಂಗಡಿ ತಾಲೂಕು ಚೇರಿ ಎದುರು ನಡೆಯಿತು. ಅಧ್ಯಕ್ಷ ಬಿ.ಎಂ.ಭಟ್ ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿದರು. ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ತಾಲೂಕು ಸಮಿತಿ ಕಾರ್ಯದರ್ಶಿ ನೀಲೇಶ್, ಸ್.ಎಂ.ಶಿವಕುಮಾರ್, ಆಟೋ ಸಂಘಟನೆಯ ೇಖರ ಲಾಯಿಲ, ಬೀಡಿ ಸಂಘಟನೆಯ ಯರಾಮ ಮಯ್ಯ, ಈಶ್ವರಿ ಕಟ್ಟಡ ನಿರ್ಮಾಣ ಾರ್ಮಿಕ ಸಂಘಟನೆಯ ವಸಂತ ನಡ, ಅಂಗನವಾಡಿ ಸಂಘಟನೆಯ ಸುಮತಿ ಕುದ್ಯಾಡಿ, ಆಶಾ ಕಾರ್ಯಕರ್ತೆಯರ ಸಂಘಟನೆಯ ಜಿಲ್ಲಾಧ್ಯಕ್ಷೆ ದೇವಕಿ, ಡಿವೈಎಫ್ಐನ ದಾಮೋದರ ಭಟ್, ಎಸ್ಎಫ್ಐನ ಪುಷ್ಪರಾಜ್ ಮತ್ತಿತರರು ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು.

ಸುರಿವ ಮಳೆಯಲ್ಲೇ ಪ್ರತಿಭಟನೆ ನಡೆಸಲಾಯಿತು. ಅದಕ್ಕೂ ಮೊದಲು ಬೆಳ್ತಂಗಡಿ ಮೂರು ಮಾರ್ಗದಿಂದ ತಾಲೂಕು ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆದ ಪ್ರತಿಭಟನೆಯ ವಿವರ

ಮಂಡ್ಯ– 400, **ಬೆಂಗಳೂರ ಜಿಲ್ಲೆ**– ಮೈಸೂರ ಭಾಂಕ ಸರ್ಕಲ್–70 ಜನ, ಕೆ.ಆರ್.ಪುರಂ–100, ಆನೇಕಲ್–200 ಜನ, ಪೀಣ್ಯ–100 ಜನ, ನೆಲಮಂಗಲ– 100 ಜನ, ಕೇಂಗೇರಿ– 100 ಜನ, **ದೊಡ್ಡ ಬಳ್ಳಪುರ**– 100 ಜನ, **ಬಳ್ಳಾರಿ ಜಿಲ್ಲೆ**.– ಹಟ್ಟಿ–210 ಜನ, ಶಿರಗುಂಪ್ಪಿ–180 ಜನ, ಕುರುಗೋಡು– 272 ಜನ, ಹೊಸಪೇಟೆ– 310, ಹ.ಬೋ.ಹಳ್ಳಿ–162 ಜನ, ಕಂಪ್ಲಿ–215, ಹೂವಿನ ಹಡಗಲಿ– 70 ಜನ, **ದಾವಣಗೇರಿ**– 200 ಹರಿಹರ–150 ಜನ, **ಹಾಸನ** –200, ಸಕಲೇಶಪುರ–200, ಚನ್ನರಾಯಪಟ್ಟಣ– 100, ಬೇಲೂರ– 50 **ಕೋಲಾರ** –100, **ಗದಗ–200, ಕೊಪ್ಪಳ**– 550 ಕುಷ್ಠಗಿ– 150, ಯಲಬುರ್ಗ– 200, ಗಂಗಾವತಿ–300, **ಉತ್ತರ ಕನ್ನಡ–ಭಟ್ಕಳ**– 70, ಹೊನ್ನಾವರ–50, ದಾಂಡೇಲಿ–100, **ಕಾರವಾರ**– 150, ಹಳಿಯಾಳ– 250, ಅಂಕೋಲಾ –50, ಮುಂಡಗೋಡ–50 **ಚಿತ್ರದುರ್ಗ**– ಮೊಳಕಾಲ್ಮೂರು–500, ಬಿಡಿ– 100, ಚಳ್ಳಕೇರಿ–200, ಹೊಳಲಕೆರೆ–200, **ಚಾಮರಾಜನಗರ**–50, **ಧಾರವಾಡ–ಹುಬ್ಬಳ್ಳಿ**– 500, **ಬಿಜಾಪುರ**–200, **ಮೈಸೂರು**–100, **ಶಿವಮೊಗ್ಗ**–300, **ತುಮಕೂರ**–200, ತಿಪಟೂರು–200, ತುರುವೆಕೆರೆ–250, ಚಿಕ್ಕನಾಯಕನಹಳ್ಳಿ–80, ಗುಬ್ಬಿ– 150, ಕೊರಟಗೇರಿ–100, ಮಧುಗಿರಿ–150, ಪಾವಗಢ–100, ಶಿರಾ–100, ಕುಣೀಗಲ್–150, **ಉಡುಪಿ–350**, **ಕುಂದಾಪುರ್**–1200,

→

ಆಕ್ರಾಮಕತೆಯ ವಿರುದ್ಧ ಪ್ರತಿರೋಧ ತೀವ್ರಗೊಳಿಸುವ ಉದ್ದೇಶದಿಂದ, ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ 14ನೇ ಅಂತರ್ರಾಷ್ಟ್ರೀಯ ಸಭೆಗೆ ತಯಾರಿ ನಡೆಸಲು ಕಾರ್ಯಕಾರಿ ಸಮಿತಿ ಈ ಮುಂದಿನ ಕ್ರಮಗಳನ್ನು ಕೈಗೊಳ್ಳಲು ಕಾರ್ಮಿಕ ವರ್ಗ ಮತ್ತು ಜನತೆಗೆ ಕರೆ ಕೊಟ್ಟಿದೆ:

ಜಗತ್ತನ್ನು ನಿಯಂತ್ರಿಸಿ ನಿರ್ನಾಮ ಮಾಡಲು ಹೊರಟಿರುವ ಸಾಮ್ರಾಜ್ಯಶಾಹಿಯ ಮಿಲಿಟರಿ ಯೋಜನೆಗಳ ವಿರುದ್ಧ ಹೋರಾಟ; ನಾಟೋ ಮಿಲಿಟರಿ ನೆಲೆಗಳನ್ನು ಕಳಚಲು ಮತ್ತು ಸಾರ್ವಭೌಮತೆ ಹರಣ ಮಾಡುವ ಕ್ರಮಗಳನ್ನು ಹಿಂತೆಗೆಯಲು ಬೃಹತ್ ರ್‍ಯಾಲಿಗಳು; ದಮನಕಾರಿ ಪ್ರತಿಗಾಮಿ ಅರಬ್ ಸರ್ಕಾರಗಳ ವಿರುದ್ಧ ಜನತೆಯ ಹೋರಾಟಗಳಿಗೆ ಸೌಹಾರ್ದ ಬೆಂಬಲ, ಅಲ್ಲಿ ವಿದೇಶೀ ಮಧ್ಯಪ್ರವೇಶಕ್ಕೆ ವಿರೋಧ, ಪ್ಯಾಲೆಸ್ಟೈನ್ ಮತ್ತು ಲೆಬನಾನುಗಳನ್ನು ಕಬಳಿಸುವ ಇಸ್ರೇಲಿ ಯೋಜನೆಗಳಿಗೆ ತೀವ್ರ ಪ್ರತಿರೋಧ.

ಸಿಎಜಿ: ಮೇರೆ ದಾಟಿದೆ .....

ಪುಟ 13 ರಿಂದ

ಮಸೂದೆ ಅವುಗಳ ಕಾರ್ಯನಿರ್ವಹಣೆಗೆ ಒಂದು ಅಧಿಕೃತ ಕಾನೂನಾತ್ಮಕ ಚೌಕಟ್ಟು ಒದಗಿಸುವುದಾಗಿ ಹೇಳುತ್ತದೆ. ಆದರೆ ಹೀಗೆ ಮಾಡುವಾಗಲೇ ಈ ಕಿರುಸಾಲ ಸಂಸ್ಥೆಗಳನ್ನು ಹಣಕಾಸು ಮಾರುಕಟ್ಟೆಗಳೊಂದಿಗೆ ಸಮಗ್ರೀಕರಿಸುವ ಪ್ರಯತ್ನ ನಡೆಸಿದೆ. ಅಂದರೆ ಯುಪಿಎ–2 ತನ್ನ ನವ–ಉದಾರವಾದಿ ಒಲವುಗಳಿಗೆ ಅನುಗುಣವಾಗಿ ಕಿರುಸಾಲ ಸಂಸ್ಥೆಗಳನ್ನೂ ಮಹಿಳಾ ಕಲ್ಯಾಣದ ಸಾಧನವಾಗಿಸುವ ಬದಲು ಮಾರುಕಟ್ಟೆ-ಪ್ರೇರಿತಗೊಳಿಸಲು ಮತ್ತೊಂದು ಪ್ರಯತ್ನ ನಡೆಸಿರುವಂತೆ ಕಾಣುತ್ತದೆ.

ಆದ್ದರಿಂದ ಈ ಕಿರುಸಾಲ ಸಂಸ್ಥೆಗಳು, ಮುಖ್ಯವಾಗಿ ಕಾರ್ಪೊರೇಟ್ ಕಿರುಸಾಲ ಸಂಸ್ಥೆಗಳು ತೊಡಗಿರುವ ಅನಪೇಕ್ಷಣೀಯ, ಅನ್ಯಾಯದ, ಕಿತ್ತುಕೊಳ್ಳುವ ಸ್ವರೂಪದ ಆಚರಣೆಗಳ ಪ್ರಸ್ತಾಪವೇ ಈ ಮಸೂದೆಯಲ್ಲಿ ಕಾಣಿಸುತ್ತಿಲ್ಲ. ಮಹಿಳಾ ಸಾಲಗಾರರನ್ನು ಆತ್ಮಹತ್ಯೆಯವರೆಗೂ ತಳ್ಳುವ ಬವಣೆಗಳನ್ನು ಈ ಮಸೂದೆ ಪರಿಶೀಲಿಸುವುದೇ ಇಲ್ಲ, ಕಾರ್ಪೊರೇಟ್ ಕಿರುಸಾಲ ಸಂಸ್ಥೆಗಳ ಚಟುವಟಿಕೆಗಳಿಗೆ ಕಾನೂನುಬದ್ಧತೆ ಒದಗಿಸುವುದು , ಸಣ್ಣಸಾಲಗಾರರನ್ನು ಮಾರುಕಟ್ಟೆಯ ಭಾಗವಾಗಿಸುವುದು ಇದರ ಮುಖ್ಯ ಉದ್ದೇಶವಾಗಿರುವಂತೆ ಕಾಣುತ್ತಿದೆಯಾದ್ದರಿಂದ ಮಹಿಳಾ ಸಂಘಟನೆಗಳು ಈ ಮಸೂದೆಯ ಕೂಲಂಕುಷ ವಿಶ್ಲೇಷಣೆ ನಡೆಸಿ, ಅದು ಮಹಿಳೆಯರ ವಿಶಿಷ್ಟ ಪ್ರಶ್ನೆಗಳನ್ನು ಒಳಗೊಳ್ಳುವಂತೆ ಪರಿಷ್ಕರಿಸುವಂತೆ ಒತ್ತಡ ತರಬೇಕು ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ.

★

ಮಹಿಳಾ ಎಂಪಿಗಳ ಸಂಖ್ಯೆ

ಜಾಗತಿಕ ಹೆಚ್ಚಳ, ಭಾರತದಲ್ಲಿ ಮಾತ್ರ ಇಲ್ಲ

ವಿಶ್ವ ಸಂಸ್ಥೆಯ ಶತಮಾನದ ಅಭಿವೃದ್ಧಿ ಗುರಿಗಳ 2012ರ ವರದಿಯ ಪ್ರಕಾರ 1995ರಿಂದ 2012ರ ನಡುವೆ ಸಂಸತ್ತುಗಳಲ್ಲಿ ಮಹಿಳಾ ಪ್ರತಿನಿಧಿಗಳ ಸಂಖ್ಯೆಯಲ್ಲಿ 75ಶೇ. ಹೆಚ್ಚಳವಾಗಿದೆ, 11.3ಶೇ. ಇದ್ದದ್ದು 19.7ಶೇ. ಆಗಿದೆ. ಆದರೆ ಭಾರತದಲ್ಲಿ 9.7 ಶೇ.ದಿಂದ 10.96ಶೇ. ಮಾತ್ರ ಹೆಚ್ಚಿದೆ. 15 ಸಾರ್ವತ್ರಿಕ ಚುನಾವಣೆಗಳನ್ನು ಕಂಡ, ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ಎಂದು ಬೆನ್ನು ತಟ್ಟಿಕೊಳ್ಳುವ ಭಾರತ ಸಂಸತ್ತುಗಳಲ್ಲಿ ಮಹಿಳಾ ಪ್ರಾತಿನಿಧ್ಯದ ವಿಷಯದಲ್ಲಿ 98ನೇ ಸ್ಥಾನದಲ್ಲಿದೆ ಎಂದು ಅಂತರ–ಸಂಸದೀಯ ಸಂಘ(ಐಪಿಯು) ಮಾಹಿತಿ ತಿಳಿಸುತ್ತದೆ.

2011ರಲ್ಲಿ 59 ದೇಶಗಳಲ್ಲಿ ಸಂಸದೀಯ ಚುನಾವಣೆಗಳು ನಡೆದಿವೆ. ಇವುಗಳಲ್ಲಿ 26 ದೇಶಗಳಲ್ಲಿ ಮಹಿಳೆಯರಿಗೆ ವಿಶೇಷ ಕ್ರಮಗಳನ್ನು ಅನುಸರಿಸಲಾಗಿದೆ, 17 ದೇಶಗಳಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಕೋಟಾ ನಿಗದಿ ಮಾಡಲಾಗಿತ್ತು. ಹೀಗೆ ನಗದಿ ಮಾಡಿದ ದೇಶಗಳಲ್ಲಿ ಮಹಿಳಾ ಪ್ರಾತಿನಿಧ್ಯ ಗಮನಾರ್ಹವಾಗಿ ಹೆಚ್ಚಿದೆ, 27.4ಶೇ. ತಲುಪಿದೆ; ಇಂತಹ ಕೋಟಾಗಳು ಇಲ್ಲದಲ್ಲಿ ಅದು 15.7ಶೇ. ಮಾತ್ರ ತಲುಪಿದೆ. ಭಾರತದಲ್ಲಿನ ಪ್ರಮಾಣ ಇನ್ನೂ ಬಹಳ ಕಡಿಮೆ, ಕೇವಲ 10.96ಶೇ. ಎಂಬುದನ್ನು ಇಲ್ಲಿ ಹೋಲಿಸಿ ನೋಡಬಹುದು.

ಕಳೆದ ಏಳು ವರ್ಷಗಳಲ್ಲಿ ಮಹಿಳೆಯರನ್ನು ಪ್ರಭುತ್ವದ ಅಥವ ಸರಕಾರದ ಮುಖ್ಯಸ್ಥರಾಗಿ ಹೊಂದಿರುವ ದೇಶಗಳ ಸಂಖ್ಯೆ ದ್ವಿಗುಣಗೊಂಡರೂ ಅದರ ಸಂಖ್ಯೆ ಮಾತ್ರ ಇನ್ನೂ ಕೇವಲ 17. ವಿಶ್ವಾದ್ಯಂತ ಮಹಿಳಾ ಮಂತ್ರಿಗಳ ಸಂಖ್ಯೆಯಲ್ಲಿಯೂ ಹೆಚ್ಚಳ ಅಲ್ಪವೇ, 14.2ಶೇ.ದಿಂದ 16.7ಶೇ.

ಮಿಸ್ಟರ್ ಪಿ.ಸಿ. ಯಾವ ಐಸ್‌ಕ್ರೀಮ್‌ನ ಬಗ್ಗೆ ಮಾತಾಡುತ್ತಿದ್ದಾರೆ?

ಪುಟ13 ರಿಂದ

ನಿರ್ಮಿಸುತ್ತಿತ್ತು, ಇದರ ಪರಿಣಾಮವಾಗಿ ಆಂತರಿಕ ಬೇಡಿಕೆ ಬೆಳೆದು, ಭಾರತದ ಆರ್ಥಿಕ ಎಲ್ಲರನ್ನೂ ಹೆಚ್ಚಿನ ಪ್ರಮಾಣದಲ್ಲಿ ಒಳಗೊಳ್ಳಬಹುದಾದ ಬೆಳವಣಿಗೆಯ ದಿಕ್ಪಥದಲ್ಲಿ ಸಾಗಲು ಸಾಧ್ಯವಾಗುತ್ತಿತ್ತು.

ತದ್ವಿರುದ್ಧವಾಗಿ, ಯುಪಿಎ–2 ಸರಕಾರ ತನ್ನ ಅಜೆಂಡಾದ ಗೀಳನ್ನೇ ಹಚ್ಚಿಕೊಂಡು ಹಣಕಾಸು ಉದಾರೀಕರಣದ ಮತ್ತಷ್ಟು ಸುಧಾರಣೆ(!)ಗಳಿಗೇ ಒತ್ತು ನೀಡುತ್ತಿದೆ. ಇದು ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಬಂಡವಾಳಕ್ಕೆ ಹೆಚ್ಚಿನ ಮಟ್ಟದ ಲಾಭಗಳನ್ನೇನೋ ಉತ್ಪತ್ತಿ ಮಾಡಬಹುದು, ಆದರೆ ಜನಗಳ ಮೇಲೆ ಮಾತ್ರ ಇನ್ನಷ್ಟು ಹೊರೆಗಳನ್ನು ಹೇರುತ್ತದಷ್ಟೇ.

ಎಲ್ಲ ಭಾರತೀಯರಿಗೆ ಆಹಾರ ಭದ್ರತೆ ಒದಗಿಸಬೇಕಾದರೆ, ಅದು ಎಪಿಎಲ್–ಬಿಪಿಎಲ್ ವ್ಯತ್ಯಾಸವಿಲ್ಲದೆ ದೇಶದ ಪ್ರತಿಯೊಂದು ಕುಟುಂಬಕ್ಕೆ ಪ್ರತಿ ತಿಂಗಳು ಕೆ.ಜಿ.ಗೆ 2 ರೂ.ದರದಲ್ಲಿ 35 ಕೆ.ಜಿ.ಅಕ್ಕಿ ಒದಗಿಸುವ ಮೂಲಕ ಮಾತ್ರವೇ ಸಾಧ್ಯ. ಇದಕ್ಕೆ ಸಂಪನ್ಮೂಲಗಳ ಕೊರತೆಯೇನಿಲ್ಲ. ನಿಜಸಂಗತಿಯೆಂದರೆ, ಈ ಯುಪಿಎ–2 ಸರಕಾರದಲ್ಲಿ ರಾಜಕೀಯ ಇಚ್ಛಾಶಕ್ತಿಯ ಸಂಪೂರ್ಣ ಕೊರತೆಯಿದೆ. ಅದು 'ಹೊಳೆಯುತ್ತಿರುವ ಭಾರತ'ವನ್ನು ಮಾತ್ರ ಪೋಷಿಸಬಯಸುತ್ತದೆ; ಅದರ ಹೊಳಪು 'ನರಳುತ್ತಿರುವ ಭಾರತ'ದ ಸಂಕಟಗಳ ಅನುಪಾತದಲ್ಲಿ ಹೆಚ್ಚುತ್ತಿದೆ.

ಈ ಸರಕಾರ ತನ್ನ ಆರ್ಥಿಕ ಧೋರಣೆಗಳ ದಿಕ್ಪಥವನ್ನು ಬದಲಿಸಲು ಹೆಚ್ಚೆಚ್ಚು ಪ್ರಮಾಣದಲ್ಲಿ ಜನತೆಯನ್ನು ಅಣಿನೆರೆಸುವ ಮೂಲಕ ಬಲವಾದ ಸಾರ್ವಜನಿಕ ಒತ್ತಡಗಳನ್ನು ಹಾಕಿದರೆ ಮಾತ್ರವೇ ನಮ್ಮ ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸಲು ಸಾಧ್ಯ.

ದುಡಿಯುವ ಜನರ ಬೆವರಿನ ಹಕ್ಕು ಕೇಳಿ ರಾಜ್ಯದ ನಾನಾ ಕಡೆ ವೈವಿಧ್ಯಮಯ ಪ್ರತಿಭಟನೆಗಳು





ಕುಂದಾಪುರದಲ್ಲಿ ಕಾರ್ಮಿಕ ವರ್ಗದ ಪ್ರತಿಭಟನೆ ಜುಲೈ 8, 2012



ಭೂ ಸುಧಾರಣಾ ಕಾಯ್ದೆಗೆ ಪ್ರಗತಿ ವಿರೋಧಿ ತಿದ್ದುಪಡಿ ವಿರೋಧಿಸಿ ತುಮಕೂರಿನಲ್ಲಿ ಪ್ರತಿಭಟನೆ





ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ವಿಜಾಪುರ (CITU)
"ರಾಜ್ಯದ ಕಾರ್ಮಿಕರನ್ನು ನಿರ್ಲಕ್ಷ ಮಾಡುತ್ತಾ ಶ್ರೀಮಂತ ಬಂಡವಾಳಗಾರರ ಸೇವೆಯಲ್ಲಿ ತೊಡಗಿರುವ ಸರಕಾರದ ಧೋರಣೆ ವಿರೋಧಿಸಿ ಬೃಹತ್ ಪ್ರತಿಭಟನ ರ್‍ಯಾಲಿ"



ಕರ್ಜಗಿ ಗ್ರಾಮದಲ್ಲಿ 35 ವರ್ಷಗಳಿಂದ ಸರ್ಕಾರಿ ಜಾಗೆಯಲ್ಲಿ ಗುಡಿಸಲು ಕಟ್ಟಿಕೊಂಡಿರುವವರಿಗೆ ಹಕ್ಕು ಪತ್ರ ನೀಡಲು ಆಗ್ರಹಿಸಿ ಧರಣಿ ನಿರತ ಮಹಿಳೆಯರು

ಹಕ್ಕು ಪತ್ರ ನೀಡಲು ಆಗ್ರಹಿಸಿ ಮನವಿ ಪತ್ರ ಸಲ್ಲಿಸುತ್ತಿರುವುದು.



JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH